Editor: NITYANANDASWAMI Publisher: U. BASAVARAJA

RNI No. KARKAN/2006/17926

ಜನಶಕ್ತಿ ಕನ್ನಡ ವಾರ ಪತ್ರಿಕೆ

ದುಡಿಯುವ ಜನರ ಪ್ರಾಣಮಿತ್ರ

JANASHAKTHI KANNADA VARA PATRIKE

ಸಂಪುಟ 16 | ಸಂಚಿಕೆ 31 | ಜುಲೈ 25–31, 2022 | ಪುಟ 16 | ರೂ.10/-

Volume: 16 Issue: 31 JULY 25-31, 2022 Pages: 16 Price: 10/-

https://janashakthi.wordpress.com e-mail : js_weekly@yahoo.com



ಮೊಸರು, ಮಜ್ಜಿಗೆಗೂ ಜಿ.ಎಸ್.ಟಿ: ಮಿತಿಯೇ ಇಲ್ಲದ ಲೂಟಿ!



ಹುಟ್ಟು ಹಬ್ಬವೋ, ವ್ಯಕ್ತಿ ವಿಜೃಂಬಣೆಯೋ?! ಬಿಜೆಪಿ ಹಚ್ಚಿದ ಕಿಚ್ಚಿನಲ್ಲಿ ಬೇಯುತ್ತಿರುವ ವಿರೋಧ ಪಕ್ಷಗಳು



ಚುನಾವಣಾ ಸಿದ್ಧತೆ ಜಾತಿ ಮಠಗಳ ಓಲೈಕೆಯಲ್ಲಿ ಆರೆಸ್ಸೆಸ್ ಬಿಜೆಪಿ ನಾಯಕರು

ಜನ ಚಳುವಳಿಯ ಒಡನಾಡಿ ಜಿ. ರಾಜಶೇಖರ





ಝೀ ವಾಹಿನಿಯಲ್ಲಿ ಅಂತರ್ ಕಲಹ ಮತ್ತೊಂದು ಕೂಗುಮಾರಿ ವಾಹಿನಿಗೆ ಹಾದಿ



ಬಿಸಿಯೂಟದೊಂದಿಗೆ ಬೇಯಿಸಿದ ಮೊಟ್ಟೆ ಸ್ವಾಗತಾರ್ಹ ತೀರ್ಮಾನ

ಇತ್ತೀಚಿನ ಈ ಸುತ್ತಿನಲ್ಲಿ ಮೊದಲೇ ಪ್ಯಾಕ್ ಮಾಡಿದ ಅಕ್ಕಿ, ಗೋಧಿ, ಹಾಲು ಮುಂತಾದ ಅಗತ್ಯವಸ್ತುಗಳ ಮೇಲೆ ಜಿಎಸ್‌ಟಿ ದರಗಳನ್ನು ಏರಿಸಿರುವುದನ್ನು ಬಲವಾಗಿ ಖಂಡಿಸಿರುವ ಪೊಲಿಟ್‌ಬ್ಯೂರೋ ಈ ಏರಿಕೆಗಳನ್ನು ಕೂಡಲೇ ಹಿಂಪಡೆಯಬೇಕು ಎಂದು ಆಗ್ರಹಿಸಿದೆ.

ಜಿಎಸ್‌ಟಿ ಹೆಚ್ಚಿಸಲಾದ ವಸ್ತುಗಳ ಶ್ರೇಣಿಯಲ್ಲಿ ಸ್ಮಶಾನದ ಶುಲ್ಕಗಳು, ಆಸ್ಪತ್ರೆಯ ಕೊಠಡಿಗಳು, ಬರವಣಿಗೆಯ ಶಾಯಿ ಇತ್ಯಾದಿಗಳು ಕೂಡ ಸೇರಿವೆ. ಸ್ವಂತ ಉಳಿತಾಯವನ್ನು ತಮ್ಮ ಬ್ಯಾಂಕ್ ಖಾತೆಯಿಂದ ಹಿಂಪಡೆಯಲು ಸಹ ಜನರು ಬ್ಯಾಂಕ್ ಚೆಕ್‌ಗಳ ಮೇಲೆ 18 ಶೇಕಡಾ ಜಿಎಸ್‌ಟಿ ತೆರಬೇಕಾಗುತ್ತದೆ.

ಗ್ರಾಹಕರ ಹಣದುಬ್ಬರ ಸೂಚ್ಯಂಕ ಶೇ.7ಕ್ಕಿಂತ ಹೆಚ್ಚು ಮತ್ತು ಸಗಟು ಹಣದುಬ್ಬರ ಶೇ.15 ಕ್ಕಿಂತ ಹೆಚ್ಚಿರುವಂತೆ ಮಾಡಿರುವ ವಿಪರೀತ ಬೆಲೆ ಏರಿಕೆ, ಗಗನಕ್ಕೇರುತ್ತಿರುವ ನಿರುದ್ಯೋಗ, ಕೆಳಕ್ಕೆ ಉರುಳುತ್ತಿರುವ ರೂಪಾಯಿ, ಅಭೂತಪೂರ್ವ ವ್ಯಾಪಾರ ಕೊರತೆ ಮತ್ತು ಜಿಡಿಪಿ ಮುಗ್ಗರಿಸುತ್ತಿರುವ ಸನ್ನಿವೇಶದಲ್ಲಿ ಜನರ ಜೀವನೋಪಾಯದ ಮೇಲೆ ಈ ಕ್ರೂರ ಪ್ರಹಾರ ನಡೆಸಲಾಗಿದೆ. ಈ ಏರಿಕೆಗಳು ಜನರ ಜೀವನೋಪಾಯವನ್ನು ಮತ್ತಷ್ಟು ಹಾಳು ಮಾಡುತ್ತವೆ.

ಮೋದಿ ಸರಕಾರದ ಅಮೃತ ಮಹೋತ್ಸವ 'ಉಡುಗೊರೆ'

ತಿನ್ನೋ ಅನ್ನ ದುಬಾರಿ ಶೋಕಿ ಉತ್ಪನ್ನ ಅಗ್ಗ...!

ದೇಶ ಸ್ವತಂತ್ರ ಗಳಿಸಿದಾಗ ಆಹಾರ ಪದಾರ್ಥಗಳ ಮೇಲೆ ಬ್ರಿಟಿಷ್ ಸರ್ಕಾರ ವಿಧಿಸುತ್ತಿದ್ದ ತೆರಿಗೆ ನೀತಿಯನ್ನು ಕೈಬಿಟ್ಟಿತು. ಅಂದಿನಿಂದಲೂ ಅಕ್ಕಿ, ಗೋಧಿ, ಬೇಳೆಕಾಳುಗಳು ಮುಂತಾದ ಆಹಾರ ಪದಾರ್ಥಗಳು, ಮೊಸರು, ಪನೀರ್, ಮಾಂಸ, ಮೀನು, ಬೆಲ್ಲದಂತಹ ದೈನಂದಿನ ಅಗತ್ಯ ಉತ್ಪನ್ನಗಳಿಗೆ ಎಂದೂ ತೆರಿಗೆ ವಿಧಿಸಿಲ್ಲ. ಆದರೆ ಈಗ ಎಲ್ಲಾ ಅಗತ್ಯ ವಸ್ತುಗಳ ಮೇಲೆ ಜಿಎಸ್‌ಟಿ ಹೆಚ್ಚಳದ ಮೂಲಕ ಜನರ ಮೇಲೆ ಮತ್ತೊಂದು ಸುತ್ತಿನ ಹೊರೆ ಹೇರಿದೆ. 'ಆಜಾದಿ ಕಾ ಅಮೃತ್ ಮಹೋತ್ಸವ'ದ ವರ್ಷದಲ್ಲಿ ಭಾರತೀಯ ಜನತೆಗೆ ಮೋದಿ ಸರ್ಕಾರದ 'ಉಡುಗೊರೆ' ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಹೇಳಿದೆ.

ಮೋದಿ ಸರ್ಕಾರ ತನ್ನ ಆದಾಯ ಹೆಚ್ಚಿಸಲು, ಅತಿ ಶ್ರೀಮಂತರ ಮೇಲೆ ತೆರಿಗೆ ವಿಧಿಸಬೇಕೇ ವಿನಹ ಜನರ ಮೇಲೆ ಹೆಚ್ಚಿನ ಹೊರೆಗಳನ್ನು ಹೇರಬಾರದು. ಭಾರತ ವಿಶ್ವದಲ್ಲಿ ಎಲ್ಲರಿಗಿಂತ ವೇಗವಾಗಿ ಬೆಳೆಯುತ್ತಿರುವ ಬಿಲಿಯಾಧಿಪತಿಗಳನ್ನು ಹೊಂದಿರುವುದಲ್ಲದೆ, ಬಾಂಬೆ ಸ್ಟಾಕ್ ಎಕ್ಸ್‌ಚೇಂಜ್‌ನಲ್ಲಿ ಪಟ್ಟಿ ಮಾಡಲಾದ ಕಂಪನಿಗಳು 2021-22 ರಲ್ಲಿ ಸಾಮೂಹಿಕವಾಗಿ ರೂ 9.3 ಲಕ್ಷ ಕೋಟಿಗಳ ಲಾಭ ವರದಿ ಮಾಡಿವೆ. ಅಂದರೆ, ಹಿಂದಿನ ವರ್ಷಕ್ಕಿಂತ ಶೇ.70 ಹೆಚ್ಚು ಮತ್ತು 2010-2020ರ ದಶಕದಲ್ಲಿ ಗಳಿಸಿದ ಸರಾಸರಿಗಿಂತ ಮೂರು ಪಟ್ಟು ಹೆಚ್ಚು ಲಾಭ ಗಳಿಸಿವೆ. ಈ ಮಹಾ ಶ್ರೀಮಂತರ ಮೇಲೆ ತೆರಿಗೆ ವಿಧಿಸುವ ಬದಲು ಮೋದಿ ಸರ್ಕಾರ ಅವರಿಗೆ ಮತ್ತಷ್ಟು ತೆರಿಗೆ ರಿಯಾಯಿತಿಗಳನ್ನು ಮತ್ತು ಸಾಲ ಮನ್ನಾ ನೀಡುತ್ತಿದೆ. ಭಾರೀ ತೆರಿಗೆ ವಿಧಿಸಬೇಕಾಗಿದ್ದ ಹಲವು ಐಷಾರಾಮಿ ಸರಕುಗಳು ಸಾಧಾರಣ ಜಿಎಸ್‌ಟಿಯನ್ನು ಹೊಂದಿವೆ. **ಚಿನ್ನ ಖರೀದಿಗೆ ಶೇ.3, ವಜ್ರಕ್ಕೆ ಶೇ.1.5 ತೆರಿಗೆ ವಿಧಿಸಲಾಗಿದ್ದರೆ, ಆಹಾರ ಪದಾರ್ಥಗಳಿಗೆ ಶೇ.5 ಅಥವಾ ಅದಕ್ಕಿಂತ ಹೆಚ್ಚಿನ ಜಿಎಸ್‌ಟಿ ಇದೆ.**

ಈ ಏರಿಕೆಗಳ ವಿರುದ್ಧ ಯಾವುದೇ ವಿರೋಧ ಬಂದಿಲ್ಲ ಎಂಬ ಮೋದಿ ಸರ್ಕಾರದ ಹೇಳಿಕೆ ಹಸಿ ಸುಳ್ಳು. ಕೇರಳ ಮುಖ್ಯಮಂತ್ರಿ ತಮ್ಮ ರಾಜ್ಯ ಸರ್ಕಾರದ ತೀವ್ರ ಆಕ್ಷೇಪವನ್ನು ವ್ಯಕ್ತಪಡಿಸಿ ಪ್ರಧಾನ ಮಂತ್ರಿಗಳಿಗೆ ಪತ್ರ ಬರೆದಿದ್ದಾರೆ, ನವೆಂಬರ್ 2021 ರಷ್ಟು ಹಿಂದೆಯೇ ಈ ಪ್ರಸ್ತಾಪಗಳನ್ನು ಮೊದಲು ಮುಂದಿಟ್ಟಾಗ ರಾಜ್ಯ ಹಣಕಾಸು ಸಚಿವರು ಇದು ಸಮ್ಮತವಲ್ಲ ಎಂದು ತಿಳಿಸಿದ್ದರು ಎಂಬುದನ್ನು ನೆನಪಿಸಿದ್ದಾರೆ ಎಂದಿರುವ ಸಿಪಿಐ(ಎಂ) ಪೊಲಿಟ್‌ಬ್ಯುರೊ ಜನರ ಜೀವನದ ಮೇಲಿನ ಈ ಕ್ರೂರ ದಾಳಿಯ ವಿರುದ್ಧ ವಿಶಾಲ ತಳಹದಿಯ ಪ್ರತಿಭಟನಾ ಕ್ರಮಗಳನ್ನು ಸಂಘಟಿಸಲು ಪಕ್ಷದ ಎಲ್ಲಾ ಘಟಕಗಳಿಗೆ ಕರೆ ನೀಡಿದೆ.

ಸಣ್ಣ ಅಂಗಡಿಗಳಲ್ಲಿ ಚಿಲ್ಲರೆ ಮಾರಾಟಗಳಿಗೆ ತೆರಿಗೆ ವಿಧಿಸುವುದಿಲ್ಲ

ಕೇರಳ ಎಲ್‌ಡಿಎಫ್ ಹಣಕಾಸು ಸಚಿವರು

ಅಗತ್ಯ ವಸ್ತುಗಳ ಮೇಲೆ ಜಿಎಸ್‌ಟಿ ಹೇರಿಕೆಗೆ ಸಂಬಂಧಿಸಿದಂತೆ ಹೆಚ್ಚುತ್ತಿರುವ ಪ್ರತಿಭಟನೆಯ ನಡುವೆ, ಕುಟುಂಬಶ್ರೀ ಅಥವಾ ಸಣ್ಣ ಅಂಗಡಿಗಳಂತಹ ಘಟಕಗಳು 1 ಅಥವಾ 2 ಕೆಜಿ ಪ್ಯಾಕೆಟ್‌ಗಳಲ್ಲಿ ಚಿಲ್ಲರೆ ಮಾರಾಟ ಮಾಡುವ ವಸ್ತುಗಳಿಗೆ ತೆರಿಗೆ ವಿಧಿಸಲು ಉದ್ದೇಶ ಕೇರಳ ಸರ್ಕಾರಕ್ಕಿಲ್ಲ ಎಂದು ರಾಜ್ಯ ಹಣಕಾಸು ಸಚಿವ ಕೆ ಎನ್ ಬಾಲಗೋಪಾಲ್ ಹೇಳಿದ್ದಾರೆ. ಇದರಿಂದ ಕೇಂದ್ರ ಸರ್ಕಾರದೊಂದಿಗೆ ತಗಾದೆಗಳು ಉಂಟಾಗಬಹುದು. ಆದರೂ ಕೇರಳ ಈ ವಿಷಯದಲ್ಲಿ ರಾಜಿ ಮಾಡಿಕೊಳ್ಳಲು ಸಿದ್ಧವಾಗಿಲ್ಲ ಎಂದು ಅವರು ಕೇರಳ ವಿಧಾನಸಭೆಗೆ ತಿಳಿಸಿದರು.

ನಾವು ಇದನ್ನು ಈಗಾಗಲೇ ಅಲ್ಲಿ ಹೇಳಿದ್ದೇವೆ. ರಾಜ್ಯ ಸರ್ಕಾರ ತನ್ನ ನಿಲುವಿನ ಬಗ್ಗೆ ಈಗಾಗಲೇ ಕೇಂದ್ರಕ್ಕೆ ಪತ್ರ ಬರೆದಿದೆ ಎಂದ ಬಾಲಗೋಪಾಲ್ "ನಿನ್ನೆಯೂ ಸಹ, ಈ ವಿಷಯಗಳ ಬಗ್ಗೆ ಮುಖ್ಯಮಂತ್ರಿಗಳು ಅವರಿಗೆ ಪತ್ರ ಬರೆದಿದ್ದಾರೆ. ನಾವು ಅದನ್ನು ಸಣ್ಣ ಪ್ರಮಾಣದ ವ್ಯಾಪಾರಿಗಳು ಮತ್ತು ಸಣ್ಣ ಅಂಗಡಿಗಳ ಮೇಲೆ ವಿಧಿಸುವ ಆಶಯ ಹೊಂದಿಲ್ಲ. ಈ ಬಗ್ಗೆ ಯಾವುದೇ ತರ್ಕ ಸಾಧ್ಯವಿಲ್ಲ" ಎಂದು ಜುಲೈ 20ರಂದು ವಿಧಾನಸಭೆಗೆ ತಿಳಿಸಿದರು..

ಕೇರಳ ಸರ್ಕಾರದ ಕುಟುಂಬಶ್ರೀ ಎಂಬ ಹೆಸರಿನ ಮಹಿಳಾ ಸ್ವ-ಸಹಾಯ ಗುಂಪು, ದೇಶದ ಅತಿದೊಡ್ಡ ಮಹಿಳಾ ಸಬಲೀಕರಣ ಯೋಜನೆಗಳಲ್ಲಿ ಒಂದಾಗಿದೆ. ಇದು ಸಣ್ಣ-ಪ್ರಮಾಣದ ಆಹಾರ ಸಂಸ್ಕರಣಾ ಘಟಕಗಳು, ಮತ್ತಿತರ ಸಣ್ಣ ಉದ್ಯಮಗಳನ್ನು ನಡೆಸುತ್ತಿದೆ.

ಬ್ರಾಂಡೆಡ್ ಕಂಪನಿಗಳು ಪ್ಯಾಕೇಜ್ ಮಾಡಿದ ಉತ್ಪನ್ನಗಳ ಮೇಲೆ ಶೇಕಡಾ 5 ರಷ್ಟು ತೆರಿಗೆಯನ್ನು ಪಾವತಿಸಬೇಕಾಗುತ್ತದೆ, ಆದರೆ ಅವರು "ಬ್ರಾಂಡ್ ದಾವೆ ಮಾಡುತ್ತಿಲ್ಲ" ಎಂದು ಪ್ಯಾಕೇಜಿಂಗ್‌ನಲ್ಲಿ ನಮೂದಿಸಿದರೆ ಅದಕ್ಕೆ ತೆರಿಗೆ ವಿಧಿಸಲಾಗುವುದಿಲ್ಲ ಎಂದು ಬಾಲಗೋಪಾಲ್ ಹೇಳಿದರು.

"ಆದ್ದರಿಂದ ಅವರು (ಕೇಂದ್ರ) ಅಂತಹ ಕಂಪನಿಗಳನ್ನು ಹಿಡಿಯಲು ನಿಯಮವನ್ನು ತಂದಿದ್ದಾರೆ ... ಆದರೆ ಈ ಬಗ್ಗೆ ಇನ್ನೂ ಕೆಲವು ಗೊಂದಲಗಳಿವೆ" ಎಂದು ಅವರು ಹೇಳಿದರು.

ಅಗತ್ಯ ವಸ್ತುಗಳ ಮೇಲೆ ಜಿಎಸ್‌ಟಿ ಹೇರುವ ಕ್ರಮವು ಸಾಮಾನ್ಯ ಜನರ ಮೇಲೆ ತೀವ್ರ ಪರಿಣಾಮ ಬೀರಲಿದೆಯಾದ್ದರಿಂದ, ಈ ವಿಚಾರದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ತುರ್ತು ಮಧ್ಯಸ್ಥಿಕೆ ವಹಿಸಬೇಕೆಂದು ಕೇರಳ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಪ್ರಧಾನಿಗಳನ್ನು ಕೋರಿದ್ದಾರೆ..

ಅನೇಕ ಸಣ್ಣ ವ್ಯಾಪಾರಿಗಳು ಮತ್ತು ಗಿರಣಿದಾರರು ವಸ್ತುಗಳನ್ನು ಮೊದಲೇ ಪ್ಯಾಕ್ ಮಾಡಿ ಮಾರಾಟಕ್ಕೆ ಸಿದ್ಧವಾಗಿ ಇರಿಸುತ್ತಾರೆ, ಇದರಿಂದಾಗಿ ಗ್ರಾಹಕರು ವಸ್ತುಗಳನ್ನು ತೂಕ ಮತ್ತು ಪ್ಯಾಕ್ ಮಾಡುವುದರಲ್ಲಿ ಸಮಯವನ್ನು ಕಳೆಯುವ ಬದಲು ಅವುಗಳನ್ನು ನೇರವಾಗಿ ಖರೀದಿಸಬಹುದು. ಕೇರಳದ ಹೆಚ್ಚಿನ ಚಿಲ್ಲರೆ ಅಂಗಡಿಗಳಲ್ಲಿ ಇಂತಹ ಪ್ರಿ-ಪ್ಯಾಕಿಂಗ್ ಸಾಮಾನ್ಯ ಅಭ್ಯಾಸವಾಗಿದ್ದು, ಪ್ರಸ್ತುತ ಬದಲಾವಣೆಯು ತಮ್ಮ ಅಗತ್ಯ ಖರೀದಿಗಳಿಗಾಗಿ ಈ ಅಂಗಡಿಗಳಿಗೆ ಆಗಾಗ್ಗೆ ಬರುವ ಹೆಚ್ಚಿನ ಸಂಖ್ಯೆಯ ಸಾಮಾನ್ಯ ಗ್ರಾಹಕರ ಮೇಲೆ ಪ್ರತಿಕೂಲ ಪರಿಣಾಮ ಬೀರುತ್ತದೆ ಎಂದು ಪಿಣರಾಯಿ ವಿಜಯನ್ ತಮ್ಮ ಪತ್ರದಲ್ಲಿ ಪ್ರಧಾನಿಗಳ ಗಮನಕಕ್ಕೆ ತಂದಿದ್ದಾರೆ.

ಅಗತ್ಯ ವಸ್ತುಗಳ ಮೇಲೆ ಘೋರ ಜಿಎಸ್‌ಟಿ ಹೇರಿಕೆಯ ವಿರುದ್ಧ ಅಗಸ್ಟ್ 1-14: ಪ್ರಚಾರಾಂದೋಲನ

ಸ್ವಾತಂತ್ರ್ಯ ದಿನ ದೇಶಾದ್ಯಂತ ಮತಪ್ರದರ್ಶನ: ಸಿಐಟಿಯು ಕರೆ

ಸಿಐಟಿಯು ಒಟ್ಟಾರೆಯಾಗಿ ಜನರ ಮತ್ತು ನಿರ್ದಿಷ್ಟವಾಗಿ ಕಾರ್ಮಿಕ ವರ್ಗದ ಜೀವನದ ಅಗತ್ಯಗಳ ಮೇಲೆ ಜಿಎಸ್‌ಟಿ ಹೇರಿಕೆಯನ್ನು ಬಲವಾಗಿ ಖಂಡಿಸಿದೆ, ಅದನ್ನು ತಕ್ಷಣವೇ ಹಿಂಪಡೆಯಲು ಒತ್ತಾಯಿಸಿದೆ.

ಮೋದಿ ನೇತೃತ್ವದ ಸರ್ಕಾರ ಪೆಟ್ರೋಲಿಯಂ ಉತ್ಪನ್ನಗಳು ಮತ್ತು ಗೃಹಬಳಕೆ ಅನಿಲದ ವ್ಯವಸ್ಥಿತ ಬೆಲೆ ಏರಿಕೆಯ ಮೂಲಕ ಅನುಸರಿಸುತ್ತಿರುವ ವಿಧ್ವಂಸಕ ನೀತಿಯಿಂದಾಗಿ ಈಗಾಗಲೇ ತೀವ್ರ ಸಂಕಷ್ಟಕ್ಕೆ ಸಿಲುಕಿರುವ ಕಾರ್ಮಿಕರು ಮತ್ತು ಜನಸಾಮಾನ್ಯರ ಮೇಲೆ ಈ ಆಕ್ರಮಣ ಮತ್ತಷ್ಟು ದಾಳಿ ಮಾಡುತ್ತದೆ ಎಂದು ಅದು ಹೇಳಿದೆ.

ಸ್ವತಂತ್ರ ಭಾರತದ ಇತಿಹಾಸದಲ್ಲಿ ಅಕ್ಕಿ, ಗೋಧಿ, ಬೇಳೆಕಾಳುಗಳಂತಹ ಅಗತ್ಯ ಆಹಾರ ಪದಾರ್ಥಗಳು ಮತ್ತು ಮೊಸರು, ಪನೀರ್, ಮಾಂಸ, ಮೀನು, ಬೆಲ್ಲದಂತಹ ಡೈರಿ ವಸ್ತುಗಳ ಮೇಲೆ ತೆರಿಗೆ ವಿಧಿಸಲಾಗಿಲ್ಲ. ಜನರು ಬ್ಯಾಂಕ್‌ಗಳಿಂದ ಸ್ವಂತ ಉಳಿತಾಯದ ಹಣವನ್ನು ಹಿಂತೆಗೆದುಕೊಳ್ಳಲು ಬಳಸುವ ಬ್ಯಾಂಕ್ ಚೆಕ್‌ಗಳ ಮೇಲೆ 18% ಜಿಎಸ್‌ಟಿ ವಿಧಿಸಲಾಗುತ್ತದೆ. ಕೈಗಾರಿಕಾ ಕಾರ್ಮಿಕರ ಗ್ರಾಹಕ ಬೆಲೆ ಸೂಚ್ಯಂಕವು ವ್ಯವಸ್ಥೆಯ ಬಿಕ್ಕಟ್ಟನ್ನು ಪ್ರತಿಬಿಂಬಿಸುವ ಪ್ರಸ್ತುತ ಹಣದುಬ್ಬರದ ಹಂತದಲ್ಲಿ ನಿಜವಾದ ಬೆಲೆ ಏರಿಕೆಯನ್ನು ಸಂಪೂರ್ಣವಾಗಿ ಪ್ರತಿಬಿಂಬಿಸುವುದಿಲ್ಲ. ಈ ಪರಿಸ್ಥಿತಿಯನ್ನು ಗಮನಿಸಿದರೆ, ಜೀವನದ ಅಗತ್ಯ ವಸ್ತುಗಳ ಮೇಲಿನ ಪ್ರಸ್ತುತ ಹೇರಿಕೆಗಳು ಮತ್ತು ಏರಿಕೆಗಳು ಸೂಚ್ಯಂಕದಲ್ಲಿ ಎಂದಿಗೂ ಬಿಂಬಿತವಾಗುವುದಿಲ್ಲ, ಆದ್ದರಿಂದ ಇದನ್ನು ಆಧರಿಸಿದ ವಿ.ಡಿ.ಎ. ತುಟ್ಟಿಭತ್ಯೆ, ಅದು ರಾಜ್ಯ ಅಥವಾ ಕೇಂದ್ರ ವಲಯದಲ್ಲಿರಬಹುದು, ಬೆಲೆ ಏರಿಕೆಯನ್ನು ಎಂದಿಗೂ ಸಂಪೂರ್ಣವಾಗಿ ಸರಿದೂಗಿಸಲು ಸಾಧ್ಯವಿಲ್ಲ. ಸಂಘಟಿತ ವಲಯದಲ್ಲಿ ಹೀಗಾದರೆ, ನಿಯಮಿತ ಆದಾಯವಿಲ್ಲದ ಮತ್ತು ದಿನನಿತ್ಯದ ಆದಾಯವನ್ನು ಅವಲಂಬಿಸಿರುವ ಅಸಂಘಟಿತ ವಲಯದ ಕಾರ್ಮಿಕರಂತೂ ಅತಿ ಹೆಚ್ಚು ಬಾಧೆಯನ್ನು ಅನುಭವಿಸುತ್ತಾರೆ.

ಕೋವಿಡ್ ಸಾಂಕ್ರಾಮಿಕ ಮತ್ತು ಲಾಕ್‌ಡೌನ್ ಹೇರಿದ ಕುಸಿತದಿಂದ ಇನ್ನೂ ಚೇತರಿಸಿಕೊಳ್ಳದ ಕಾರ್ಮಿಕರು, ಮಧ್ಯಮ, ಸಣ್ಣ ಮತ್ತು ಅತಿ ಸಣ್ಣ ಉದ್ದಿಮೆಗಳು ಮತ್ತು ಅರ್ಥ ವ್ಯವಸ್ಥೆಯು ಮತ್ತಷ್ಟು ಒತ್ತಡಕ್ಕೆ ಒಳಗಾಗುತ್ತದೆ, ಇದರಿಂದಾಗಿ ಬೇಡಿಕೆ ಪ್ರಮಾಣ ಮತ್ತಷ್ಟು ಕುಗ್ಗುವಂತಾಗುತ್ತದೆ. ಇದು ಮತ್ತಷ್ಟು ಉದ್ಯೋಗ ನಷ್ಟಕ್ಕೆ ಮತ್ತು ನಿರುದ್ಯೋಗದ ಹೆಚ್ಚಳಕ್ಕೆ ಕಾರಣವಾಗುತ್ತದೆ. ಕನಿಷ್ಠ ವೇತನ ಹೆಚ್ಚಿಸಲು ಮತ್ತು ಉದ್ಯೋಗ ನಷ್ಟವನ್ನು ನಿಲ್ಲಿಸಲು ಹಿಂದೇಟು ಹಾಕುತ್ತಿರುವ ಕೇಂದ್ರ ಮತ್ತು ರಾಜ್ಯಗಳ ಬಿಜೆಪಿ ಸರ್ಕಾರಗಳು ಜನರ ಮೇಲೆ ಮತ್ತಷ್ಟು ಹೊರೆಗಳನ್ನು ಹೇರುತ್ತಿವೆ. ಇದು ಗಾಯಕ್ಕೆ ಉಪ್ಪನ್ನು ಸವರುವುದಲ್ಲದೆ ಬೇರೇನೂ ಅಲ್ಲ.

ಕಾರ್ಮಿಕರು ಮತ್ತು ಒಟ್ಟಾರೆಯಾಗಿ ಎಲ್ಲ ಜನಗಳು ಅಗತ್ಯ ವಸ್ತುಗಳ ಮೇಲೆ ಜಿಎಸ್‌ಟಿ ಹೇರಿಕೆ ಮತ್ತು ಬೆಲೆ ಏರಿಕೆಯ ಮೂಲಕ ತಮ್ಮ ಜೀವನದ ಮೇಲಿನ ನಡೆಯುತ್ತಿರುವ ಈ ಘೋರ ದಾಳಿಯನ್ನು ತಮ್ಮೆಲ್ಲ ಬಲವನ್ನು ಹಾಕಿ ಪ್ರತಿರೋಧಿಸಬೇಕು, ಅಗಸ್ಟ್ 1 ರಿಂದ 14 ರವರೆಗೆ ಎರಡು ವಾರಗಳ ಪ್ರಚಾರಾಂದೋಲನದಲ್ಲಿ ಮತ್ತು ಈ ಪ್ರಚಾರಾಂದೋಲನದ ಕೊನೆಯ ದಿನ, ಸ್ವಾತಂತ್ರ್ಯದ 75ನೇ ವಾರ್ಷಿಕೋತ್ಸವದ ಮುನ್ನಾದಿನ, ಆಗಸ್ಟ್ 15 ರಂದು ದೇಶದಾದ್ಯಂತ ನಡೆಯುವ ಬೃಹತ್ ಪ್ರತಿಭಟನೆಗಳಲ್ಲಿ ಒಟ್ಟಾಗಿ ಭಾಗವಹಿಸಬೇಕು ಎಂದು ಸಿಐಟಿಯು ಕರೆ ನೀಡಿದೆ.

ತೀಸ್ತಾ ಸೆಟಲ್ವಾಡ್ ವಿರುದ್ಧ ಅಸಂಬದ್ಧ ಆರೋಪಗಳು: ಸಿಜೆಪಿ

20 ವರ್ಷಗಳಿಗೂ ಹೆಚ್ಚು ಕಾಲ ಭಾರತದಾದ್ಯಂತ ಮಾನವ ಹಕ್ಕುಗಳಿಗಾಗಿ ಕೆಲಸ ಮಾಡುತ್ತಿರುವ 'ನ್ಯಾಯ ಮತ್ತು ಶಾಂತಿಗಾಗಿ ನಾಗರಿಕರು'(ಸಿಜೆಪಿ) ಸಂಸ್ಥೆಯ ಟ್ರಸ್ಟಿಗಳಲ್ಲಿ ಒಬ್ಬರು ಮತ್ತು ಸಿಜೆಪಿ ಕಾರ್ಯದರ್ಶಿಯಾಗಿರುವ ಶ್ರೀಮತಿ ತೀಸ್ತಾ ಸೆಟಲ್ವಾಡ್ ಅವರನ್ನು ಗುಜರಾತ್ ಪೊಲೀಸರು ಬಂಧಿಸಿದ್ದಾರೆ. ಅವರನ್ನು ಪ್ರಸ್ತುತ ಅಹಮದಾಬಾದ್‌ನ ಸಬರಮತಿ ಮಹಿಳಾ ಕಾರಾಗೃಹದಲ್ಲಿ ಇರಿಸಲಾಗಿದೆ. ಗುಜರಾತಿನ ಬಿಜೆಪಿ ಸರಕಾರವನ್ನು ಅಸ್ಥಿರಗೊಳಿಸಲು ಅವರು ಕಾಂಗ್ರೆಸ್ ಮುಖಂಡ ಅಹ್ಮದ್ ಪಟೇಲ್‌ರಿಂದ ಅವರು ಹಣವನ್ನು ತೆಗೆದುಕೊಂಡಿದ್ದಾರೆ ಎಂಬ ಗುಜರಾತ್ ರಾಜ್ಯದ ಹೇಳಿಕೆಗಳು ಅಸಂಬದ್ಧವಾಗಿವೆ, ಪೋಲೀಸ್ ಹೇಳಿಕೊಳ್ಳುತ್ತಿರುವಂತೆ ಆಕೆ ಯಾವುದೇ ರೀತಿಯ ಪಿತೂರಿಯಲ್ಲಿ ಇರಲಿಲ್ಲ ಎಂದು ಎಂದು ಸಿಜೆಪಿಯ ಇತರ ಏಳು ಟ್ರಸ್ಟಿಗಳು ಒಂದು ಹೇಳಿಕೆಯಲ್ಲಿ ತಿಳಿಸಿದ್ದಾರೆ.

25.06.2022 ರಂದು ಬಂಧನದ ಸಮಯದಲ್ಲಿ ತೀಸ್ತಾ ಸೆಟಲ್‌ವಾಡ್‌ರನ್ನು ಬಂಧಿಸಿ ಹಲ್ಲೆ ನಡೆಸಿದ ರೀತಿಯನ್ನು ಈ ಟ್ರಸ್ಟಿಗಳು ಬಲವಾಗಿ ಖಂಡಿಸಿದ್ದಾರೆ.

"ಶ್ರೀಮತಿ ತೀಸ್ತಾ ಸೆಟಲ್ವಾಡ್ ವಿರುದ್ಧದ ಪ್ರಕರಣವು ಸಂಪೂರ್ಣವಾಗಿ ಸುಳ್ಳು ಎಂದು ನಾವು ನಂಬುತ್ತೇವೆ, 2002 ರ ಗೋಧ್ರಾ ನಂತರದ ಗಲಭೆಗಳ ಸಂತ್ರಸ್ತರಿಗೆ ಸಹಾಯ ಮಾಡುವ ಕೆಲಸಕ್ಕಾಗಿ ಅವರ ಮೇಲೆ ಗುರಿಯಿಡಲಾಗಿದೆ" ಎಂದು ಸಿಜೆಪಿ ಟರಸ್ಟಿಗಳು ಹೇಳಿದ್ದಾರೆ.

ತೀಸ್ತಾ ಸೆಟಲ್ವಾಡ್ ಅವರ "ಏಕೈಕ ಗುರಿ ಗೋಧ್ರಾ ನಂತರದ ದಂಗೆಯ ಸಂತ್ರಸ್ತರಿಗೆ ನ್ಯಾಯವನ್ನು ಹುಡುಕುವುದಾಗಿತ್ತು. ಎಫ್‌ಐಆರ್ ಮತ್ತು ಪ್ರತ್ಯುತ್ತರದಲ್ಲಿ ಮಾಡಲಾಗಿರುವಂತೆ ಗಲಭೆಗಳ ಸಂತ್ರಸ್ತರಿಗೆ ಸಹಾಯ ಮಾಡುವುದು ತಪ್ಪು ಕೆಲಸಅಥವಾ ಅಪರಾಧ ಎಂದು ಕರೆಯಲಾಗುವುದಿಲ್ಲ. ಅಲ್ಲದೆ, ಅವರು ಯಾವತ್ತೂ ಪುರಾವೆಗಳನ್ನು ಸೃಷ್ಟಿಸಿದ್ದಾರೆ ಅಥವಾ ಯಾವುದೇ ಸಾಕ್ಷಿಗೆ ಸತ್ಯವನ್ನು ಹೊರತುಪಡಿಸಿ ಬೇರೇನಾದರೂ ಹೇಳಲು ಹೇಳಿದ್ದಾರೆ ಎಂದು ನಾವು ನಂಬುವುದಿಲ್ಲ. ಅವರು ಕೇವಲ ಸಂತ್ರಸ್ತರಿಗೆ ನ್ಯಾಯದ ಪ್ರಕ್ರಿಯೆಯನ್ನು ಸುಗಮಗೊಳಿಸಿದ್ದಾರೆ "ಎನ್ನುತ್ತ ಈ ಟ್ರಸ್ಟಿಗಳು "ನಾವು ಶ್ರೀಮತಿ ಸೆಟಲ್ವಾಡ್ ಪರವಾಗಿ ನಿಲ್ಲುತ್ತೇವೆ, ದೇಶದ ಸ್ವತಂತ್ರ ನ್ಯಾಯಾಂಗದಲ್ಲಿ ಸಂಪೂರ್ಣ ನಂಬಿಕೆಯನ್ನು ಹೊಂದಿದ್ದೇವೆ ಮತ್ತು ಶ್ರೀಮತಿ ಸೆಟಲ್ವಾಡ್ ಅವರು ಆದಷ್ಟು ಬೇಗ ಜಾಮೀನಿನ ಮೇಲೆ ಬಿಡುಗಡೆಯಾಗುತ್ತಾರೆ ಮಾತ್ರವಲ್ಲ ಅವರ ವಿರುದ್ಧದ ಪ್ರಕರಣವನ್ನು ರದ್ದುಗೊಳಿಸಲಾಗುತ್ತದೆ ಎಂದು ಆಶಿಸುತ್ತೇವೆ" ಎಂದು ಹೇಳಿದ್ದಾರೆ..

'ನ್ಯಾಯ ಮತ್ತು ಶಾಂತಿಗಾಗಿ ನಾಗರಿಕರು'('ಸಿಟಿಜನ್ಸ್ ಫಾರ್ ಜಸ್ಟಿಸ್ ಅಂಡ್ ಪೀಸ್')ನ ಟ್ರಸ್ಟಿಗಳಾದ ಸೆಡ್ರಿಕ್ ಪ್ರಕಾಶ್, ಚಿತ್ರಾ ಪಾಲೇಕರ್, ಡಾಲ್ಫಿ ಡಿಸೋಜಾ, ಗುಲಾಮ್ ಎಂ. ಪೇಶಿಮಾಮ್, ಜಾವೇದ್ ಆನಂದ್, ರಘು ನಂದನ್ ಮಾಲುಸ್ತೆ ಮತ್ತು ಶಕುಂತಲಾ ಕುಲಕರ್ಣಿ ಜಂಟಿಯಾಗಿ ಈ ಹೇಳಿಕೆ ನೀಡಿದ್ದಾರೆ.

ಸಂಪಾದಕೀಯ

ಬಿಸಿಯೂಟದೊಂದಿಗೆ ಬೇಯಿಸಿದ ಮೊಟ್ಟೆ ಸ್ವಾಗತಾರ್ಹ ತೀರ್ಮಾನ

ರಾಜ್ಯದ ಸರ್ಕಾರಿ ಮತ್ತು ಅನುದಾನಿತ ಶಾಲೆಗಳ ಮಕ್ಕಳಲ್ಲಿನ ಅಪೌಷ್ಠಿಕತೆಯನ್ನು ನಿವಾರಣೆ ಮಾಡಲು ಮಧ್ಯಾಹ್ನದ ಬಿಸಿಯೂಟದೊಂದಿಗೆ ಬೇಯಿಸಿದ ಮೊಟ್ಟೆ ವಿತರಿಸಲು ರಾಜ್ಯ ಸರ್ಕಾರ ನಿರ್ಧರಿಸಿದ್ದು ಸ್ವಾಗತಾರ್ಹವಾಗಿದೆ. ಶಾಲಾ ಮಕ್ಕಳಿಗೆ ಬೇಯಿಸಿದ ಮೊಟ್ಟೆ ವಿತರಿಸುವ ಬಗ್ಗೆ ಸಾರ್ವಜನಿಕವಾಗಿ ಪರ ಹಾಗೂ ವಿರುದ್ಧವಾದ ವಿವಾದಗಳು ನಡೆದ ನಂತರ ಕಲ್ಯಾಣ ಕರ್ನಾಟಕದ ಜಿಲ್ಲೆಗಳಲ್ಲಿ ಮಾತ್ರ ಪ್ರಾಯೋಗಿಕವಾಗಿ ಈ ಯೋಜನೆ ಜಾರಿಮಾಡಲಾಗಿತ್ತು. ಕಲ್ಯಾಣ ಕರ್ನಾಟಕದ ಜಿಲ್ಲೆಗಳಲ್ಲಿ ಮಾತ್ರ ಅಂದರೆ ಬೀದರ್, ಕಲಬುರ್ಗಿ, ಯಾದಗಿರಿ, ರಾಯಚೂರು, ಬಳ್ಳಾರಿ, ವಿಜಯನಗರ ಮತ್ತು ಕೊಪ್ಪಳ ಜಿಲ್ಲೆಗಳಲ್ಲಿ ಮಾತ್ರ ಮೊಟ್ಟೆ ವಿತರಿಸುವ ಯೋಜನೆ ಜಾರಿಯಲ್ಲಿತ್ತು. ಈಗ ಎಲ್ಲ ಜಿಲ್ಲೆಗಳಲ್ಲಿ ಮೊಟ್ಟೆ ತಿನ್ನಬಯಸುವ ಮಕ್ಕಳಿಗೆ ಯಾವುದೇ ಒತ್ತಾಯವಿಲ್ಲದೆ. ಮಧ್ಯಾಹ್ನದ ಬಿಸಿಯೂಟದೊಂದಿಗೆ ಬೇಯಿಸಿದ ಮೊಟ್ಟೆಯನ್ನು ವಿತರಿಸಲಾಗುವುದು ಎಂದು ಶಿಕ್ಷಣ ಸಚಿವ ಬಿ.ಸಿ. ನಾಗೇಶ್ ಹೇಳಿರುವುದಾಗಿ ವರದಿಯಾಗಿದೆ. ಮೊಟ್ಟೆ ತಿನ್ನುವ ಮಕ್ಕಳಿಗೆ ಮೊಟ್ಟೆ, ಮೊಟ್ಟೆ, ತಿನ್ನದವರಿಗೆ ಶೇಂಗಾಚಿಕ್ಕಿ ಅಥವ ಬಾಳೆಹಣ್ಣು ವಿತರಿಸಲು ಸರ್ಕಾರ ನಿರ್ಧರಿಸಿದೆಯಂತೆ. ಈ ಯೋಜನೆಯ ಅಡಿಯಲ್ಲಿ 1 ರಿಂದ 8ನೇ ತರಗತಿಯಲ್ಲಿ ಓದುತ್ತಿರುವ ಮಕ್ಕಳಿಗೆ ವರ್ಷದಲ್ಲಿ 46 ದಿನಗಳ ಕಾಲ ಮಾತ್ರ ವಿತರಿಸಲಾಗಲಿದೆ.

ಸರ್ಕಾರಿ ಮತ್ತು ಅನುದಾನಿತ ಶಾಲೆಗಳಲ್ಲಿನ 1 ರಿಂದ 8ನೇ ತರಗತಿಯ ಮಕ್ಕಳಿಗೆ ಮೊಟ್ಟೆ ಅಥವ ಶೇಂಗಾಚಿಕ್ಕಿ ಅಥವ ಬಾಳೆಹಣ್ಣು ನೀಡಲು ಅಗತ್ಯ ಹಣವನ್ನು ಒದಗಿಸಲು ರಾಜ್ಯ ಹಣಕಾಸು ಇಲಾಖೆ ಒಪ್ಪಿಗೆ ಸೂಚಿಸಿದೆ ಎಂದು ತಿಳಿದು ಬಂದಿದೆ. ವರ್ಷದಲ್ಲಿ ಕನಿಷ್ಠ 100 ದಿನಗಳ ಕಾಲ ಬೇಯಿಸಿದ ಮೊಟ್ಟೆ ಅಥವ ಶೇಂಗಾಚಿಕ್ಕಿ ಅಥವ ಬಾಳೆಹಣ್ಣು ವಿತರಿಸಲು ಅಗತ್ಯ ಅನುದಾನವನ್ನು ಮಂಜೂರು ಮಾಡುವಂತೆ ಶಿಕ್ಷಣ ಇಲಾಖೆ ಹಣಕಾಸು ಇಲಾಖೆಗೆ ಪ್ರಸ್ತಾವ ಸಲ್ಲಿಸಿತ್ತು. ಆದರೆ ಈ ಪ್ರಸ್ತಾವಕ್ಕೆ ಹಣಕಾಸು ಇಲಾಖೆ ಪೂರ್ಣಪ್ರಮಾಣದ ಒಪ್ಪಿಗೆ ನೀಡದೆ ಕೇವಲ 46 ದಿನಗಳಿಗೆ ಅಂದರೆ ವಾರದಲ್ಲಿ ಎರಡು ದಿನ ಮಾತ್ರ ಮೊಟ್ಟೆ ನೀಡಲು ಅನುಮತಿ ನೀಡಿದ್ದು ಶೀರ್ಘದಲ್ಲೇ ಈ ಯೋಜನೆ ರಾಜ್ಯದಾದ್ಯಂತ ಎಲ್ಲ ಜಿಲ್ಲೆಗಳಿಗೆ ವಿಸ್ತರಣೆಯಾಗಲಿದೆಯಂತೆ. ರಾಜ್ಯ ಹಣಕಾಸು ಇಲಾಖೆ ಬಡವರ ಬಗ್ಗೆ ನಿರ್ಲಕ್ಷ ತೋರುವುದು ಸರ್ಕಾರದ ಧೋರಣೆಯ ಭಾಗವೇ ಆಗಿದೆ.

ಬೇಯಿಸಿದ ಮೊಟ್ಟೆ ಸೇವನೆ ಸಂಬಂಧಪಟ್ಟ ಮಕ್ಕಳ ಹಕ್ಕು. ಯಾವ ಆಹಾರ ಸೇವನೆ ಮಾಡಬೇಕು ಎಂಬುದನ್ನು ಅವರೇ ನಿರ್ಧರಿಸುತ್ತಾರೆ. ಸರ್ಕಾರದಲ್ಲಿರುವವರು ಕೆಲವರು ಈಗಲೂ ಮಕ್ಕಳಿಗೆ ಅವರ ಈ ಹಕ್ಕನ್ನು ನಿರಾಕರಿಸುವ ಕ್ರೂರ ಮನಸ್ಸಿನವರು ಇದ್ದಾರೆ. ಮೊಟ್ಟೆ ತಿನ್ನಲು ಬಯಸುವ ಮಕ್ಕಳಿಗೆ ಅದನ್ನು ನಿರಕರಿಸಬಾರದು. ಶಾಲೆಗಳಲ್ಲಿ ಓದುತ್ತಿರುವ ನಮ್ಮ ಲಕ್ಷಾಂತರ ಬಡ ಮಕ್ಕಳು ಅಪೌಷ್ಠಿಕತೆಯಿಂದ ನರಳುತ್ತಿರುತ್ತಾರೆ. ಅಂತಹ ಆರೋಗ್ಯ ವಂಚಿತ ಮಕ್ಕಳಿಗೆ ಮೊಟ್ಟೆಯಂತಹ ಪೌಷ್ಠಿಕ ಆಹಾರ ಒದಗಿಸುವುದು ಸರ್ಕಾರದ ಕರ್ತವ್ಯ ಹಾಗೂ ಆಧ್ಯತೆ. ವಾರದಲ್ಲಿ 2 ದಿನ ಮಾತ್ರ ಆ ಮಕ್ಕಳಿಗೆ ಮೊಟ್ಟೆ ವಿತರಿಸುವುದು ನ್ಯಾಯವಲ್ಲ. ಮಕ್ಕಳು ತರಗತಿಗಳಿಗೆ ಹಾಜರಾದಾಗಲಾದರೂ ಮಕ್ಕಳಿಗೆ ಸೇವಿಸಲು ಮೊಟ್ಟೆ ವಿತರಿಸಬೇಕು. ಮೊಟ್ಟೆ ತಿನ್ನದವರಿಗೆ ಪರ್ಯಾಯ ಆಹಾರ ನೀಡುವ ವ್ಯವಸ್ಥೆಯೂ ಇರಬೇಕು. "ಇಂದಿನ ಮಕ್ಕಳು ನಾಳಿನ ಪ್ರಜೆಗಳು". ಅವರು ಆರೋಗ್ಯವಂತರಾಗಿ ಬೆಳೆದರೆ ದೇಶವೂ ಸಹ ಆರೋಗ್ಯಕರವಾಗಿ ಬೆಳವಣಿಗೆ ಸಾಧಿಸುವುದು.

ಮಕ್ಕಳಿಗೆ ಒದಗಿಸುವ ಮೊಟ್ಟೆಯಾಗಲಿ, ಚಿಕ್ಕಿಯಾಗಲಿ, ಬಾಳೆಹಣ್ಣಾಗಲಿ, ಇವುಗಳ ದುರುಪಯೋಗ ಆಗದಂತೆ ನೋಡಿಕೊಳ್ಳಲು ದೃಢವಾದ ಕ್ರಮಗಳನ್ನು ಕೈಗೊಳ್ಳಬೇಕು. ಶಿಕ್ಷಕರು, ಸರಬರಾಜುದಾರರು, ಶಾಲಾ ಅಭಿವೃದ್ಧಿ ಮಂಡಳಿಯವರು ಪರಸ್ಪರ ಕೈಜೋಡಿಸಿ ಭ್ರಷ್ಟಾಚಾರದಲ್ಲಿ ತೊಡಗಿಕೊಂಡು ಮಕ್ಕಳಿಗೆ ಮೋಸ, ಅನ್ಯಾಯ ಮಾಡುತ್ತಾರೆ. ಇಂತಹ ಪ್ರವೃತ್ತಿಗಳನ್ನು ತಡೆಯಲು ದೃಢವಾದ ಕ್ರಮಗಳನ್ನು ಕೈಗೊಳ್ಳುವಂತಾಗಬೇಕು. ಎಸ್‌ಡಿಎಂಸಿಗಳೇ ಎಲ್ಲವನ್ನು ಖರೀದಿ ಮಾಡಿ ಮಕ್ಕಳಿಗೆ ವಿತರಿಸುವ ಜವಾಬ್ದಾರಿಯನ್ನು ನಿರ್ವಹಿಸಲು ಮುಂದಾಗಿವೆ ಎಂದು ಹೇಳಲಾಗುತ್ತದೆ. ಯೋಜನೆಯನ್ನು ರಾಜ್ಯಾದ್ಯಂತ ವಿಸ್ತರಣೆ ಮಾಡಲಾಗುವುದೆಂದೂ ಯೋಜನೆ ಜಾರಿಗೆ 200 ಕೂಲಿ ರೂ. ವೆಚ್ಚವಾಗಲಿದೆ ಎಂದು ಹೇಳಲಾಗುತ್ತದೆ. ಇದರಿಂದ ಭ್ರಷ್ಟಾಚಾರವೂ ಸಹ ವಿಸ್ತರಣೆ ಆಗುವ ಅಪಾಯ ಹೆಚ್ಚಾಗಲಿದೆ. ಮಕ್ಕಳ ಕೈಯಿಂದ ಕಿತ್ತುಕೊಂಡು ಕಬಳಿಸುವುದು ಅಮಾನವೀಯವಾಗಿದೆ.

ಯೋಜನೆ ಕೇವಲ ಚುನಾವಣಾ ತಂತ್ರ ಆಗಿರಬಾರದು. ಚುನಾವಣೆಗಳು ಹತ್ತಿರ ಬಂದಂತೆ ಆಳುವ ಪಕ್ಷಗಳು ಮತದಾರರನ್ನು ಒಲಿಸಿಕೊಳ್ಳಲು ಇಂತಹ ಯೋಜನೆಗಳನ್ನು ಪ್ರಕಟಿಸುತ್ತಿರುತ್ತವೆ. ಮಕ್ಕಳಿಗೆ ಬಿಸಿಯೂಟದೊಂದಿಗೆ ಬೇಯಿಸಿದ ಮೊಟ್ಟೆ ವಿತರಿಸುವುದು ಬಿಜೆಪಿಯವರ ಚುನಾವಣಾ ತಂತ್ರಗಾರಿಕೆ ಆಗುವ ಸಾಧ್ಯತೆಯನ್ನು ಗಮನಿಸಬೇಕು. ಬಿಜೆಪಿಯೊಳಗಿನ ಕೆಲವರು ಮತ್ತು ಬಿಜೆಪಿಯನ್ನು ಬೆಂಬಲಿಸುತ್ತಿರುವ ಮಠಾಧಿಪತಿಗಳು ಮಕ್ಕಳಿಗೆ ಮೊಟ್ಟೆ ಕೊಡುವುದನ್ನು ಬಲವಾಗಿ ವಿರೋಧಿಸುತ್ತಿದ್ದರು. ಈಗ ಅಂತವರು ಮೌನರಾಗಿದ್ದಾಆರೆ. ಅವರಿಗೆ ಬುದ್ಧಿ ಬಂದಿದ್ದರೆ ಅದು ಸ್ವಾಗತಾರ್ಹ. ಅದು ಬಿಜೆಪಿಯ ತಂತ್ರವಾಗಿದ್ದರೆ ಯಾರೂ ಮೋಸಹೋಗದೆ ಮುಂದಿನ ಚುನಾವಣೆಯಲ್ಲಿ ಎಚ್ಚರದಿಂದ ಮತದಾನ ಮಾಡಬೇಕು. ಇದರಲ್ಲೇ ನಮ್ಮ ನಾಡಿನ ಹಿತ ಅಡಗಿದೆ. ಕಮಲದ ಆಸೆ, ಆಮಿಷಗಳಿಗೆ ಯಾರೂ ಬಲಿಯಾಗಬಾರದು.

ಹುಟ್ಟು ಹಬ್ಬವೋ, ವ್ಯಕ್ತಿ ವಿಜೃಂಭಣೆಯೋ?!

ಬಿಜೆಪಿ ಹಚ್ಚಿದ ಕಿಚ್ಚಿನಲ್ಲಿ ಬೇಯುತ್ತಿರುವ ವಿರೋಧ ಪಕ್ಷಗಳು

ಈ ವಾರ

ಎಸ್.ವೈ. ಗುರುಶಾಂತ್

'ಸದಾಶಿವನಿಗೆ ಅದೇ ಧ್ಯಾನ' ಎಂಬ ಹಳೆಯ ಗಾದೆ ಮಾತೊಂದಿದೆ. ಕರ್ನಾಟಕದ ಬಹುತೇಕ ಆಡಳಿತ ಮತ್ತು ವಿರೋಧ ಪಕ್ಷಗಳ ನಾಯಕರ ಧ್ಯಾನ ಇದೀಗ ಅನಾಹುತ ಸೃಷ್ಟಿಸಿರುವ ಮಹಾ ಮಳೆಯ ಹಾನಿ ಪರಿಹಾರ ಕಾರ್ಯವಾಗಲೀ, ಬೆಲೆ ಏರಿಕೆ, ಜಿ.ಎಸ್.ಟಿ. ಸುಲಿಗೆಯಾಗಲೀ ಅದರತ್ತ ಅವರ ಚಿತ್ತ ಹರಿಯುತ್ತಿಲ್ಲ. ಅವರ ಧ್ಯಾನ ಮತ್ತು ಚಾತುರ್ಯಗಳ ಮಾತುಗಳೆಲ್ಲಾ ಮುಂದಿನ ಮುಖ್ಯಮಂತ್ರಿ ಕುರ್ಚಿಯ ಸುತ್ತಲೇ. ಅದಕ್ಕೆ ತಾವೇ ಅರ್ಹರೆಂಬ ಅಥವಾ ಅದಕ್ಕಿರುವ ಅರ್ಹತೆ, ಸಾಮರ್ಥ್ಯ ಪ್ರದರ್ಶನದತ್ತಲೇ ಸುತ್ತುತ್ತಿವೆ. ವಿಶೇಷವಾಗಿ, ಕಾಂಗ್ರೆಸ್ ನ ಮುಖಂಡ, ವಿರೋಧ ಪಕ್ಷದ ನಾಯಕ ಸಿದ್ಧರಾಮಯ್ಯ ನವರ 75ನೆಯ ಹುಟ್ಟು ಹಬ್ಬದ ಭಾರೀ ಉತ್ಸವದ ಸಮಾರಂಭದ ಸಿದ್ಧತೆಗಳು ಆರಂಭಗೊಳ್ಳುತ್ತಲೇ ವಾದ ವಿವಾದಗಳು ಭುಗಿಲೆದ್ದಿವೆ.

ಯಾವ ರೂಪದಲ್ಲೂ ಕಾಂಗ್ರೆಸ್ ಬಲದ ಕ್ರೋಢೀಕರಣವನ್ನು ಬಯಸದ ಆಡಳಿತ ಪಕ್ಷ ಬಿಜೆಪಿ ಅದನ್ನು ಟೀಕಿಸುತ್ತಲೇ ಬಂದಿದೆ. ಕಾಂಗ್ರೆಸ್ ಒಳಗಿನ ಗುಂಪುಗಳು, ಅಧಿಕಾರ ಆಸೆ ಇರಿಸಿಕೊಂಡವರೂ ಭಿನ್ನ ಸ್ವರ, ಅಪಸ್ವರ ಎತ್ತಿದ್ದಾರೆ. ಇದು ಎಲ್ಲಿಯವರೆಗೆ ಹೋಗಿದೆ ಎಂದರೆ ಸಿದ್ಧರಾಮಯ್ಯ ನವರ ಗೆಳೆಯರು, ಅಭಿಮಾನಿಗಳು ವ್ಯವಸ್ಥೆಗೊಳಿಸಿದ ಸಮಾರಂಭ ಮುಂದಿನ ಸಿ.ಎಂ. ಸ್ಥಾನದ ಮೇಲೆ ಕಣ್ಣಿರಿಸಿಯೇ ನಡೆಸುತ್ತಿರುವ ಬಲ ಪ್ರದರ್ಶನ ಎಂದೇ ವ್ಯಾಖ್ಯಾನಿಸಲಾಗಿದೆ. ಆ ರೇಸ್ ನಲ್ಲಿ ತಾವೂ ಇರುವುದಾಗಿ ಕಾಂಗ್ರೆಸ್ ಅಧ್ಯಕ್ಷ ಡಿ.ಕೆ.ಶಿವಕುಮಾರ್ ದಿಗಿಲುಗೊಂಡು ಘೋಷಿಸಿದ್ದಾರೆ. ತಮಗೆ ಇರುವ ಒಂದು ಅವಕಾಶ ತಪ್ಪಿ ಹೋಗದಂತೆ ಬೆಂಬಲಿಸಲು ಬಹಿರಂಗವಾಗಿಯೇ ಒಕ್ಕಲಿಗರಿಗೆ ಮನವಿ ಮಾಡಿದ್ದಾರೆ. ಒಕ್ಕಲಿಗರು ಕಾಂಗ್ರೆಸ್ ಕಡೆ ಪೂರಾ ವಾಲಿದರೆ ತಮ್ಮ ಗತಿಯೇನು ಎಂಬ ಆತಂಕದಲ್ಲಿ ಹೆಚ್.ಡಿ. ಕುಮಾರಸ್ವಾಮಿಯವರೂ ಕಣಕ್ಕಿಳಿದಿದ್ದಾರೆ. ಹೀಗೆ ಒಟ್ಟಾರೆ ಈ ಪಕ್ಷಗಳು 'ಜಾತಿ ಮತ'ಗಳ ಕ್ರೋಢೀಕರಣದ ಪ್ರಯತ್ನಗಳ ಸುಳಿಯಲ್ಲಿ ಸಿಲುಕಿವೆ. ವಿರೋಧ ಪಕ್ಷಗಳ ನಾಯಕರು ಈ ವರಸೆಗಳಲ್ಲಿಯೇ ಮುಳುಗಿರುವುದನ್ನು ಕಂಡು ಕಿಚ್ಚು ಹಚ್ಚಿದ ಬಿ.ಜೆ.ಪಿ. ಒಳಗೂ, ಹೊರಗೂ ಮುಸಿ ಮುಸಿ ನಗುತ್ತಿದೆ!

ಸಿದ್ಧರಾಮಯ್ಯನವರಿಗೆ ಈ ಆಗಸ್ಟ್ 3 ಕ್ಕೆ (1947) 75 ವರ್ಷಗಳು ತುಂಬುತ್ತಿರುವ ಸಂದರ್ಭವನ್ನು ಅಮೃತ ಮಹೋತ್ಸವವಾಗಿ ಅಭಿಮಾನಿಗಳು ಆಚರಿಸುವುದು, ಅದರಲ್ಲೂ ದಾವಣಗೆರೆ ಯಲ್ಲಿ ಐದು ಲಕ್ಷ ಜನರನ್ನು ಅದಕ್ಕೆಂದು ಅಣಿ ನೆರೆಸುವುದನ್ನು ಸರಳವಾಗಿ ಭಾವಿಸುವಂತಹುದಲ್ಲ. ನಿಜ, ಸಿದ್ಧರಾಮಯ್ಯನವರು ಹಿರಿಯ ನಾಯಕರು. ರಾಜಕೀಯ, ಸಾಮಾಜಿಕ ಕ್ಷೇತ್ರಗಳಲ್ಲಿ ಅವರು ನೀಡಿದ ಕೊಡುಗೆಗಳನ್ನು ಅವಲೋಕಿಸುವುದು, ಒಂದು ಹಂತದಲ್ಲಿ ಅಭಿನಂದಿಸುವುದು ಸಹಜ. ಇದು ಸಮಾಜ ತೋರುವ ಗೌರವ, ಪ್ರೋತ್ಸಾಹ ಹಾಗೂ ಮಾರ್ಗದರ್ಶನ ಕೂಡ. ರಾಜಕೀಯ ರಂಗದಲ್ಲಿನ ತಾಮಸಗಳನ್ನು ಬದಿಗಿರಿಸಿ ಎಲ್ಲರೂ ಒಂದೆಡೆ ಸೇರಬೇಕು ಎನ್ನುವ ಚಿಂತನೆಗಳೂ ಇಲ್ಲದಿಲ್ಲ. ಆದರೆ ಇದನ್ನು ಹುಟ್ಟು ಹಬ್ಬಕ್ಕೆ, ಮುಂಬರುವ ವಿಧಾನಸಭಾ ಚುನಾವಣೆಗೆ ತಳುಕು ಹಾಕುವುದು ವಿಪರೀತ ಅರ್ಥ ಹುಟ್ಟಿಸುತ್ತಿದೆ. ಅಭಿಮಾನಿ ಬಳಗ ಏನೇ ಹೇಳಿದರೂ ಅದು ಆಸಕ್ತ ವಲಯದಲ್ಲಿ ಸೃಷ್ಟಿಸುವ ಅರ್ಥ– ಅನರ್ಥಗಳು ಬೇರೆಯೇ. ಒಂದೆಡೆ ಈ ಕಾರ್ಯಕ್ರಮ ಯಶಸ್ವಿಯಾದರೆ ಹಿಂದುಳಿದ, ಅಲ್ಪಸಂಖ್ಯಾತರ–ಅಹಿಂದ ಮತಗಳು ಮತ್ತೇ ಕಾಂಗ್ರೆಸ್ ಕಡೆ ಕ್ರೋಢೀಕರಣಗೊಳ್ಳುವುದನ್ನು ಬಿಜೆಪಿ ಹೇಗೆ ಸಹಿಸೀತು?

ಆದ್ದರಿಂದಲೇ ಇಂತಹುದರ ಸುಳಿವು ದೊರೆಯುತ್ತಲೇ ಬಿಜೆಪಿಯ ನಾಯಕರು ಸಿದ್ದರಾಮಯ್ಯನವರ 'ಶಿಷ್ಯರ' 'ಸಿದ್ಧರಾಮೋತ್ಸವ' ಎನ್ನುವ ಅಂಧಾಭಿಮಾನದ, ವ್ಯಕ್ತಿ ವಿಜೃಂಭಣೆಯ ಅಪಕಲ್ಪನೆಯನ್ನೇ ಕಾಂಗ್ರೆಸ್ ಒಳಗಿನ ಬಣಗಳ ಬೇಗುದಿ ಹೊತ್ತಿ ಉರಿಸಲು ಒಂದು ಕಿಡಿಯನ್ನಾಗಿಸಿದರು. ಕೂಸು ಹುಟ್ಟುವ ಮೊದಲೇ ಕುಲಾವಿ ಹೊಲಿಸಿ ಕಿತ್ತುಕೊಳ್ಳುವ ಕಿತ್ತಾಟದಲ್ಲಿ ಮಗ್ನರಾಗಿದ್ದಾರೆ. ಇರುವ ಅವಕಾಶಗಳನ್ನೇ ಚಿಂದಿಯಾಗಿಸಿ ಕೊಳ್ಳುವ ಕೆಸೆರೆರಚಾಟಕ್ಕೆ ಸಾರ್ವಜನಿಕರೆದುರು ಇಳಿದಿದ್ದಾರೆ. ಶಾಸಕ ಜಮೀರ್ ಅವರಂಥ ಉಗ್ರ ಶಿಷ್ಯನ ಬಾಯಿಗೆ ಬೀಗ ಹಾಕದ ಸಿದ್ಧರಾಮಯ್ಯನವರು ತಮ್ಮ ಮನದ ಇಂಗಿತದ ಪ್ರಸಾರದ ಆಪೇಕ್ಷಿಯೇ ಎನ್ನುವ ಪ್ರಶ್ನೆಯೂ ಇದೆ. ಬಹಿರಂಗ ಚರ್ಚೆಗೆ ಇಳಿಯಬಾರದೆನ್ನುವ ಹೈಕಮಾಂಡಿನ ನಿರ್ದೇಶನಕ್ಕೆ ಕವಡೆಯ ಕಿಮ್ಮತ್ತೂ ಅಲ್ಲಿ ಸಿಕ್ಕಿಲ್ಲ.

ಇದು 'ಸಿದ್ಧರಾಮೋತ್ಸವ ಅಲ್ಲ, ಸಿದ್ಧರಾಮಯ್ಯ ನವರ ಅಮೃತ ಮಹೋತ್ಸವ' ಎಂದು ಮರು ಪ್ರಕಟನೆ ಮಾಡಿದ ಬಳಿಕವೂ ಹುಟ್ಟು ಹಬ್ಬದ ಆಚರಣೆ ಮತ್ತು ಅದರ ಹಿಂದಿನ ಘಾಟು ಕಡಿಮೆಯೇನಾಗಿಲ್ಲ. ಈ ಕಾರ್ಯಕ್ರಮದಲ್ಲಿ ಇದರಿಂದ ನಿಜಕ್ಕೂ ಆತಂಕಕ್ಕೆ ಈಡಾಗಿರುವುದು ಕೆ.ಪಿ.ಸಿ.ಸಿ.ಅಧ್ಯಕ್ಷ ಡಿ.ಕೆ. ಶಿವಕುಮಾರ್ ರವರೇ. ಅವರ ಸಹೋದರ ಸಂಸದ ಡಿ.ಕೆ.ಸುರೇಶ್ ಅವರ ಆಕ್ಷೇಪಣೆಯಿಂದ ಆರಂಭಗೊಂಡು ಇದೀಗ ಡಿಕೆಶಿಯೇ ಬಹಿರಂಗವಾಗಿ ಮಾತನಾಡುವ ಹಂತ ತಲುಪಿದೆ ಮತ್ತು ದಿಗಿಲುಗೊಂಡವರಂತೆ ಒಕ್ಕಲಿಗರು ಜಾಗೃತಗೊಳ್ಳುವಂತೆ ಮನವಿ ಮಾಡುವ ಹಂತಕ್ಕೂ ಹೋಯಿತು. ಅತ್ತ ಒಕ್ಕಲಿಗರ ನೆಲೆಯನ್ನೇ ನೆಚ್ಚಿಕೊಂಡಿರುವ ಜೆಡಿ ಎಸ್ ತಮ್ಮ ಕ್ಲೇಮನ್ನೂ ಮಂಡಿಸಿತು. ಈ ಎಲ್ಲವುಗಳಲ್ಲಿ ಪ್ರಮುಖ ಜ್ವಲಂತ ಜನ ಪ್ರಶ್ನೆಗಳಿಗಿಂತ ಜಾತಿಯ ಕ್ರೋಢೀಕರಣವನ್ನೇ ನೆಚ್ಚಿಕೊಂಡಿರುವುದು ಪ್ರಜೆಗಳ ಪಾಲಿಗೆ, ಪ್ರಜಾಪ್ರಭುತ್ವಕ್ಕೆ ಮಾರಕವಾದುದು.



ಇದನ್ನೇ ಬಿಜೆಪಿಯೂ ಸಹ ಅತ್ಯಂತ ಜತನದಿಂದ ಮಾಡುತ್ತಿದೆ. ಹಾಗೂ ರಾಜಕೀಯ ಕ್ರಿಯೆಗಳು ಅದರತ್ತ ಸಾಗಬೇಕೆಂದು ಬಯಸುವ ಬಿಜೆಪಿ ಮತೀಯ ಜಾತೀಯ ಕ್ರೋಢಿಕರಣ ಮೂಲಕ ಅಂತರ್ ವಿಘಟನೆಯನ್ನು ಮಾಡುತ್ತಿದೆ. ಸರಕಾರಿ ಪ್ರಾಯೋಜಿತವಾಗಿಯೂ ಜಾತಿಗಳ ಸಮಾವೇಶ, ಯೋಜನೆಗಳ ಘೋಷಣೆಯನ್ನೂ ಮಾಡುತ್ತಿದೆ.

ಪುಟ 4 ಕ್ಕೆ



ಸಾಹಿತಿಗಳಿಗೆ ಜೀವ ಬೆದರಿಕೆ: ಕ್ರಮ ವಹಿಸದ ರಾಜ್ಯ ಸರಕಾರ: ಸಿಪಿಐ(ಎಂ) ಖಂಡನೆ

ರಾಜ್ಯದ ಪ್ರಗತಿಪರ, ಗಣ್ಯ ಸಾಹಿತಿಗಳಾದ ನಾಡೋಜ ಬರಗೂರು ರಾಮಚಂದ್ರಪ್ಪ ಕುಂ.ವೀರಭದ್ರಪ್ಪ, ಬಿ.ಟಿ.ಲಲಿತಾನಾಯಕ ಮುಂತಾದ 64 ಗಣ್ಯರನ್ನು ಅವಹೇಳನಕಾರಿಯಾಗಿ ನಿಂದನೆ ಮಾಡಿ ಜೀವ ಬೆದರಿಕೆ ಹಾಕಲಾಗಿದೆ. ಜೀವ ಬೆದರಿಕೆ ಪತ್ರಗಳು ಬರುತ್ತಲೇ ಇವೆ. ಆದಾಗಲೂ ಇಂತಹ ಜೀವ ಬೆದರಿಕೆಯ ಗುಂಡಾಗಿರಿ ರಾಜಕೀಯದ ವಿರುದ್ಧ ಮುಖ್ಯಮಂತ್ರಿಗಳು ಮೌನ ವಹಿಸಿರುವುದು ಮತ್ತು ಸರಕಾರ ಈ ಕುರಿತಂತೆ ಕಠಿಣ ಕ್ರಮ ಜುರುಗಿಸದಿರುವುದು ಕೋಮುವಾದಿ ಪುಂಡು ಪೋಕರಿಗಳ ಚಟುವಟಿಕೆಗಳು ಹೆಚ್ಚಳಕ್ಕೆ ಕಾರಣವಾಗಿದೆ. ಸರಕಾರದ ಈ ಪ್ರಾಣಾಂತಕ ಮೌನವನ್ನು ಸಿಪಿಐ(ಎಂ) ಬಲವಾಗಿ ಖಂಡಿಸುತ್ತದೆ ಮತ್ತು ಈ ಕೂಡಲೇ ಬೆದರಿಕೆ ಪತ್ರದ ಮೂಲವನ್ನು ಭೇದಿಸಿ ಆರೋಪಿಗಳನ್ನು ಶಿಕ್ಷಿಸಲು ಅಗತ್ಯ ಕ್ರಮವಹಿಸಲು ಸಿಪಿಐ(ಎಂ) ರಾಜ್ಯ ಸರಕಾರವನ್ನು ಒತ್ತಾಯಿಸುತ್ತದೆ.

ಇಂತಹ ನಾಡಿಗಾಗಿ ದುಡಿದ ಗಣ್ಯರಿಗೆ ಜೀವ ಬೆದರಿಕೆ ಒಡ್ಡುವುದನ್ನು ತಡೆಯಲು, ಕಠಿಣ ಕ್ರಮವಹಿಸುವಂತೆ ಒತ್ತಾಯಿಸಿದೆ.

ಬಿಜೆಪಿ ಹಚ್ಚಿದ ಕಿಚ್ಚಿನಲ್ಲಿ ಬೇಯುತ್ತಿರುವ ವಿರೋಧ ಪಕ್ಷಗಳು

ಪುಟ 3 ರಿಂದ

ಕಾಂಗ್ರೆಸ್ ಅಧಿಕೃತ ವಿರೋಧ ಪಕ್ಷವಾಗಿ ಅಧಿಕಾರಕ್ಕೆ ಬರುವ ದಾರಿಯ ಆಯ್ಕೆ ಏನು? ಅದು ರಾಜ್ಯದಲ್ಲಿ ಸುರಿದ ಮಹಾ ಮಳೆಗೆ ಅಪಾರ ಹಾನಿಗೀಡಾಗಿ ತತ್ತರಿಸುತ್ತಿರುವ ಜನರ ಪರವಾಗಿ ಸರಕಾರದ ವೈಫಲ್ಯಗಳನ್ನು ಬಯಲಿಗೆಳೆದು ಒತ್ತಡ ತರುವುದೇ? ಏರುತ್ತಲೇ ಇರುವ ಬೆಲೆಗಳ ವಿರುದ್ಧ ದನಿ ಎತ್ತಲಿದೆಯೇ? ಆಹಾರ, ಅಗತ್ಯ ವಸ್ತುಗಳು, ಸೇವೆಗಳ ಮೇಲೆ ಜಿ.ಎಸ್.ಟಿ. ಹೇರಿಕೆಯನ್ನು ಪ್ರತಿಭಟಿಸುವುದೇ? ಅಥವಾ ಸರಕಾರದ ಭ್ರಹ್ಮಾಂಡ ಭ್ರಷ್ಟಾಚಾರದ ಹಗರಣಗಳ ವಿರುದ್ಧ ಸಮರ ಸಾರುವುದೇ? ಏನು ಅದರ ನಡೆ?

ವಿಚಿತ್ರವೆಂದರೆ ಕಾಂಗ್ರೆಸ್ ಪಕ್ಷಕ್ಕೆಇಂತಹ ಪ್ರಶ್ನೆಗಳು ಕಾಡುತ್ತಿಲ್ಲ. ಅವನ್ನು ಎತ್ತಿಕೊಂಡು ಒಂದು ಪರಿಹಾರ ಒದಗಿಸಲು, ಹೋರಾಡುವ ಮೂಲಕ ತನ್ನ ಬದ್ಧತೆಯನ್ನು ಸಾರಲು ಅದು ಸಿದ್ದವಿಲ್ಲ. ಬಿಜೆಪಿಯ ವಿರುದ್ಧದ ಅತೃಪ್ತಿಯನ್ನು ಬಳಸಲು ಮಾತ್ರ ಅದರ ಉತ್ಸುಕತೆ. ಇವು ಕೇವಲ ನಾಯಕರ ವ್ಯಕ್ತಗತ ದೌರ್ಬಲ್ಯ ಅಥವಾ ಮಿತಿ ಎನ್ನುವುದಲ್ಲ. ಕಾಂಗ್ರೆಸ್ ಮೂಲತಃ ರಾಜಕೀಯವಾಗಿ, ನೀತಿಗಳ ನೆಲೆಯಲ್ಲಿ ಬದಲಾಗಿಲ್ಲ ಎನ್ನುವುದನ್ನು ಇವೆಲ್ಲವೂ ತೋರಿಸುತ್ತವೆ. ಅದು ಅಡ್ಡ ದಾರಿಯಲ್ಲಿ ವ್ಯಕ್ತಿ ವಿಜೃಂಭಣೆಯ ಕೇಂದ್ರಿತ, ಜಾತಿ ಸಮೀಕರಣದ ಸುತ್ತಲೇ ತನ್ನ ನೆಲೆಯನ್ನು ಗಟ್ಟಿಗೊಳಿಸ ಬಹುದೆಂಬ ಭ್ರಮೆಯಲ್ಲಿದೆ. ಅದರರ್ಥ ನಿಖರ ಹಾಗೂ ನಿಷ್ಠುರವಾಗಿ ಕೇಂದ್ರದ ನೀತಿಗಳ ವಿರುದ್ಧ ಜನತೆ ನಿಜ ಪ್ರತಿರೋಧ ಒಡ್ಡುವುದನ್ನು ನಿರಾಕರಿಸಿದಂತೆ.

ಆಗಸ್ಟ್ 3 ರಂದು ಸಿದ್ಧರಾಮಯ್ಯನವರ ಹೆಸರಿನಲ್ಲಿ ಒಂದಿಷ್ಟು ಜನರನ್ನು ಸೇರಿಸಬಹುದು. ಅಲ್ಲಿ ನೀಡುವ ಸಂದೇಶ ಏನು? ಬಿಜೆಪಿಯನ್ನು ಎದುರಿಸುವ, ಪರ್ಯಾಯ ನಾಯಕನೆಂದೇ? ಅಥವಾ ಸಾರ್ವಜನಿಕ ಗೌರವ ಅಷ್ಟೆಯಾ? ಗೊತ್ತಿಲ್ಲ. ಕಾಂಗ್ರೆಸ್ ಒಳಗೆ, ಹೊರಗಿನ ತಳಮಳ ಮತ್ತು ಸ್ವಸಮರ್ಥನೆಯ ವಿದ್ಯಾಮಾನಗಳನ್ನು ಗಮನಿಸಿದರೆ ವ್ಯಕ್ತಿಗತ ನೆಲೆಯಲ್ಲಿ ರಾಜಕೀಯ ತಂತ್ರಗಾರಿಕೆ ಹೆಣೆದಿರುವಂತೆಯೂ ಕಾಣುತ್ತದೆ. ಇಂತಹ ವ್ಯಕ್ತಿ ಆರಾದನೆಯ ಸಂಸ್ಕೃತಿ ಗುಂಪುಗಾರಿಕೆಗೆ ಎಡೆ ಮಾಡಿ, ಬಣಗಳ ಬಡಿದಾಟಕ್ಕೆ ಖಂಡಿತ ಎಳೆಸುತ್ತದೆ. ಆ ಕಾರ್ಯಕ್ರಮದಲ್ಲಿ ಹೈಕಮಾಂಡಿನ ರಾಹುಲಗಾಂಧಿ ಭಾಗವಹಿಸಿದರೂ ಒಂದಾಗಿರಲು ಉಪದೇಶಿಸಿದರೂ ಅದು ತಪ್ಪಿದ್ದಲ್ಲ. ದುರಂತವೆಂದರೆ, ಒಂದಾಗಿ ಹೋರಾಡಬೇಕಾದ ಸಮಯದಲ್ಲಿ ಬಣಗಳಾಗಿ ಕ್ರೋಢೀಕರಣ ಗೊಳ್ಳುತ್ತಿರುವುದನ್ನು ಮುತ್ಸದ್ದಿತನ ಎನ್ನಲಾದೀತೇ? ಬಿಜೆಪಿ–ಆರೆಸ್ಸೆಸ್ ನ ಸಂಘಟನಾ ಜಾಲ, ಅಮಿತ್ ಶಾನ ಚುನಾವಣಾ ಉಸ್ತುವಾರಿ, ರಾಜಕೀಯ ತಂತ್ರಗಾರಿಕೆ ಎದುರು ಕಾಂಗ್ರೆಸ್ ನ ಸಂಘಟನಾ ಕಾರ್ಯ ದುರ್ಬಲವಾಗಿರುವುದು ಸ್ಪಷ್ಟ ಗೋಚರ. ಕಾರ್ಯಕರ್ತರನ್ನೆಲ್ಲಾ ಒಂದು ಗುರಿಯೆಡೆಗೆ ಸೆಳೆಯ ಬೇಕಿರುವಾಗ ನಾಯಕರೇ ಬಡಿದಾಡಿಕೊಂಡರೆ ಅವರ ಪಾಡೇನು? ಕಳೆದ ಎರಡು ಚುನಾವಣೆಗಳಲ್ಲಿ ನಾಯಕರೇ ಪರಸ್ಪರರನ್ನು ಕನಿಷ್ಠ 20 ಕ್ಷೇತ್ರಗಳಲ್ಲಿ ಸೋಲಿಸಿಕೊಂಡಿದ್ದರು. ಇದೇ ಮಾತನ್ನು ಈಗಲೂ ಬಿಜೆಪಿ ಬಹಿರಂಗವಾಗಿಯೇ ಹೇಳುತ್ತಿದೆ ಎನ್ನುವುದರ ಅರ್ಥವೇನು? ಅದು ಅಷ್ಟು ಖಾತ್ರಿಯಲ್ಲಿದೆ ಮತ್ತು ಇವರ ಅಂತರ್ ಸಂಘರ್ಷವನ್ನು ಬಳಸಿಕೊಳ್ಳುವ ವಿಶ್ವಾಸದಲ್ಲಿದೆ.

ಕಾಂಗ್ರೆಸ್ ನಾಯಕರ ಈಗಿನ ವರಸೆ, ಕಿತ್ತಾಟ ಖಂಡಿತಕ್ಕೂ ಒಂದು ಸಕಾರಾತ್ಮಕರಾಜಕೀಯ ಸಂದೇಶವನ್ನು ಹೊರಡಿಸುವುದಿಲ್ಲ. ಜನರೂ ಬಿಜೆಪಿ, ಕಾಂಗ್ರೆಸ್ ಪಕ್ಷಗಳಿಗೆ ಪರ್ಯಾಯದ ಚಿಂತನೆಯಲ್ಲಿದ್ದಾರೆ ಎನ್ನುವುದನ್ನು ಈ ನಾಯಕ ಗಣ ಮರೆಯದಿರಲಿ.

ಆಹಾರ ಧಾನ್ಯಗಳು ಮತ್ತು ಪದಾರ್ಥಗಳ ಮೇಲೆ ಜಿಎಸ್‌ಟಿ ಹೇರಿಕೆ: ಸಿಪಿಐ(ಎಂ) ವಿರೋಧ



ಆಹಾರ ಧಾನ್ಯ ಹಾಗೂ ಪದಾರ್ಥಗಳಾದ ಅಕ್ಕಿ, ಗೋಧಿ, ಬಾರ್ಲಿ, ಮಂಡಕ್ಕಿ, ಮೊಸರು, ಮಜ್ಜಿಗೆ ಮುಂತಾದವುಗಳ ಮೇಲೆ ಕೇಂದ್ರದ ಒಕ್ಕೂಟ ಸರಕಾರ ಜಿಎಸ್‌ಟಿ ಹೇರಿರುವುದನ್ನು ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿ ಬಲವಾಗಿ ಖಂಡಿಸಿದೆ. ಅದಾಗಲೇ ಕಳೆದ ಮೂರು ವರ್ಷಗಳ ಕಾಲ ಕೋವಿಡ್ ಮತ್ತು ಅತೀವೃಷ್ಠಿ ಹಾಗೂ ಪ್ರವಾಹಗಳ ಕಾರಣದಿಂದ ನಲುಗಿ ಹೋಗಿರುವ ಜನತೆಯ ನೋವಿನ ಮೇಲೆ ಬರೆ ಎಳೆದಂತಾಗಿದೆ.

ದೇಶದಾದ್ಯಂತ ಪ್ರತಿ ಐದು ಸೆಕೆಂಡ್‌ಗೊಂದರಂತೆ ಹಸಿವು ಹಾಗೂ ಅಪೌಷ್ಠಿಕತೆಯ ಸಾವು ಸಂಭವಿಸುತ್ತಿದೆ. ಇಂತಹ ದುಸ್ಥಿತಿಯಿಂದ ಜನತೆಯನ್ನು ಮೇಲೆತ್ತುವ ಕ್ರಮ ವಹಿಸ ಬೇಕಾದ ಪ್ರಧಾನಿ ನರೇಂದ್ರ ಮೋದಿಯವರ ಒಕ್ಕೂಟ ಸರಕಾರದ ಈ ನಡೆ ಅಕ್ಷಮ್ಯವಾಗಿದೆ.

ಇಂತಹ ದುರಿತ ಕಾಲದಲ್ಲೂ ಲಕ್ಷಾಂತರ ಕೋಟಿ ರೂ. ಲೂಟಿ ಮಾಡಿ ಆದಾಯಗಳಿಸಿದ ಕಂಪನಿಗಳ ಮೇಲೆ ತೆರಿಗೆ ಹೇರಿ ಆದಾಯ ಗಳಿಸದೇ, ಈ ಸರಕಾರ ಅವುಗಳ ದಶ ಲಕ್ಷಾಂತರ ಕೋಟಿ ರೂಗಳ ಬಾಕಿ, ತೆರಿಗೆ ಮನ್ನಾ ಮಾಡಿ ಲೂಟಿಕೋರ ಕಾರ್ಪೋರೇಟ್ ಕಂಪನಿಗಳ ನೆರವು ನೀಡುತ್ತಿದೆ.

ಈ ಕೂಡಲೇ ಈ ತೆರಿಗೆ ಭಾರವನ್ನು ವಾಪಸು ಪಡೆಯುವಂತೆ ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿ ಪ್ರಧಾನ ಮಂತ್ರಿಗಳನ್ನು ಬಲವಾಗಿ ಒತ್ತಾಯಿಸಿದೆ.

ಈಶ್ವರಪ್ಪಗೆ 'ಬಿ' ರಿಪೋರ್ಟ್; ಸಂತೋಷ್ ಡೈರಿಯಲ್ಲಿ ಹೆಸರಿರುವುದು ಸುಳ್ಳೆ–ಸಿಪಿಐ(ಎಂ)

ಪೊಲೀಸರು ಬಿ ರಿಪೋರ್ಟ್ ಹಾಕುವ ಮೂಲಕ ಈಶ್ವರಪ್ಪರನ್ನು ಆರೋಪ ಮುಕ್ತಗೊಳಿಸಲು ಯತ್ನಿಸಿರುವುದು ರಾಜ್ಯ ಬಿಜೆಪಿ ಸರ್ಕಾರದ ಕುರಿತು ಹತ್ತು ಹಲವು ಅನುಮಾನಗಳನ್ನು ಮೂಡಿಸಿದೆ. ಇದರ ಜೊತೆಗೆ ಗುತ್ತಿಗೆ ಕಾಮಗಾರಿಗಳಲ್ಲಿ ಶೇ.40 ಕಮಿಷನ್, ಸಾವಿರಾರು ಕೋಟಿ ರೂಗಳ ಬಿಟ್ ಕಾಯಿನ್ ಹಗರಣ, ಗಂಗಾ ಕಲ್ಯಾಣ ಯೋಜನೆಯ ಸಾವಿರಾರು ಕೋಟಿ ಹಗರಣ, ಗೋಶಾಲೆಗಳ ಮೇವು ಹಗರಣ, ದಿನ ನಿತ್ಯ ಕಂದಾಯ ಸೇರಿದಂತೆ ಇನ್ನೂ ಹಲವಾರು ಹಗರಣಗಳ ಕುರಿತು ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಸ್ವತಂತ್ರ ನ್ಯಾಯಾಂಗ ತನಿಖೆಗೆ ಒಳಪಡಿಸಬೇಕೆಂದು ಒತ್ತಾಯಿಸಿತ್ತು. ಆದರೆ ರಾಜ್ಯದ ಬಿಜೆಪಿ ಸರ್ಕಾರ ಮಾತ್ರ ಈ ಎಲ್ಲ ಹಗರಣಗಳ ಕುರಿತಂತೆ ಯಾವುದೇ ನ್ಯಾಯಾಂಗ ತನಿಖೆಗೊಳಪಡಿಸದೇ ಸಾಗಿರುವುದು ನಿರ್ಲಜ್ಜ ನಡೆಯಾಗಿದೆ.

ಬೆಳಗಾವಿಯ ಹಿಂಡಲಗಾ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ನಡೆದ 4 ಕೋಟಿ ರೂ. ಕಾಮಗಾರಿಯ ವೆಚ್ಚ ಮಂಜೂರು ಮಾಡಲು ಈಶ್ವರಪ್ಪ ಶೇ.40 ಲಂಚದ ಬೇಡಿಕೆ ಇಟ್ಟಿದ್ದರೆಂದು ಸ್ವತಃ ಬಿಜೆಪಿ ಕಾರ್ಯಕರ್ತನಾಗಿದ್ದ ಮೃತ ಸಂತೋಷ ಪಾಟೀಲ ಬಹಿರಂಗವಾಗಿ ಆರೋಪಿಸಿದ್ದ. ರಾಜ್ಯದಲ್ಲಿ ವ್ಯಾಪಕವಾಗಿರುವ ಗುತ್ತಿಗೆ ಕಾಮಗಾರಿಗಳಲ್ಲಿ ಶೇ.40 ಕಮಿಷನ್ ಧಂಧೆ ತಡೆಯಲು ಪ್ರಧಾನ ಮಂತ್ರಿಗಳಿಗೆ ಕರ್ನಾಟಕ ಗುತ್ತಿಗೆದಾರರ ಸಂಘ ಬಹಿರಂಗವಾಗಿಯೇ ಮನವಿ ಮಾಡಿತ್ತು. ಮಾತ್ರವಲ್ಲ, ಮೃತ ಸಂತೋಷ ಪಾಟೀಲ ಡೆತ್ ನೋಟ್ ಬರೆದಿದ್ದರೆಂದ ಮಾಹಿತಿ ಇದೆ! ಆದಾಗಲೂ ನಮ್ಮ ಪೊಲೀಸರಿಗೆ ಸಾಕ್ಷಿ ದೊರೆಯದಿರುವುದು ಆಶ್ಚರ್ಯವಾಗಿದೆ. ಉನ್ನತ ಹುದ್ದೆಯಲ್ಲಿರುವವರ ಅಧಿಕಾರ ದುರುಪಯೋಗ ಎಂದೂ ಸಹ ಮುಕ್ತ ತನಿಖೆಗೆ ಅವಕಾಶ ನೀಡುವುದಿಲ್ಲ. ಹೀಗಾಗಿ ಪೊಲೀಸರು ಆಡಳತಾರೂಢರ ಒತ್ತಡಕ್ಕೆ ಒಳಗಾಗಬೇಕಾಗುತ್ತದೆ. ಇಂತಹ ಅಧಿಕಾರ ದುರುಪಯೋಗ ಕರ್ನಾಟಕ ಪೊಲೀಸ್ ಇಲಾಖೆಯ ಘನತೆ ಮತ್ತು ಇಲಾಖೆ ಮೇಲಿನ ಜನತೆಯ ವಿಶ್ವಾಸವನ್ನು ಕುಗ್ಗಿಸಲಿದೆ ಸಿಪಿಐ(ಎಂ) ಎಚ್ಚರಿಸಿದೆ. ಈ ಕೂಡಲೇ ಈ ಪ್ರಕರಣವೂ ಸೇರಿದಂತೆ ಈಗಾಗಲೆ ಹೇಳಲಾದ ಹಗರಣಗಳು ಜಗತ್ತಿನ ಮುಂದೆ ಕರ್ನಾಟಕದ ಘನತೆಗೆ ತೀವ್ರ ಹಾನಿಯನ್ನುಂಟು ಮಾಡಿವೆ.

ಈಗಲಾದರೂ ಅವುಗಳನ್ನು ಸ್ವತಂತ್ರ ನ್ಯಾಯಾಂಗ ತನಿಖೆಗೊಳಪಡಿಸಿ ಸರಕಾರದ ಮೇಲಿನ ಕಳಂಕಗಳನ್ನು ತೊಳೆದುಕೊಳ್ಳುವಂತೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿರನ್ನು ಸಿಪಿಐ(ಎಂ) ಕರ್ನಾಟಕ ರಾಜ್ಯ ಸಮಿತಿ ಮತ್ತೊಮ್ಮೆ ಬಲವಾಗಿ ಒತ್ತಾಯಿಸಿದೆ.

ಚಿಂತಕ, ವಿಮರ್ಶಕ, ಹೋರಾಟಗಾರ ಜಿ.ರಾಜಶೇಖರ್ ನಿಧನಕ್ಕೆ ಸಿಪಿಐ(ಎಂ) ಕಂಬನಿ

ಚಿಂತಕ, ವಿಮರ್ಶಕ, ಹೋರಾಗಾರ – ಹೀಗೆ ಬಹುಮುಖ ವ್ಯಕ್ತಿತ್ವದ ಜಿ.ರಾಜಶೇಖರ್ ನಿಧನದಿಂದ ಉಡುಪಿ ಜಿಲ್ಲೆಯ ಪ್ರಜಾಸತ್ತಾತ್ಮಕ ಚಳುವಳಿಗೆ ತುಂಬಲಾರದ ನಷ್ಟ ಉಂಟಾಗಿದೆ ಎಂದು ಸಿಪಿಐ(ಎಂ) ಉಡುಪಿ ಜಿಲ್ಲಾ ಸಮಿತಿ ಅಭಿಪ್ರಾಯ ಪಡುತ್ತದೆ.

ಉಡುಪಿಯ ಜೀವ ವಿಮಾ ಸಂಸ್ಥೆಯಲ್ಲಿ ಕೆಲಸ ಮಾಡುವಾಗಲೇ ಅಲ್ಲಿನ ನೌಕರರ ಬಗ್ಗೆ ಹೋರಾಟ ಮಾಡುತ್ತಲೇ ಅಂದು ಬೆಳೆಯುತ್ತಿದ್ದ ಕೋಮುವಾದದ ವಿರುದ್ದ ಗಟ್ಟಿಯಾದ ಧ್ವನಿ ಎತ್ತಿದರು. ಜೀವ ಬೆದರಿಕೆ ಬಂದಾಗಲೂ ಎದೆಗುಂದಲಿಲ್ಲ.

ಗ್ಯಾಟ್ ಒಪ್ಪಂದದ ವಿರುದ್ದ ಎಡ ಪಕ್ಷಗಳ ನೇತ್ರತ್ವದ ಕಾರ್ಮಿಕ ಸಂಘಟನೆಗಳು ರಾಜ್ಯದಾದ್ಯಂತ ಜಾಥಾಗಳನ್ನು ಸಂಘಟಿಸಿ ಬೆಂಗಳೂರಿನಲ್ಲಿ ಬ್ರಹತ್ ಪ್ರತಿಭಟನೆ ಹಮ್ಮಿಕೊಂಡ ಸಂದರ್ಭದಲ್ಲಿ ಮಂಗಳೂರಿನಿಂದ ಹೊರಟ ಜಾಥಾದ ಭಾಗವಾಗಿದ್ದ,ರಾಜಶೇಖರ್ ಜಾಗತೀಕರಣ, ಖಾಸಗೀಕರಣ ನೀತಿಗಳಿಂದ ಜನಸಾಮಾನ್ಯರಿಗೆ ಹೇಗೆ ತೊಂದರೆ ಆಗುತ್ತದೆ ಎಂದು ದಾರಿಯುದ್ದಕ್ಕೂ ವಿವರಿಸಿದರು.

ಕಾಗೋಡು ಸತ್ಯಾಗ್ರಹದ ಬಗ್ಗೆ ಅವರು ಬರೆದ ಪುಸ್ತಕ, ಗೇಣಿದಾರರ ಬಗ್ಗೆ ಅವರಿಗಿದ್ದ ಕಾಳಜಿ ತೋರಿಸಿದ್ದು ಮಾತ್ರವಲ್ಲದೆ ರಾಜ್ಯದ ಒಂದು ಪ್ರಮುಖ ಹೋರಾಟವನ್ನು ದಾಖಲಿಸಿದ ಗೌರವಕ್ಕೆ ಪಾತ್ರರಾಗಿದ್ದಾರೆ.

ಗೆಳೆಯರ ಒತ್ತಾಯದ ಮೇರೆಗೆ ತನ್ನ ಕೆಲವು ಪ್ರಮುಖ ಲೇಖನಗಳನ್ನು ಬಹುವಚನ ಭಾರತ ಎಂಬ ಪುಸ್ತಕದ

ಪುಟ 7ಕ್ಕೆ

ಜನ ಚಳುವಳಿಯ ಒಡನಾಡಿ ಜಿ. ರಾಜಶೇಖರ

ವಾಸುದೇವ ಉಚ್ಚಿಲ

ಕರ್ನಾಟಕದ ಹೆಮ್ಮೆಯ ಚಿಂತಕ ಹಾಗೂ ಸಾಹಿತ್ಯ ವಿಮರ್ಶಕ ಜಿ.ರಾಜಶೇಖರ ಜುಲೈ 20ರ ರಾತ್ರಿ ನಿಧನರಾದರು. ಅವರಿಗೆ 76 ವರ್ಷ ವಯಸ್ಸಾಗಿತ್ತು. ಕಳೆದ 3 ವರ್ಷಗಳಿಂದ ಪಾರ್ಕಿನ್ಸನ್ ಪ್ಲಸ್ ಕಾಯಿಲೆಯಿಂದ ಬಳಲುತ್ತಿದ್ದರು.

ಕರ್ನಾಟಕದ ಓದುಗ ಬಳಗದ ಮಧ್ಯೆ ಅವರು ತಮ್ಮ ನಿಶಿತ ಬರವಣಿಗೆ ಹಾಗೂ ಅದರ ಸರಳಗ್ರಾಹ್ಯ ಭಾಷೆಗಾಗಿ ಮೆಚ್ಚುಗೆ ಗಳಿಸಿದ್ದರು. ಪ್ರೌಢವಾದ ಚಿಂತನೆಗಳು ಹತ್ತನೇ ತರಗತಿ ನಪಾಸಾದ ವ್ಯಕ್ತಿಗೂ ಅರ್ಥವಾಗುವಂತೆ ಬರೆಯಬೇಕು ಎಂಬುದು ಅವರ ವಿಚಾರವಾಗಿತ್ತು. ಅಂತೆಯೇ ಅವರು ಬರೆಯುತ್ತಿದ್ದರು. ಹಾಗೂ ಮಾತನಾಡುತ್ತಿದ್ದರು ಕೂಡಾ. ಸಾಹಿತ್ಯ ಕೃತಿಗಳ ಕುರಿತಾದ ಅವರ ವಿಮರ್ಶೆಗಳು ಕೂಡಾ ಯಾವತ್ತೂ ಅರ್ಥಭಾರದಿಂದ ಬಳಲುತ್ತಿರಲಿಲ್ಲ. ಅರ್ಥವಾಗದಂತೆ ಕೃತಿಯ ಬಗ್ಗೆ ವಿವರಣೆ ನೀಡುವಂತೆ ಬರೆಯುವುದೇ ವಿಮರ್ಶೆ ಎಂಬ ಭ್ರಮೆಯನ್ನು ಅವರು ಕಿತ್ತು ಹಾಕಿದರು. ಸಮಾಜ, ರಾಜಕೀಯ, ಸಂಸ್ಕೃತಿ, ಸಾಹಿತ್ಯ ಕೃತಿಗಳ ಬಗ್ಗೆ ಬರೆದಾಗಲೂ ಅದು ಸಾಮಾನ್ಯ ಓದುಗನಿಗೆ ದಕ್ಕುವಂತೆ ಬರೆಯುತ್ತಿದ್ದರು.

ಜಿ.ರಾಜಶೇಖರ ತಮ್ಮ ಬರವಣಿಗೆಯ ಮೂಲಕ ಮೊದಲಿಗೆ ಕನ್ನಡಿಗರಿಗೆ ಪರಿಚಯವಾದವರು. ಬಳಿಕ ತಮ್ಮ ಮಾನವ ಹಕ್ಕು ಹೋರಾಟಗಳ ಕಾರಣಗಳಿಗಾಗಿ, ಕೋಮುವಾದದ ವಿರುದ್ಧ ನಿರ್ಭೀತಿಯ ಚಳುವಳಿಗಾಗಿ ಇನ್ನಷ್ಟು ಪರಿಚಿತರಾಗುತ್ತಾ ಹೋದರು. ಅವರು ಹೋರಾಟವನ್ನು ತಮ್ಮ ಸಾಹಿತ್ಯ ಹಾಗೂ ಸಂಸ್ಕೃತಿ ಅಧ್ಯಯನದ ಮುಂದುವರಿಕೆಯಾಗಿಯೇ ನಡೆಸಿದವರು.

ಸಾಹಿತ್ಯ ವಿಮರ್ಶಕನಾಗಿ ಜಿ.ರಾಜಶೇಖರ:

ಸಾಹಿತ್ಯ ವಲಯದ ಹಿನ್ನೆಲೆಯ ಕುಟುಂಬದಿಂದ ಬಂದ ರಾಜಶೇಖರರು ಎಳವೆಯಲ್ಲಿ ತುಂಬ ಬಡತನ ಮತ್ತು ಕಷ್ಟಗಳನ್ನು ಅನುಭವಿಸಿದರು. ಉಡುಪಿಯ ಎಂಜಿಎಂ ಕಾಲೇಜಿನಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವಾಗಲೇ ಅವರು ಅಲ್ಲಿನ ಗ್ರಂಥಾಲಯದ ಶ್ರೇಷ್ಠ ಗ್ರಂಥಗಳನ್ನು ಓದಲು ಅಭ್ಯಸಿಸಲು ಪ್ರಾರಂಭಿಸಿದರು. ಅಲ್ಲಿನ ಪ್ರಿನ್ಸಿಪಾಲ್ ಸಾಹಿತಿ ಕು.ಶಿ.ಹರಿದಾಸಭಟ್ಟರ ಪ್ರೋತ್ಸಾಹವೂ ಅವರ ವಿಕಸನಕ್ಕೆ ದಾರಿ ಮಾಡಿಕೊಟ್ಟಿತು. ಮುಂದೆ ಜೀವವಿಮಾ ನಿಗಮದಲ್ಲಿ ನೌಕರಿ ಹಿಡಿದ ಮೇಲೆ, ಅಲ್ಲಿನ ನೌಕರ ಸಂಘಟನೆಯಲ್ಲಿ ತೊಡಗಿಸಿಕೊಂಡುದು, ಅವರಿಗೆ ವಿವಿಧ ಜ್ಞಾನ ಶಿಸ್ತುಗಳನ್ನು ಕಲಿತು ಬೆಳೆಯುವುದಕ್ಕೆ ಅವಕಾಶ ಒದಗಿಸಿತು. ಮಾರ್ಕ್ಸ್‌ವಾದ ಹಾಗೂ ಇತರ ಬೌದ್ಧಿಕ ಚಿಂತನೆಗಳನ್ನು ಅವರ ಅಧ್ಯಯನದ ಭಾಗವಾಗಿ ಅಂತರ್ಗತಗಳಿಸಿಕೊಂಡರು. ಪ್ರಪಂಚದ ಇತರ ಅನೇಕ ತತ್ವಶಾಸ್ತ್ರೀಯ ಚಿಂತನೆಗಳು – ಅಂಬೇಡ್ಕರ್ ವಿಚಾರಧಾರೆಯನ್ನು ಒಳಗೊಂಡು ಅವರ ಸ್ವಾಧ್ಯಾಯದ ಹರವಿನಲ್ಲಿ ಒಳಗೊಂಡಿವೆ. ಆಧುನಿಕ ಕನ್ನಡ ಸಾಹಿತ್ಯದ ವಿಸ್ತಾರವಾದ ಓದು ಅವರದಾಯಿತು. ಅನೇಕ ಸಾಹಿತ್ಯ ಕೃತಿಗಳ ಬಗ್ಗೆ ಅವರು ಮೊದಲಿನಿಂದಲೇ ವಿಮರ್ಶೆ ಬರೆಯುತ್ತಾ ಬಂದಿದ್ದಾರೆ. ವಿಶ್ವವಿದ್ಯಾಲಯ ಪ್ರಾಧ್ಯಾಪಕರ ಭಾಷೆಯಲ್ಲಿ ಇಲ್ಲದ ವಿಶಿಷ್ಟ ರೀತಿಯ ವಿಮರ್ಶಾ ಭಾಷೆಯನ್ನು ಒಳಗೊಂಡ ಬರವಣಿಗೆಗೆ ಅವರದೇ ಆದ ಛಾಪು ನೀಡಿದರು. ಇವುಗಳ ಜೊತೆ ಜೊತೆಗೆ ಸಾಮಾಜಿಕ ಆರ್ಥಿಕ ಅಧ್ಯಯನಗಳ ಭಾಗವಾಗಿ, ದಕ್ಷಿಣ ಕನ್ನಡದಲ್ಲಿ ಭೂಮಿಯ ಪ್ರಶ್ನೆಗಳು, ಮಲೆನಾಡಿನ ಕಾಫಿ ಕಾರ್ಮಿಕರ ಸ್ಥಿತಿಗತಿ ಕುರಿತಾದ ಅವರ ಬರಹಗಳು ಸಾಹಿತ್ಯಕ ಪತ್ರಿಕೆಗಳಲ್ಲಿ ಪ್ರಕಟಗೊಂಡು, ಅವರ ಬರವಣಿಗೆಗೆ – ಅದರಲ್ಲೂ ಆರ್ಥಿಕತೆ ಸಮಾಜ ಕುರಿತಾದ ಬರವಣಿಗೆಗೆ – ಕನ್ನಡದ ಮಟ್ಟಿಗೆ ಮೊತ್ತ ಮೊದಲ ಅಂಗೀಕಾರ ಓದುಗರಿಂದ



ದಕ್ಕಿದ್ದು ಜಿ.ರಾಜಶೇಖರರ ಬರವಣಿಗೆಗೇ ಅಂತ ಕಾಣುತ್ತದೆ. ಅದರ ಮುಂದುವರಿದ ಪ್ರಯತ್ನವಾಗಿ ಅವರ 'ಕಾಗೋಡು ಸತ್ಯಾಗ್ರಹ' ಕೃತಿ ಕನ್ನಡದ ಮಟ್ಟಿಗೆ ಒಂದು ಸಾಮಾಜಿಕ ಅಧ್ಯಯನವನ್ನು ಸೃಜನಶೀಲ ಸಾಹಿತ್ಯಕೃತಿ ಎಂಬಂತೆ ಓದುಗವರ್ಗ ಪರಿಗಣಿಸಿದ ವಿದ್ಯಮಾನವನ್ನು ನಾವು ನೋಡುತ್ತೇವೆ.

ಜಿ.ರಾಜಶೇಖರ ಅವರು ಸಾಹಿತ್ಯದ ಕುರಿತು ಮಾತ್ರವಲ್ಲ, ಸಮಾಜ, ರಾಜಕೀಯ, ಸಂಸ್ಕೃತಿ, ಜನಜೀವನದ ಬಗ್ಗೆ ಲೆಕ್ಕವಿರದಷ್ಟು ಲೇಖನಗಳನ್ನು ಬರೆದಿದ್ದಾರೆ. ಅವುಗಳು ಪತ್ರಿಕೆಗಳಲ್ಲೋ, ಕೆಲವು ಸಾಹಿತಿಗಳ ಕೃತಿಗಳಿಗೆ ಮುನ್ನುಡಿಗಳಾಗಿ ಮುದ್ರಿತವೂ ಆಗಿವೆ. ಆದರೆ ಅವುಗಳೆಲ್ಲವನ್ನೂ ಪುಸ್ತಕ ರೂಪದಲ್ಲಿ ತರುವ ಹಠ ಅವರಲ್ಲಿ ಇರಲಿಲ್ಲ. ತಾನು ಬರೆದುದರಲ್ಲಿ ಅಂಥದ್ದೇನಿದೆ ಎಂಬ ವಿನಯಭಾವ ಅವರದ್ದಾಗಿದೆ. ಅವರ ಕೆಲವು ಅಭಿಮಾನಿ ಮಿತ್ರರು ಕೆಲವು ಬರಹಗಳನ್ನು ಒಟ್ಟುಗೂಡಿಸಿ ಗ್ರಂಥ ರೂಪದಲ್ಲಿ ತಂದಿರುವುದಷ್ಟು ಕನ್ನಡಿಗರ ಸೌಭಾಗ್ಯವಾಗಿ ಉಳಿದಿದೆ.

ಮಾರ್ಕ್ಸ್‌ವಾದದಲ್ಲಿ ಪ್ರೌಢ ಅಧ್ಯಯನಕಾರನಾಗಿ:

ಮಾರ್ಕ್ಸ್‌ವಾದಿ ಚಿಂತನಕ್ರಮವನ್ನು ಜಿ.ರಾಜಶೇಖರರು ತಮ್ಮ ವಿಶ್ಲೇಷಣ ಹಾಗೂ ಅಧ್ಯಯನ ಕ್ರಮದಲ್ಲಿ ತಂದಿದ್ದಾರೆ ಎಂದು ನಾವು ಹೇಳುವಾಗಲೂ, ಆ ಚೌಕಟ್ಟಿಗೆ ಹೊರಗಾಗಿರುವ ವಿದ್ಯಮಾನಗಳನ್ನು ವಿಶ್ಲೇಷಿಸುವ ಮಾರ್ಗವನ್ನು ಅವರು ತಮ್ಮ ಬರವಣಿಗೆಯಲ್ಲಿ ಶೋಧಿಸಿದ್ದಾರೆ ಅನಿಸುತ್ತದೆ. ಪ್ರಜಾಪ್ರಭುತ್ವ, ಕಾನೂನಿನ ಆಳ್ವಿಕೆ, ಬಹುತ್ವ, ಸಹಬಾಳ್ವೆ, ಸೆಕ್ಯುಲರಿಸಂ ಇವುಗಳು ಮಾರ್ಕ್ಸ್‌ವಾದದ ಅಂತಸ್ಸತ್ವ ಎಂದು ಪರಿಗಣಿಸುವ ಅವರು, ಅದಕ್ಕಾಗಿಯೇ ಸರ್ವಾಧಿಕಾರ, ಹಿಂಸೆ, ದಬ್ಬಾಳಿಕೆ, ಫ್ಯಾಸಿವಾದವನ್ನು ಕಟುವಾಗಿ ಟೀಕಿಸುವವರು. ಮಾರ್ಕ್ಸ್‌ವಾದಿ ಚಿಂತನೆಯೂ ಹಿಂಸೆಗೆ ದಾರಿ ಕೊಡಕೂಡದು ಎಂಬುದು ಅವರ ಎಚ್ಚರದ ಮಾತು. ಹಾಗಾಗಿ ಸ್ಟಾಲಿನ್ ಕಾಲದ ರಶ್ಯಾದ ನಡೆಗಳನ್ನು, ತಯಾನನ್‌ಮೆನ್‌ಸ್ಕ್ವೇರ್‌ನಲ್ಲಿ ಚೀನಾದಲ್ಲಿ ನಡೆದ ಅನಾಹುತಗಳನ್ನು ಅತ್ಯಂತ ವ್ಯಥೆಯಿಂದ ನಿರೂಪಿಸುತ್ತಾರೆ. ಹಾಗೆ ನಿರಾಕರಿಸಿದಾಗಲೂ, ಜಗತ್ತಿನ ಬಡವರಿಗೆ ಮಾರ್ಕ್ಸ್‌ವಾದವೊಂದೇ ಬೆಳಕು ಎಂಬ ಆಶಾವಾದ ಅವರದಾಗಿದೆ. ಭಾರತದ ಸಂದರ್ಭದಲ್ಲಿ ಭಾರತದ ಸಂವಿಧಾನ, ಅಂಬೇಡ್ಕರ್ ಚಿಂತನೆ, ಮಾನವ ಹಕ್ಕುಗಳ ರಕ್ಷಣೆ ಕೂಡಾ ಬಡವರನ್ನು ಸಂರಕ್ಷಿಸುವ ಆಯುಧಗಳೆಂದು ಅವರು ಪರಿಗಣಿಸುತ್ತಾರೆ.

1980ರ ದಶಕದ ಮಧ್ಯಭಾಗದಿಂದ ಭಾರತದಲ್ಲಿ ಹೆಚ್ಚುತ್ತಿರುವ ಕೋಮುವಾದದ ಹಿಂಸೆಯು, ಸ್ಪಷ್ಟವಾಗಿ ಮಾನವ ಹಕ್ಕುಗಳ ದಮನವಾಗಿದೆ ಎಂದು ಪರಿಗಣಿಸಿರುವ ಜಿ.ರಾಜಶೇಖರ, ಈ ಹಿಂಸೆಯು ಅಂತಿಮವಾಗಿ ಭಾರತದಲ್ಲಿ ಅಲ್ಪಸಂಖ್ಯಾಕರ ಮತ್ತು ತಳವರ್ಗದವರ ದಬ್ಬಾಳಿಕೆ ಎಂಬುದಾಗಿ ಗುರುತಿಸುತ್ತಾರೆ. ಇದು– ಬಂಡವಾಳಶಾಹಿ ಹಾಗೂ ನವ ವಸಾಹತುಶಾಹಿಯ ದಮನ, ಕಣ್ಣಿಗೆ ಕಾಣಿಸಿಕೊಳ್ಳುವ ರೂಪ ಎಂದು ವಿವರಿಸುತ್ತಾರೆ. ಹಿಂದುತ್ವ ಕೋಮುವಾದದ ವಿಕೃತಿಗಳನ್ನು ಅವರು ಬಹಿರಂಗಪಡಿಸುವಾಗಲೂ, ಅದರ ಹಿಂದಿರುವ ಬಂಡವಾಳಶಾಹಿ ಕ್ರೌರ್ಯವನ್ನು ಅವರು ಮರೆಯುವುದಿಲ್ಲ. ಈ ನಿಟ್ಟಿನಲ್ಲಿ ಮಾರ್ಕ್ಸ್‌ನ 'ಕ್ಯಾಪಿಟಲ್' ಗ್ರಂಥದ ಕನ್ನಡನುವಾದ ಕಾರ್ಯದಲ್ಲಿ ಈ ಐದಾರು ವರ್ಷಗಳ ಹಿಂದೆ ಅವರು ಸಹಭಾಗಿತ್ವ ವಹಿಸಿದ್ದನ್ನು ಗಮನಿಸಬಹುದು.

ಕೋಮುವಾದದ ವಿರುದ್ಧ ದೃಢ ಹೋರಾಟಗಾರನಾಗಿ:

ಹಾಗಿದ್ದಾಗ್ಯೂ, ದ.ಕ. ಮತ್ತು ಉಡುಪಿ ಜಿಲ್ಲೆಗಳಲ್ಲಿ ಕಳೆದ ಮೂರುವರೆ ದಶಕಗಳಿಂದ ಹಿಂದುತ್ವ ಕೋಮುವಾದದ ಆರ್ಭಟವನ್ನು ಹರಿತವಾದ ವಿಶ್ಲೇಷಣೆಗೆ ಒಳಪಡಿಸುತ್ತಾರೆ. ಭಾರತದಲ್ಲಿ ಇವತ್ತು ನಡೆಯುತ್ತಿರುವುದು ಕೋಮು ಸಂಘರ್ಷವಲ್ಲ, ಅದು ಮುಸ್ಲಿಮರ ಮೇಲೆ ಏಕಮುಖಿಯಾಗಿ ನಡೆಯುತ್ತಿರುವ ಹಿಂದುತ್ವದ ದಾಳಿ ಎಂದು ಬಹುಶ: ಮೊದಲಾಗಿ ಹೇಳಿದವರು ಜಿ.ರಾಜಶೇಖರರೇ ಇರಬೇಕು ಅನಿಸುತ್ತದೆ. ಇದಕ್ಕಾಗಿ ಅವರು ಮುಸ್ಲಿಮರ ತಪ್ಪುಗಳನ್ನು ಅವಗಣಿಸಲು ಸಿದ್ಧರಾಗಿದ್ದರು. ಹಾಗಾಗಿ ಕರಾವಳಿ ಜಿಲ್ಲೆಗಳಲ್ಲಿ ಎಲ್ಲೆಲ್ಲಿ ಅಲ್ಪಸಂಖ್ಯಾಕರ ಮೇಲೆ ಹಲ್ಲೆ, ದಮನ, ಕಿರುಕುಳ ನಡೆದಿವೆಯೋ ಅಲ್ಲಿಗೆ ಅವರು ತನ್ನ ಗೆಳೆಯರ ಬಳಗ ಕಟ್ಟಿಕೊಂಡು ಭೇಟಿ ನೀಡಿ, ಸತ್ಯಶೋಧನ ವರದಿಗಳನ್ನು ಕಾಲಕಾಲಕ್ಕೆ ಪತ್ರಿಕೆಗಳಲ್ಲಿ ಪ್ರಕಟಿಸಿದರು. ನಿರ್ದಾಕ್ಷಿಣ್ಯವಾಗಿ ಹಿಂದುತ್ವದ ಸಂಚನ್ನೂ ಬಹಿರಂಗಗೊಳಿಸಿ ಖಂಡಿಸಿದರು. ಯಾವ ಜೀವಬೆದರಿಕೆಗೂ ಅಳುಕಲಿಲ್ಲ. ಹಾಜಬ್ಬ–ಹಸನಬ್ಬ ಪ್ರಕರಣವಿರಲಿ, ಸುರತ್ಕಲ್ ದಾಳಿಗಳೇ ಇರಲಿ, ಚರ್ಚ್ ದಾಳಿಗಳೇ ಇರಲಿ, ಗೋಸಾಗಾಟದ ಹೆಸರಲ್ಲಿ ನಡೆಸಿದ ದಾಂಧಲೆಗಳೇ ಇರಲಿ, ಲವ್‌ಜಿಹಾದ್ ಹೆಸರಿನ ದಾಳಿಗಳೇ ಇರಲಿ, ಬಹುಶ: ಈ ಮೂರುವರೆ ದಶಕಗಳಲ್ಲಿ ಅವರು ಭೇಟಿ ನೀಡದ ಕರಾವಳಿಯ ಹಳ್ಳಿಗಳೇ ಇರಲಿಕ್ಕಿಲ್ಲ. ಈ ನಿಟ್ಟಿನಲ್ಲಿ ಕರ್ನಾಟಕ ಕೋಮು ಸೌಹಾರ್ದ ವೇದಿಕೆಯ ಕಾರ್ಯಕರ್ತನೆಂಬಂತೆ ಅವರು ಸೇವಾ ನಿವೃತ್ತಿಯ ಬಳಿಕದ ದಿನಗಳಲ್ಲಿ ದುಡಿದದ್ದು ವಿಶೇಷ. ಅಷ್ಟು ಮಾತ್ರವಲ್ಲ, ಅವೆಲ್ಲವನ್ನೂ ಬರಹ ರೂಪದಲ್ಲಿ ಪತ್ರಿಕೆಗಳಲ್ಲಿ – ವಿಶೇಷವಾಗಿ ಲಂಕೇಶ್ ಪತ್ರಿಕೆ, ಗೌರಿ ಲಂಕೇಶ್–ಪತ್ರಿಕೆಗಳಲ್ಲಿ ಪ್ರಕಟಿಸಿದ್ದಾರೆ. ಈ ಬರಹಗಳೆಲ್ಲವೂ ಪುಸ್ತಕವಾಗಿ ಬರದಿದ್ದರೂ, ಆ ಬರಹಗಳು ಇವತ್ತಿಗೂ ನಮಗೆ ಒದಗಿ ಬರಬಹುದಾದ ಪ್ರೌಢ ಮಾರ್ಗದರ್ಶಿಯಾಗಿವೆ. ಈ ಕ್ರಿಯಾಶೀಲತೆಯ ಮಧ್ಯೆಯೂ ಸಾಹಿತ್ಯ ಕೃತಿಗಳ ವಿಮರ್ಶೆ, ಕಲಾ ವಿಮರ್ಶೆ ಅವರು ನಡೆಸಿದ್ದಾರೆ; ಈಗಾಗಲೇ ಹೇಳಿರುವಂತೆ ಅವು ಅವರ ಮಟ್ಟಿಗೆ ಬೇರೆ ಬೇರೆ ಚಟುವಟಿಕೆಗಳಲ್ಲ.

ಜಿ.ರಾಜಶೇಖರ ಅವರ ಆಯ್ದ ಬರಹಗಳು, ಕಾಗೋಡು ಸತ್ಯಾಗ್ರಹ, ಬರ್ಟೋಲ್ಟ್ ಬ್ರೆಕ್ಟ್ ಪರಿಚಯ, ಕೋಮುವಾದದ ಕರಾಳ ಮುಖಗಳು, ಬಹುವಚನ ಭಾರತ – ಈ ಗ್ರಂಥಗಳು ಜಿ.ರಾಜಶೇಖರರ ಕೆಲವೇ ಬರಹಗಳನ್ನು ಸಂಗ್ರಹಿಸಿ ಪ್ರಕಟಿಸಿದ್ದು, ಅವರ ಬರಹದ ಪ್ರಖರತೆ, ಸತ್ಯನಿಷ್ಠೆ, ನಿರ್ದಾಕ್ಷಣ್ಯತೆಗೆ ಉದಾಹರಣೆಯಾಗಿವೆ; ಯಾವತ್ತೂ ಈ ಗ್ರಂಥಗಳನ್ನು ತೆರೆದು ಓದಿ ನಾವು ಬೆಳಕು ಕಾಣಬಹುದಾಗಿದೆ. ಹಾಗೆಯೇ ಅವರು ಅನುವಾದಿಸಿರುವ ರೇಮಂಡ್ ವಿಲಿಯಮ್ಸ್‌ನ 'ಪರಿಸರ ಮತ್ತು ಸಮಾಜವಾದ', 'ದಾರು ಪ್ರತಿಮಾ ನ ಪೂಜಿವೇ', 'ಹರ್ಷಮಂದರ್ ಬರಹಗಳು' (ಸಹ ಲೇಖಕ: ಕೆ.ಫಣಿರಾಜ್)–ಇವು ಪ್ರಕಟವಾಗಿರುವ ಅವರ ಇತರ ಪುಸ್ತಕಗಳು. ಅವರ ಸಮಗ್ರ ಬರಹಗಳ ಸಂಪಾದನೆ ನಡೆದು ಕನ್ನಡ ಓದುಗ ಬಳಗಕ್ಕೆ ದಕ್ಕಿದಲ್ಲಿ, ಅದೊಂದು ದೊಡ್ಡ ಸಂಪತ್ತೇ ಸರಿ.

ಕರ್ನಾಟಕದಲ್ಲಿ ಪ್ರಜಾಪ್ರಭುತ್ವ ಚಳುವಳಿಯಲ್ಲಿ ತೊಡಗಿರುವ ನಮಗೆಲ್ಲರಿಗೆ ಜಿ.ರಾಜಶೇಖರ ಇನ್ನಿಲ್ಲವಾಗುವುದನ್ನು ಸಹಿಸಿಕೊಳ್ಳುವುದು ಕಷ್ಟ. ಅವರ ಕೃತಿಗಳಲ್ಲಿ ನಾವು ಮತ್ತೆ ಅವರನ್ನು ಕಾಣಬೇಕಾಗಿದೆ. ನಾಡಿನ ಎಡವಾದಿ ಚಿಂತಕರು ಸಂಘಟನೆಗಳು, ಅಂಬೇಡ್ಕರ್‌ವಾದಿಗಳು ಹಾಗೂ ಸಂಘಟನೆಗಳು, ಮಾನವತಾವಾದಿಗಳು ಅವರಿಗೆ ಶ್ರದ್ಧಾಂಜಲಿ ಸಲ್ಲಿಸುತ್ತಿದ್ದಾರೆ. ಕಳೆದ 40 ವರ್ಷಗಳಿಗೂ ಮೀರಿ ಅವರು ನಮ್ಮೆಲ್ಲರ ಮಾರ್ಗದರ್ಶಕರಾಗಿದ್ದರು. ಅವರ ಸಾಮೀಪ್ಯದಿಂದ ನಾವು ಸಾಕಷ್ಟು ಕಲಿತುಕೊಂಡಿದ್ದೇವೆ. ಜನಪರ ಚಳುವಳಿ, ಹೋರಾಟಗಳಲ್ಲಿ ಅನಗತ್ಯ ಹಿಂಸೆ, ಅಮಾನವೀಯತೆ ಕಾಣಿಸಿಕೊಂಡಾಗ ಅವರು ನಮಗೆ ತಪ್ಪನ್ನು ಮನಗಾಣಿಸುತ್ತಿದ್ದರು. ಈ ಅರ್ಥದಲ್ಲಿ ಅವರು ಮಾನವತೆಯ ಸಾಕ್ಷೀ ಪ್ರಜ್ಞೆಯಾಗಿದ್ದರು.

ಆದಿವಾಸಿ ಹಕ್ಕುಗಳ ಸಮಿತಿಯಿಂದ ಮೇಯರ್‌ರವರಿಗೆ ನಿವೇಶನ ಗಡಿಗುರುತಿಗಾಗಿ ಮನವಿ

ಮಂಗಳೂರು ಮಹಾನಗರ ಪಾಲಿಕೆಯ ಮಂಗಳಜ್ಯೋತಿ ಸಮೀಪದಲ್ಲಿ 1930ರ ಕಾಲಘಟ್ಟದಲ್ಲಿ ಕುದ್ಮುಲ್ ರಂಗರಾಯರ ಶಿಷ್ಯ ವೆಂಕಟರಾವ್ರವರಿಂದ ಕೊರಗ ಸಮುದಾಯದ ಕುಟುಂಬಗಳ ಉಪಯೋಗಕ್ಕಾಗಿ ದಾನ ರೂಪದಲ್ಲಿ ಕೊಟ್ಟಿರುವ ಜಮೀನಿನಲ್ಲಿ ಸುಮಾರು ಒಂದು ಎಕರೆ ಭೂಮಿಯಲ್ಲಿ ನಿವೇಶನರಹಿತರ ಕೊರಗ ಕುಟುಂಬಗಳನ್ನು 2018ರಲ್ಲಿ ಮಹಾನಗರ ಪಾಲಿಕೆಯು ಗುರುತಿಸಿದೆ.

ಆದರೆ ನಿವೇಶನ ಮಂಜೂರಾತಿ ಪತ್ರ ಮತ್ತು ಗಡಿಗುರುತುಗಳನ್ನು ನಿಗದಿ ಮಾಡಿ ದಾಖಲೆಪತ್ರಗಳನ್ನು ಈ ತನಕವೂ ನೀಡದಿರುವುದು ಕರಾವಳಿ ಕರ್ನಾಟಕದ ಮೂಲನಿವಾಸಿಗಳಾಗಿರುವ ಕೊರಗ ಸಮುದಾಯದ ಬಗ್ಗೆ ಮಹಾನಗರ ಪಾಲಿಕೆಯ ಧೋರಣೆಯ ಪ್ರತಿಬಿಂಬವಾಗಿದೆ. ಈ ಹಿನ್ನೆಲೆಯಲ್ಲಿ ಸ್ವಂತ ಮನೆ ಇಲ್ಲದೆ ಅತ್ಯಂತ ಕಷ್ಟದಲ್ಲಿರುವ ಹಾಲಿ ಮಹಾನಗರ ಪಾಲಿಕೆ ಗುರುತಿಸಿರುವ 33 ಕುಟುಂಬಗಳಿಗಾಗಿ ನಿವೇಶನದ ದಾಖಲೆಪತ್ರ ಮತ್ತು ಗಡಿಗುರುತುಗಳನ್ನು ನಿಗದಿಪಡಿಸಿ ಹಸ್ತಾಂತರಿಸಲು ಆಗ್ರಹಿಸಿ ದಿನಾಂಕ 21-07-2022ರಂದು ಮಂಗಳೂರು ಮಹಾನಗರ ಪಾಲಿಕೆಯ ಮೇಯರ್ ಪ್ರೇಮಾನಂದ ಶೆಟ್ಟಿಯವರಿಗೆ ಹಾಗೂ ಕಮಿಷನರ್‌ರವರಿಗೆ ಆದಿವಾಸಿ ಹಕ್ಕುಗಳ ಸಮನ್ವಯ ಸಮಿತಿ ಇದರ ಸ್ಥಳೀಯ ಮಂಗಳಜ್ಯೋತಿ ಘಟಕವು ಮನವಿ ಸಲ್ಲಿಸಿದೆ. ಘಟಕದ ಸಂಚಾಲಕರಾದ ಮನೋಜ್ ವಾಮಂಜೂರು, ರಾಜ್ಯ ಸಮಿತಿ ಸಹಸಂಚಾಲಕರಾದ ಡಾ. ಕೃಷ್ಣಪ್ಪ ಕೊಂಚಾಡಿ, ವಕೀಲರಾದ ಸುನಂದ ಕೆ., ಮಾರ್ಗದರ್ಶಕರಾದ ಯೋಗೀಶ್ ಜಪ್ಪಿನಮೊಗರು, ಶೇಖರ್, ಗಂಗಯ್ಯ, ರವೀಂದ್ರ, ಕಿಶನ್, ವಿಕಾಸ್, ದಿನೇಶ್ ಮೊದಲಾದವರು ಇದ್ದರು.

ನಿವೇಶನ ಹಸ್ತಾಂತರ ಪ್ರಕ್ರಿಯೆ ಪ್ರಾರಂಭಿಸದಿದ್ದಲ್ಲಿ ಹಂತ ಹಂತದ ಹೋರಾಟವನ್ನು ರೂಪಿಸಲಾಗುವುದೆಂದು ಸಂಚಾಲಕರಾದ ಕರಿಯರವರು ಆಗ್ರಹಿಸಿರುತ್ತಾರೆ.



ನಾ ದಿವಾಕರ

ಝೀ ವಾಹಿನಿಯಲ್ಲಿ ಅಂತರ್ ಕಲಹ ಮತ್ತೊಂದು ಕೂಗುಮಾರಿ ವಾಹಿನಿಗೆ ಹಾದಿ

ಝೀ ನ್ಯೂಸ್ ವಾಹಿನಿ ಪ್ರ(ಕು)ಖ್ಯಾತಿಯ ಸುಧೀರ್ ಚೌಧರಿ ರಾಜೀನಾಮೆ ನೀಡಿದ್ದಾರೆ. ಅವರು ಹೊಸ ವಾಹಿನಿಯೊಂದನ್ನು ಆರಂಭಿಸಲಿದ್ದಾರೆ ಎನ್ನಲಾಗಿದೆ. ಸುಧೀರ್ ಚೌಧರಿ ಸ್ವತಃ ಕಾರ್ಪೋರೇಟ್ ರೂಪದಲ್ಲಿ ಹೊರಹೊಮ್ಮಲಿದ್ದಾರೋ ಅಥವಾ ಮತ್ತೊಂದು ಉದ್ದಿಮೆಯ ಭಾಗವಾಗಿ ತಮ್ಮ ವಾಹಿನಿಯ ಸಾರಥ್ಯ ವಹಿಸುವರೋ ಕಾದುನೋಡಬೇಕಿದೆ. ಭಾರತದ ಪ್ರಸ್ತುತ ಸಂದರ್ಭದಲ್ಲಿ ಆಡಳಿತಾರೂಢ ಪಕ್ಷಗಳಿಗೆ ಮತ್ತು ಕಾರ್ಪೋರೇಟ್ ಮಾರುಕಟ್ಟೆಗೆ ತನ್ನದೇ ಆದ ಮಾಧ್ಯಮ ಮುಖವಾಣಿಗಳ ಅವಶ್ಯಕತೆ ಹೆಚ್ಚಾಗಿದೆ. ಸರ್ಕಾರದ ಪರ ವಕಾಲತ್ತು ವಹಿಸುವ ಮತ್ತು ಸರ್ಕಾರದ ನೀತಿಗಳನ್ನು ಸಮರ್ಥಿಸುತ್ತಲೇ ಸಾರ್ವಜನಿಕರ ನಡುವೆ ಒಂದು ಸಕಾರಾತ್ಮಕ ಅಭಿಪ್ರಾಯವನ್ನು ಮೂಡಿಸುವ ನಿಟ್ಟಿನಲ್ಲಿ ಮಾಧ್ಯಮಗಳು, ವಿಶೇಷವಾಗಿ ವಿದ್ಯುನ್ಮಾನ ಮಾಧ್ಯಮಗಳು ಕಾರ್ಯನಿರ್ವಹಿಸುತ್ತಿರುವುದು ಗುಟ್ಟಿನ ಮಾತೇನಲ್ಲ. ಸುಧೀರ್ ಚೌಧರಿ ಆರಂಭಿಸಲಿರುವ ಹೊಸ ವಾಹಿನಿ ಬಹುಶಃ ಈ ಸಾಲಿಗೆ ಸೇರ್ಪಡೆಯಾಗಲಿರುವ ಮತ್ತೊಂದು ವೇದಿಕೆಯಾಗಲಿದೆ.

ಕಳೆದ ಎರಡು ದಶಕಗಳಲ್ಲಿ ಕಾರ್ಪೋರೇಟ್ ಸ್ನೇಹಿ ಬಂಡವಾಳ ವ್ಯವಸ್ಥೆಯ ಒಂದು ಭಾಗವಾಗಿಯೇ ತನ್ನ ಅಸ್ತಿತ್ವವನ್ನು ಕಂಡುಕೊಂಡಿರುವ ಭಾರತದ ಮಾಧ್ಯಮ ಜಗತ್ತಿನಲ್ಲಿ ಯಾವುದೇ ವ್ಯತ್ಯಯ ಸಂಭವಿಸಿದರೂ ಅದರ ಹಿಂದೆ ಮಾರುಕಟ್ಟೆಯ ಕಾರಣಗಳಿರುವಂತೆಯೇ ರಾಜಕೀಯ ಕಾರಣಗಳೂ ಇರುತ್ತವೆ. ಒಂದು ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಕಾವಲುಕಾಯುವಂತಿರಬೇಕಾದ ಮಾಧ್ಯಮಗಳು ಆಳುವ ವರ್ಗಗಳ ವಂದಿಮಾಗಧರಾಗಿರುವುದೇ ಅಲ್ಲದೆ ವ್ಯವಸ್ಥೆಯ ಒಂದು ಭಾಗವೇ ಆಗಿಹೋಗಿರುವುದರಿಂದ, ಮಾಧ್ಯಮ ಲೋಕದಲ್ಲಿ ನಡೆಯುವ ಯಾವುದೇ ಬದಲಾವಣೆಗಳನ್ನು ಸೂಕ್ಷ್ಮವಾಗಿಯೇ ಗಮನಿಸಬೇಕಾಗುತ್ತದೆ. ಕಳೆದ ಎಂಟು ವರ್ಷಗಳಲ್ಲಿ ತಮ್ಮ ಸ್ವಾಯತ್ತತೆ, ಸ್ವಂತಿಕೆ ಮತ್ತು ಸ್ವಾತಂತ್ರ್ಯವನ್ನು ಸ್ವತಃ ತಾವೇ ಕಳೆದುಕೊಂಡು, ಮಾರುಕಟ್ಟೆಯ ಬಂಡವಾಳ ಮತ್ತು ಆಳುವ ವ್ಯವಸ್ಥೆಯ ಬೇಕುಬೇಡಗಳನ್ನು ಅವಲಂಬಿಸಿರುವ ಭಾರತದ ಮಾಧ್ಯಮ ಲೋಕ, ವಿಶೇಷವಾಗಿ ವಿದ್ಯುನ್ಮಾನ ಸುದ್ದಿಮನೆಗಳ ಲೋಕ ಈ ಜಟಿಲತೆಯ ನಡುವೆಯೇ ತನ್ನ ಅಸ್ತಿತ್ವವನ್ನು ಕಾಪಾಡಿಕೊಳ್ಳಬೇಕಿದೆ.

ಕೇವಲ ಒಂದೆರಡು ದಶಕಗಳ ಹಿಂದೆ ಸಾರ್ವಜನಿಕರ ದೃಷ್ಟಿಯಲ್ಲಿ ವ್ಯವಸ್ಥೆಯ ಓರೆಕೋರೆಗಳನ್ನು ಎತ್ತಿತೋರುವ ಮತ್ತು ನೊಂದ ಜನತೆಯನ್ನು ಕೊಂಚಮಟ್ಟಿಗಾದರೂ ಪ್ರತಿನಿಧಿಸುವ ವಾಹಿನಿಗಳಾಗಿದ್ದ ಮಾಧ್ಯಮ ಇಂದು ಬಹುತೇಕವಾಗಿ, ವ್ಯವಸ್ಥೆಯ ಸಮರ್ಥನೆಯ ವೇದಿಕೆಗಳಾಗಿ ಬದಲಾಗಿವೆ. ಮುದ್ರಣ ಮಾಧ್ಯಮಗಳು ಕಾರ್ಪೋರೇಟ್ ಬಂಡವಾಳ ವ್ಯವಸ್ಥೆಯ ಜಾಹೀರಾತು ಆಮಿಷಗಳಿಗೆ ಬಲಿಯಾಗಿದ್ದರೆ, ವಿದ್ಯುನ್ಮಾನ ಮಾಧ್ಯಮಗಳು ಮಾರುಕಟ್ಟೆ ಆಧಾರಿತ ಟಿಆರ್‌ಪಿ ರೇಟಿಂಗ್‌ಗಳಿಗಾಗಿ ತಮ್ಮ ಸ್ವಂತಿಕೆಯನ್ನೂ ಕಳೆದುಕೊಂಡು ಬೆತ್ತಲಾಗುತ್ತಿವೆ. ವಿದ್ಯುನ್ಮಾನ ಸುದ್ದಿಮನೆಗಳು ಸೃಷ್ಟಿಸಿರುವ ಕೂಗುಮಾರಿ ಸಂಸ್ಕೃತಿ ಎಲ್ಲ ಭಾಷೆಗಳಿಗೂ ವ್ಯಾಪಿಸುತ್ತಿದ್ದು, ತಮ್ಮ ಮಾರುಕಟ್ಟೆ ರೇಟಿಂಗ್ ಹೆಚ್ಚಿಸಿಕೊಳ್ಳುವ ಪೈಪೋಟಿಯಲ್ಲಿ ಸುಳ್ಳು ಸುದ್ದಿಗಳನ್ನು ವೈಭವೀಕರಿಸುವ ಮತ್ತು ಸತ್ಯವನ್ನು ಮರೆಮಾಚುವ ಒಂದು ವ್ಯವಸ್ಥಿತ ದಂಧೆಗೆ ಮಾಧ್ಯಮ ಲೋಕ ಅವಕಾಶಗಳನ್ನು ಕಲ್ಪಿಸಿದೆ. ಕಾಂಗ್ರೆಸ್ ನಾಯಕರ ರಾಹುಲ್ ಗಾಂಧಿ ಕೇರಳದ ವಯನಾಡಿನಲ್ಲಿ ನೀಡಿದ ಹೇಳಿಕೆಯ ಬಗ್ಗೆ ಝೀ ಸುದ್ದಿವಾಹಿನಿ ಕ್ಷಮೆ ಯಾಚಿಸಿರುವುದು, ಟೈಂಸ್‌ನೌ ವಾಹಿನಿಯ ನಾವಿಕಾ ಕುಮಾರ್ ನೂಪುರ್ ಶರ್ಮ ವಿವಾದದ ಕೇಂದ್ರಬಿಂದುವಾಗಿರುವುದು, ಕನ್ನಡದ ಪಬ್ಲಿಕ್ ಟಿವಿಯಲ್ಲಿ ಪ್ರಚೋದನಕಾರಿ ಹೇಳಿಕೆಗಳಿಗೆ ಅವಕಾಶ ಮಾಡಿಕೊಟ್ಟು ನಂತರ ಕ್ಷಮೆ ಕೋರಿರುವುದು ಇವೆಲ್ಲವೂ ಮಾಧ್ಯಮ ಲೋಕದ ಅವನತಿಯ ಸಂಕೇತಗಳೇ ಆಗಿವೆ.

ಈ ಅವನತಿಯ ಹಾದಿಯಲ್ಲೇ ದೇಶದ ಪ್ರತಿಷ್ಠಿತ ಸುದ್ದಿಮನೆಯ ನಿರೂಪಕರೊಬ್ಬರ ನಿರ್ಗಮನ ಸುದ್ದಿಯಲ್ಲಿದೆ. ಇಂದು ಯಾವುದೇ ವಿದ್ಯುನ್ಮಾನ ಸುದ್ದಿಮನೆಯನ್ನು ಗಮನಿಸಿದರೂ, ಅದು ಒಬ್ಬ ನಿರೂಪಕನ ಮೂಲಕವೇ ಗುರುತಿಸಿಕೊಂಡಿರುತ್ತದೆ. ಈ ನಿರೂಪಕರು ಬಹುಪಾಲು ಸಂದರ್ಭಗಳಲ್ಲಿ ಕೂಗುಮಾರಿ ಸಂಸ್ಕೃತಿಯ ಪರಿಚಾರಕರಾಗಿಯೇ ಇರುತ್ತಾರೆ. ಒಂದೆರಡು ವಾಹಿನಿಗಳನ್ನು ಹೊರತುಪಡಿಸಿದರೆ ಉಳಿದೆಲ್ಲವೂ ಇಂತಹ ಕೂಗುಮಾರಿ ನಿರೂಪಕರಿಂದಲೇ ತಮ್ಮ ಟಿಆರ್‌ಪಿ ರೇಟಿಂಗ್ ಹೆಚ್ಚಿಕೊಳ್ಳುತ್ತವೆ. ಕನ್ನಡದ ಮಾಧ್ಯಮ ಲೋಕದಲ್ಲಿ ಎಲ್ಲವೂ ಇದೇ ಮಾದರಿಯನ್ನು ಅನುಸರಿಸುತ್ತಿವೆ. ಹಿಂದಿ ವಾಹಿನಿಗಳ ಪೈಕಿ ಕೆಲವು ಈ ಸಂಸ್ಕೃತಿಗೆ ಹೊರತಾಗಿವೆ. ಇಂತಹ ಕೂಗುಮಾರಿ ಸಂಸ್ಕೃತಿಯ ಪರಿಚಾರಕರಲ್ಲೊಬ್ಬರಾದ ಸುಧೀರ್ ಚೌಧರಿ ಝೀ ನ್ಯೂಸ್ ವಾಹಿನಿಯಿಂದ ನಿರ್ಗಮಿಸಿದ್ದಾರೆ. ಮಾರುಕಟ್ಟೆಯಲ್ಲೂ ಅತ್ಯಂತ ಜನಪ್ರಿಯ ನಿರೂಪಕರಲ್ಲಿ ಒಬ್ಬರಾಗಿ ಖ್ಯಾತಿ ಗಳಿಸಿರುವ ಸುಧೀರ್ ಚೌಧರಿಯ ನಿರ್ಗಮನಕ್ಕೆ ತಾತ್ವಿಕ ಅಥವಾ ಸೈದ್ಧಾಂತಿಕ ಕಾರಣಗಳಿಗಿಂತಲೂ ವ್ಯಕ್ತಿಗತ, ವಾಣಿಜ್ಯಾಸಕ್ತಿಗಳೇ ಪ್ರಧಾನವಾಗಿರುವುದು ಸ್ಪಷ್ಟವಾಗಿದೆ.

ಝೀ ನ್ಯೂಸ್ ಇಂದಿಗೂ ಭಾರತದಲ್ಲಿ ಪ್ರಥಮ ಶ್ರೇಣಿಯಲ್ಲಿರುವ ಒಂದು ಸುದ್ದಿಮನೆ. ಭಾರತವು ಮಾರುಕಟ್ಟೆ ಅರ್ಥವ್ಯವಸ್ಥೆಗೆ ತೆರೆದುಕೊಂಡು, ಮಾಧ್ಯಮ ಲೋಕವೂ ಸಹ ಬದಲಾದ ಸನ್ನಿವೇಶಕ್ಕೆ ತಕ್ಕಂತೆ ತನ್ನದೇ ಆದ ಮಾರುಕಟ್ಟೆ ತಂತ್ರಗಳನ್ನು ಅನುಸರಿಸಲಾರಂಭಿಸಿದಾಗ, 1990ರಲ್ಲೇ ಈ ನಿಟ್ಟಿನಲ್ಲಿ ಪ್ರಥಮ ಹೆಜ್ಜೆ ಇಟ್ಟವರು ಝೀ ನ್ಯೂಸ್‌ನ ಮಾಲೀಕರಾದ ಸುಭಾಷ್ ಚಂದ್ರ. ಮಾಜಿ ರಾಜ್ಯಸಭಾ ಸದಸ್ಯರೂ ಆಗಿರುವ ಸುಭಾಷ್ ಚಂದ್ರ ಭಾರತದ ವಿದ್ಯುನ್ಮಾನ ಮಾಧ್ಯ ಲೋಕಕ್ಕೆ ಮಾರುಕಟ್ಟೆ ಸ್ಪರ್ಶ ನೀಡಿದ್ದೇ ಅಲ್ಲದೆ, ಪಶ್ಚಿಮ ರಾಷ್ಟ್ರಗಳ ಮಾಧ್ಯಮ ವಲಯಕ್ಕೆ ಸರಿಸಮಾನವಾದ ಒಂದು ಆಧುನಿಕ ಸ್ವರೂಪವನ್ನು ನೀಡುವುದರಲ್ಲೂ ಯಶಸ್ವಿಯಾಗಿದ್ದಾರೆ. ಇಂದು ಭಾರತದಲ್ಲಿ ನೂರಾರು ಟಿವಿ ವಾಹಿನಿಗಳಿದ್ದರೂ, ಇವೆಲ್ಲದರ ಜನಕ ಎಂದರೆ ಝೀ ಟೀವಿ ವಾಹಿನಿ ಎಂದು ನಿಸ್ಸಂಶಯವಾಗಿ ಹೇಳಬಹುದು. ಈ ವಾಹಿನಿಯಿಂದಲೇ ಕವಲೊಡೆದ ಹಲವಾರು ವಾಹಿನಿಗಳು ಇಂದು ನಮ್ಮ ನಡುವೆ ಇದೆ, ಹಾಗೆಯೇ ಝೀ ವಾಹಿನಿಯಿಂದಲೇ ತಮ್ಮ ವೃತ್ತಿ ಬದುಕು ಆರಂಭಿಸಿದ ಅನೇಕ ಪತ್ರಕರ್ತರು, ನಿರೂಪಕರು ಇಂದು ವಿವಿಧ ವಾಹಿನಿಗಳಲ್ಲಿ ತಮ್ಮ ನೆಲೆ ಕಂಡುಕೊಂಡಿದ್ದಾರೆ.

ವಿದ್ಯುನ್ಮಾನ ಮಾಧ್ಯಮದ ಪತ್ರಿಕೋದ್ಯೋಗಿಗಳ ಪೈಕಿ ಮೊದಲ ಪೀಳಿಗೆಯವರೆಂದೇ ಗುರುತಿಸಲ್ಪಟ್ಟಿರುವ ಸುಧೀರ್ ಚೌಧರಿ ತಮ್ಮ ವೃತ್ತಿ ಬದುಕನ್ನು ಆರಂಭಿಸಿದ್ದೇ ಝೀ ನ್ಯೂಸ್ ವಾಹಿನಿಯ ಮೂಲಕ. 24 ಗಂಟೆಗಳ ಸುದ್ದಿ ಪ್ರಸರಣ ಜನಪ್ರಿಯವಾಗುವುದರ ಹಿಂದೆ ಸುಧೀಂದ್ರ ಚೌಧರಿ ಅವರ ಕೊಡುಗೆಯೂ ಇದೆ ಎನ್ನುವುದನ್ನು ಅಲ್ಲಗಳೆಯಲಾಗುವುದಿಲ್ಲ.



2001ರಲ್ಲಿ ಭಾರತೀಯ ಸಂಸತ್ ಭವನದ ಮೇಲೆ ಭಯೋತ್ಪಾದಕ ದಾಳಿ ನಡೆದ ನಂತರ ಅಂದಿನ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಮತ್ತು ಪಾಕಿಸ್ತಾನದ ಅಧ್ಯಕ್ಷ ಪರ್ವೇಜ್ ಮುಷರಫ್ ನಡುವೆ ನಡೆದ ಮಾತುಕತೆಗಳ ಸಂದರ್ಭದಲ್ಲಿ ಈ ಸಭೆಯ ಕಲಾಪಗಳನ್ನು ವರದಿಮಾಡಲು ನಿಯೋಜಿಸಲಾಗಿದ್ದ ತಂಡದಲ್ಲಿ ಸುಧೀರ್ ಚೌಧರಿ ಪ್ರಮುಖರಾಗಿದ್ದರು. 2003ರಲ್ಲಿ ಝೀ ನ್ಯೂಸ್ ವಾಹಿನಿಯನ್ನು ತೊರೆದು ಸಹಾರ ಸಮಯ್ ವಾಹಿನಿಯನ್ನು ಆರಂಭಿಸುವುದಕ್ಕೆ ಒತ್ತಾಸೆಯಾಗಿ ನಿಂತಿದ್ದರು. ಸಹಾರ ಉದ್ಯಮ ಸಮೂಹದ ಈ ಹಿಂದಿ ವಾಹಿನಿ ಹೆಚ್ಚು ಕಾಲ ಊರ್ಜಿತವಾಗಲಿಲ್ಲ. ನಂತರ ಸುಧೀರ್ ಇಂಡಿಯಾ ಟಿವಿ ವಾಹಿನಿಯಲ್ಲಿ ನಿರೂಪಕರಾಗಿ ಕಾರ್ಯನಿರ್ವಹಿಸಿದ್ದರು. 2012ರಲ್ಲಿ ಪುನಃ ತಮ್ಮ ತವರಿಗೆ, ಝೀ ನ್ಯೂಸ್ ವಾಹಿನಿಗೆ ಬಂದು ಸೇರಿಕೊಂಡಿದ್ದು, ನಿತ್ಯ ಸುದ್ದಿ ಮತ್ತು ವಿಶ್ಲೇಷಣೆಯ ವಿಭಾಗದಲ್ಲಿ ನಿರೂಪಕರಾಗಿ ಕಾರ್ಯನಿರ್ವಹಿಸಿದ್ದರು. ಇದೀಗ ತಮ್ಮದೇ ಆದ ಸ್ವಂತ ವಾಹಿನಿಯನ್ನು ಆರಂಭಿಸುವ ಇಚ್ಚೆಯೊಂದಿಗೆ ನಿರ್ಗಮಿಸಿದ್ದಾರೆ.

ಸುಧೀರ್ ಚೌಧರಿ ತಮ್ಮ ವೃತ್ತಿ ಜೀವನದಲ್ಲಿ ಅನೇಕ ಏಳುಬೀಳುಗಳನ್ನೂ ಎದುರಿಸಿದ್ದಾರೆ. ವಾಣಿಜ್ಯೋದ್ಯಮಿ ನವೀನ್ ಜಿಂದಾಲ್ ಅವರಿಂದ ಹಣವಸೂಲಿ ಮಾಡುವ ಆರೋಪಕ್ಕೆ ಸಿಲುಕಿದ್ದ ಚೌಧರಿ 2012ರಲ್ಲಿ ಬಂಧನಕ್ಕೊಳಗಾಗಿದ್ದರು. ಈ ಸಂಬಂಧ ಸುದ್ದಿ ಪ್ರಸರಣ ಸಂಪಾದಕರ ಸಂಘದ ಖಜಾಂಚಿಯೂ ಆಗಿದ್ದ ಸುಧೀರ್ ಅವರನ್ನು ಸಂಘದಿಂದ ಉಚ್ಚಾಟಿಸಲಾಗಿತ್ತು. 2018ರಲ್ಲಿ ಪರಸ್ಪರ ರಾಜಿ ಸೂತ್ರದ ಮೂಲಕ ಈ ವಿವಾದ ಬಗೆಹರಿದಿತ್ತು. ತೃಣಮೂಲ ಕಾಂಗ್ರೆಸ್ ಸಂಸದೆ ಮಹುವಾ ಮೋಯಿತ್ರಾ ಅವರು ತಮ್ಮ ಭಾಷಣವೊಂದರಲ್ಲಿ ಟ್ರೂಮನ್ ಲಾಂಗ್‌ಮನ್ ಅವರಿಂದ ಕೃತಿಚೌರ್ಯ ಮಾಡಿದ್ದಾರೆ ಎಂದು ಆರೋಪಿಸಿ ಸುಧೀರ್ ಚೌಧರಿ ಮೊಯಿತ್ರಾ ಅವರಿಂದ ಮಾನನಷ್ಟ ಮೊಕದ್ದಮೆ ಎದುರಿಸಬೇಕಾಯಿತು. ನಂತರ ಸ್ವತಃ ಲಾಂಗ್‌ಮನ್ ಅವರೇ ಈ ಆರೋಪವನ್ನು ನಿರಾಕರಿಸಿದ್ದ ಹಿನ್ನೆಲೆಯಲ್ಲಿ ಝೀ ನ್ಯೂಸ್ ಕ್ಷಮಾಪಣೆ ಕೇಳಬೇಕಾಯಿತು. ಕೋವಿಡ್ 19 ಸಂದರ್ಭದಲ್ಲಿ ಕೋಮು ಪ್ರಚೋದಕ ಸುದ್ದಿಗಾಗಿಯೇ ಸುಧೀರ್ ಇಸ್ಲಾಂ ಭೀತಿ ಸೃಷ್ಟಿಸುವ ಆರೋಪಕ್ಕೆ ಗುರಿಯಾಗಿದ್ದರು. ಈ ಆರೋಪಗಳ ಹೊರತಾಗಿಯೂ ಸುಧೀರ್ ಒಬ್ಬ ನಿರೂಪಕರಾಗಿ ಝೀ ಸುದ್ದಿವಾಹಿನಿಯನ್ನು ಮಾರುಕಟ್ಟೆಯಲ್ಲಿ ಒಂದು ಪ್ರಬಲ ದನಿಯಾಗಿ ಕಾಪಾಡಿಕೊಂಡು ಬಂದಿದ್ದು ವಾಸ್ತವ.

ಕಳೆದ ಎಂಟು ವರ್ಷಗಳಲ್ಲಿ ದೇಶದಲ್ಲಿ ಬಲಪಂಥೀಯ ರಾಜಕಾರಣ ಬಲವಾಗುತ್ತಿರುವ ಹಿನ್ನೆಲೆಯಲ್ಲಿ ಆಡಳಿತ ವ್ಯವಸ್ಥೆಯ ಪರವಾಗಿಯೇ ತಮ್ಮ ಸುದ್ದಿ ನಿರೂಪಣೆಯನ್ನು ನಿರ್ವಹಿಸುವ ಮೂಲಕ ಸುಧೀರ್ ಚೌಧರಿ ಜನಪ್ರಿಯತೆಯನ್ನೂ ಗಳಿಸಿದ್ದಾರೆ. ಕೇಂದ್ರ ಸರ್ಕಾರದ ನೀತಿಗಳನ್ನು ಬಲವಾಗಿ ಸಮರ್ಥನೆ ಮಾಡಿಕೊಳ್ಳುವುದೇ ಅಲ್ಲದೆ, ತಮ್ಮ ಸುದ್ದಿ ನಿರೂಪಣೆಯ ಮೂಲಕ ಮತ್ತು ಝೀ ವಾಹಿನಿಯಲ್ಲಿ ಏರ್ಪಡಿಸುವ ಚರ್ಚೆಗಳ ಮೂಲಕ ಸರ್ಕಾರದ ನೀತಿಗಳನ್ನು ಸಾರ್ವಜನಿಕ ವಲಯದಲ್ಲಿ ಜನಪ್ರಿಯಗೊಳಿಸುವ ಮೂಲಕ ಸುಧೀರ್ ಚೌಧರಿ ವ್ಯವಸ್ಥೆಯ ಪರವಾದ ಒಂದು ದನಿಯಾಗಿ ಕಂಡುಬಂದಿದ್ದಾರೆ. ಬಹುಶಃ ಈ ಹಿನ್ನೆಲೆಯಲ್ಲೇ ತಮ್ಮದೇ ಆದ ಸ್ವಂತ ವಾಹಿನಿಯನ್ನು ಆರಂಭಿಸುವ ಇಚ್ಚೆಯೊಂದಿಗೆ ಸುಧೀರ್ ಚೌಧರಿ ಝೀ ವಾಹಿನಿಯಿಂದ ನಿರ್ಗಮಿಸಿದ್ದಾರೆ. ಆಂತರಿಕವಾಗಿ ಝೀ ಸಮೂಹದ ಮಾಲೀಕ ಸುಭಾಷ್ ಚಂದ್ರ ಅವರು ಇತ್ತೀಚಿನ ದಿನಗಳಲ್ಲಿ ಸುಧೀರ್ ಚೌಧರಿಯನ್ನು ಮೂಲೆಗುಂಪು ಮಾಡಲು ಯತ್ನಿಸುತ್ತಿದ್ದರು ಎಂಬ ಆರೋಪವೂ ಕೇಳಿಬರುತ್ತಿದೆ. 2021ರಲ್ಲಿ ಎಬಿಪಿ ನ್ಯೂಸ್ ವಾಹಿನಿಯಿಂದ ಬಂದು, ಝೀ ನ್ಯೂಸ್‌ನ ಕಂಟೆಂಟ್ ಅಧಿಕಾರಿ ಮತ್ತು ಸಂಪಾದಕರಾಗಿ ನಿಯೋಜಿತರಾದ ರಜನೀಶ್ ಅಹುಜಾ ಮತ್ತು ಸುಧೀರ್ ಚೌಧರಿ ನಡುವೆ ಇದ್ದ ಅಧಿಕಾರ ಸಂಘರ್ಷವೂ ಈ ನಿರ್ಧಾರಕ್ಕೆ ಕಾರಣ ಎನ್ನಲಾಗುತ್ತಿದೆ.

ಇತ್ತೀಚಿನ ರಾಜ್ಯಸಭಾ ಚುನಾವಣೆಗಳಲ್ಲಿ ಬಿಜೆಪಿ ಅಭ್ಯರ್ಥಿಯಾಗಿ ಸುಭಾಷ್ ಚಂದ್ರ ಸೋಲು ಅನುಭವಿಸಿದ ನಂತರ, ಝೀ ನ್ಯೂಸ್ ಕೆಲವು ಸಂದರ್ಭಗಳಲ್ಲಿ ತಟಸ್ಥ ನೀತಿಯನ್ನೂ ಅನುಸರಿಸಲಾರಂಭಿಸಿತ್ತು. ಅಸ್ಸಾಂ ಕುರಿತು ಪ್ರಸಾರವಾದ ಒಂದು ಷೋನಲ್ಲಿ ಇದು ಸ್ಪಷ್ಟವಾಗಿದ್ದು, ಈ ಬೆಳವಣಿಗೆಗಳಿಗೆ ಸುಧೀರ್ ಚೌಧರಿ ಸಮ್ಮತಿ ಇರಲಿಲ್ಲ ಎಂದೂ ಹೇಳಲಾಗುತ್ತಿದೆ. ಮಾಧ್ಯಮ ಮಾರುಕಟ್ಟೆಯಲ್ಲಿ ತಮ್ಮದೇ ಆದ ವರ್ಚಸ್ಸು ಬೆಳೆಸಿಕೊಂಡಿರುವ ಸುಧೀರ್ ಚೌಧರಿ ಝೀ ವಾಹಿನಿಯ ಇತ್ತೀಚಿನ ತಟಸ್ಥ ನೀತಿಯಿಂದ ಅಸಮಾಧಾನಗೊಂಡಿದ್ದರೆಂದೂ ಹೇಳಲಾಗುತ್ತಿದೆ. ಬಿಜೆಪಿ ಬೆಂಬಲಿತ ಸ್ವತಂತ್ರ ಅಭ್ಯರ್ಥಿಯಾಗಿ ರಾಜ್ಯಸಭೆಗೆ ಸ್ಪರ್ಧಿಸಿ, ಸೋಲು ಅನುಭವಿಸಿದ ನಂತರ ಝೀ ನ್ಯೂಸ್ ಮಾಲೀಕ ಸುಭಾಷ್ ಚಂದ್ರ ತಮ್ಮ ಸಂಸ್ಥೆಯ ಕೆಲವು ಸಿಬ್ಬಂದಿಯ ವಿರುದ್ಧ ಅಸಮಾಧಾನಗೊಂಡಿದ್ದು, ಇದರ ಪರಿಣಾಮವೇ ಸುಧೀರ್ ಚೌಧರಿ ಸಹ ನಿರ್ಗಮಿಸಿದ್ದಾರೆ ಎಂದು ನ್ಯೂಸ್ ಲಾಂಡ್ರಿ ಸುದ್ದಿವಾಹಿನಿ ಹೇಳಿದೆ. ಇದೇ ಸಂದರ್ಭದಲ್ಲಿ ಸುಧೀರ್ ಚೌಧರಿ ಬಹುಮಟ್ಟಿಗೆ ಝೀ ನ್ಯೂಸ್ ವಾಹಿನಿಯ ಮುಖವಾಣಿಯಂತಾಗಿದ್ದುದು ಸುಭಾಷ್ ಚಂದ್ರ ಅವರ ಅಸಹನೆಗೆ ಕಾರಣವಾಗಿರಬಹುದು.

ಈ ಆಂತರಿಕ ಬಿಕ್ಕಟ್ಟುಗಳ ಹೊರತಾಗಿಯೂ, ಭಾರತದ ಪ್ರಸ್ತುತ ಸಂದರ್ಭದಲ್ಲಿ ಆಡಳಿತಾರೂಢ ಪಕ್ಷಗಳಿಗೆ ಮತ್ತು ಕಾರ್ಪೋರೇಟ್ ಮಾರುಕಟ್ಟೆಗೆ ತನ್ನದೇ ಆದ ಮಾಧ್ಯಮ ಮುಖವಾಣಿಗಳ ಅವಶ್ಯಕತೆ ಹೆಚ್ಚಾಗಿದೆ. ಸರ್ಕಾರದ ಪರ ವಕಾಲತ್ತು ವಹಿಸುವ ಮತ್ತು ಸರ್ಕಾರದ ನೀತಿಗಳನ್ನು ಸಮರ್ಥಿಸುತ್ತಲೇ ಸಾರ್ವಜನಿಕರ ನಡುವೆ ಒಂದು ಸಕಾರಾತ್ಮಕ ಅಭಿಪ್ರಾಯವನ್ನು ಮೂಡಿಸುವ ನಿಟ್ಟಿನಲ್ಲಿ ಮಾಧ್ಯಮಗಳು, ವಿಶೇಷವಾಗಿ ವಿದ್ಯುನ್ಮಾನ ಮಾಧ್ಯಮಗಳು ಕಾರ್ಯನಿರ್ವಹಿಸುತಿರುವುದು

ಪುಟ 14 ಕ್ಕೆ



200 ದಿನ ಕೆಲಸ, ರೂ.600 ಕೂಲಿಗೆ ಒತ್ತಾಯ

ಆ.1 ರಂದು ದೇಶಾದ್ಯಂತ ಮುಷ್ಕರ

ಕೃಷಿ ಕೂಲಿಕಾರರು, ಗೇಣಿದಾರ ರೈತರು ಮತ್ತು ಇತರ ರೈತಾಪಿ ದುಡಿಮೆಗಾರರು ದೇಶದಲ್ಲಿ ಆಹಾರ ದಾನ್ಯಗಳನ್ನು ಬೆಳೆಯುವವರು. ಇವರು ಪ್ರತ್ಯಕ್ಷ ಮತ್ತು ಪರೋಕ್ಷವಾಗಿ ಕೃಷಿಯನ್ನಷ್ಟೆ ಅವಲಂಬಿಸಿರುವವರು. 2011ರ ಜನಗಣತಿ ಪ್ರಕಾರ ದೇಶದಲ್ಲಿ 11,86,69,264 ಕೃಷಿಕರಿದ್ದಾರೆ. ಕೃಷಿ ಕೂಲಿಕಾರರ ಸಂಖ್ಯೆ ಇದಕ್ಕಿಂತಲೂ ಹೆಚ್ಚು. ಅಂದರೆ 14,45,29,833 ರಷ್ಟಿದೆ. ಇವರು ಸಮಾಜದಲ್ಲಿ ಅಂಚಿಗೆ ತಳ್ಳಲ್ಪಟ್ಟವರು. ಮಾನವ ಸಂಪನ್ಮೂಲ ಅಭಿವೃದ್ಧಿ ನೀತಿಯಲ್ಲಿ ಇವರು ಕಡೆಗಣಿಸಲ್ಪಟ್ಟವರು. ಗಿಡಮರಗಳ ರಕ್ಷಣೆಗೆ ಇಲ್ಲಿ ಕಾನೂನುಗಳಿವೆ. ಪಶುಪಕ್ಷಿಗಳ ರಕ್ಷಣೆಗೆ ಕಾನೂನುಗಳಿವೆ. ಆದರೆ ಈ ಬಡಪಾಯಿ ಕೃಷಿ ಕೂಲಿಕಾರರ ಅಭಿವೃದ್ಧಿಗೆ ಸಮಗ್ರವಾದ ಒಂದು ಕಾನೂನು ಇಲ್ಲ.

ಕೃಷಿಕರ ಸಂಖ್ಯೆ ಕಡಿಮೆಯಾಗುತ್ತಿದ್ದರೆ ಕೂಲಿಕಾರರ ಸಂಖ್ಯೆ ಹೆಚ್ಚುತ್ತಿದೆ. ಇದರಿಂದಾಗಿ ಕೃಷಿ ಕೂಲಿಕಾರರಿಗೆ ಕೆಲಸದ ಲಭ್ಯತೆ ಕಡಿಮೆಯಾಗುತ್ತಿದೆ. ಕೇಂದ್ರ ಬಿಜೆಪಿ ಸರ್ಕಾರ ಹೆಚ್ಚು ರಭಸದಿಂದ ನವ ಉದಾರೀಕರಣದ ನೀತಿಗಳನ್ನು ಜಾರಿಗೆ ತರುತ್ತಿರುವುದರಿಂದ ಕೃಷಿಯಲ್ಲಿ ಯಾಂತ್ರೀಕರಣ, ಕಂಪ್ಯೂಟರೀಕರಣ ತೀವ್ರಗೊಳ್ಳುತ್ತಿದ್ದು ಗ್ರಾಮೀಣ ಪ್ರದೇಶದಲ್ಲಿ ನಿರುದ್ಯೋಗ ತೀವ್ರ ಗತಿಯಲ್ಲಿ ಹೆಚ್ಚುತ್ತಿದೆ. ಕೃಷಿ ಕೂಲಿಕಾರರು ಹಳ್ಳಿಗಳನ್ನು ತೊರೆದು ನಗರ ಪ್ರದೇಶಗಳಿಗೆ ವಲಸೆ ಹೋಗುತ್ತಿದ್ದಾರೆ.

ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ ಸಮರ್ಪಕವಾಗಿ ಜಾರಿಯಾಗುತ್ತಿಲ್ಲ. ಬೆಲೆ ಏರಿಕೆಗೆ ತಕ್ಕಂತೆ ಇವರ ಕೂಲಿ ದರಗಳು ಹೆಚ್ಚಿಸುತ್ತಿಲ್ಲ. ಕೂಲಿಕಾರರಿಗೆ ಕೆಲಸ ಕೊಡದೆ ಸತಾಯಿಸಲಾಗುತ್ತದೆ. ದಿನಕ್ಕೆರಡು ಬಾರಿ ಆನ್‌ಲೈನ್ ಮೂಲಕ ಪೋಟೊಗಳೊಂದಿಗೆ ಹಾಜರಿ ನೀಡುವ ಕ್ರಮಗಳಂತಹ ನಿಯಮಗಳನ್ನು ಕಡ್ಡಾಯವಾಗಿ ಜಾರಿ ಮಾಡಲು ಕೇಂದ್ರ ಸರ್ಕಾರ ಪಟ್ಟು ಹಿಡಿದಿದೆ. ಉದ್ಯೋಗ ಖಾತ್ರಿ ಕೆಲಸ ತುಂಡು ಕೆಲಸ ಆಗಿದ್ದು ದಿನಕ್ಕೆರಡು ಬಾರಿ ಹಾಜರಿ ಕೊಡುವುದು ಅನಗತ್ಯವಾಗಿದ್ದು ಕೂಲಿಕಾರರಿಗೆ ಕಿರುಕುಳ ಕೊಡಲೆಂದೇ ಈ ನಿಯಮ ತರಲಾಗಿದೆ. ಕಾಯಕ ಮಿತ್ರರಿಗೆ ನೀಡಲಾಗುತ್ತಿದ್ದ ಪ್ರೋತ್ಸಾಹ ಧನವನ್ನು ಕಡಿತ ಮಾಡಲಾಗಿದೆ. ಸಲಕರಣೆಗಳ ಭತ್ತೆಯನ್ನು ನಿಲ್ಲಿಸಲಾಗಿದೆ.

ದೇಶದಲ್ಲಿ ಭೂ ಸುಧಾರಣೆಗಳನ್ನು ಕೈಬಿಡಲಾಗಿದ್ದು, ಬಡ ಭೂರಹಿತರು ಸಾಗುವಳಿ ಮಾಡುತ್ತಿರುವ ಭೂಮಿಯ ಹಕ್ಕುಪತ್ರ ವಿತರಿಸುವ ಬದಲಾಗಿ ಅವರನ್ನು ಒಕ್ಕಲೆಬ್ಬಿಸಲಾಗುತ್ತಿದೆ. ಸರ್ಕಾರಿ ಭೂಮಿಯನ್ನು ಅತ್ಯಲ್ಪ ಬೆಲೆಗೆ ತಮಗೆ ಬೇಕಾದ ಖಾಸಗಿ ಸಂಘ ಸಂಸ್ಥೆಗಳಿಗೆ ನೀಡುತ್ತಿದ್ದಾರೆ. ಹಿತ್ತಲು ಸಹಿತದ ಪಕ್ಕಾ ಮನೆಗಳನ್ನು ಒದಗಿಸುವುದು ಕೇವಲ ಚುನಾವಣೆಯ ಭರವಸೆಯಾಗಿ ಉಳಿದಿದೆ. ದಲಿತರು ಮತ್ತು ಇತರ ಕೂಲಿಕಾರರ ನಡುವೆ ತಾರತಮ್ಯ ಮಾಡಲಾಗುತ್ತದೆ.

ಹಕ್ಕೊತ್ತಾಯಗಳು

1) MNREGA ಅಡಿಯಲ್ಲಿ ವರ್ಷದಲ್ಲಿ 200 ದಿನಗಳ ಕೆಲಸ ರೂ.600/– ದಿನಗೂಲಿ. ಮೇಟಿಗಳಿಗೆ ಮತ್ತು ತಾಂತ್ರಿಕ ಸಿಬ್ಬಂದಿಗೆ ಸೇವಾ ಭದ್ರತೆ. ಸಮಯಕ್ಕೆ ಸರಿಯಾಗಿ ವೇತನ ಪಾವತಿ. ಯೋಜನೆಯನ್ನು ನಗರ ಪ್ರದೇಶಗಳಿಗೆ ವಿಸ್ತರಣೆ.
2) 55 ವರ್ಷ ದಾಟಿದ ಎಲ್ಲ ಕೃಷಿ ಕೂಲಿಕಾರರಿಗೆ ಮತ್ತು ಇತರ ಗ್ರಾಮೀಣ ಕೆಲಸಗಾರರಿಗೆ ತಿಂಗಳಿಗೆ ರೂ. 5000ರ ದರದಲ್ಲಿ ನಿವೃತ್ತಿ ವೇತನ.
3) ಶೌಚಾಲಯ, ಅಡುಗೆ ಮನೆ ಕೈತೋಟ, ದನದ ಕೊಟ್ಟಿಗೆಯನ್ನು ಒಳಗೊಂಡ ಹಿತ್ತಲು ಸಹಿತದ ಪಕ್ಕಾ ಮನೆ ನೀಡುವುದನ್ನು ಖಚಿತ ಪಡಿಸಬೇಕು. ಮನೆ ಕಟ್ಟಲು ನೀಡುವ ಅನುಧಾನವನ್ನು ಕೇಂದ್ರದಿಂದ ರೂ.5 ಲಕ್ಷ ಮತ್ತು ರಾಜ್ಯ ಸರ್ಕಾರ 5 ಲಕ್ಷ ರೂ. ನೀಡಬೇಕು.
4) ಕೇಂದ್ರ ಸರ್ಕಾರ ಮುತುವರ್ಜಿ ವಹಿಸಿ ಪ್ರಗತಿಪರ ಭೂ ಸುಧಾರಣೆಗಳನ್ನು ಜಾರಿಗೆ ತರಬೇಕು. ಸ್ವಾತಂತ್ರ್ಯ ದೊರೆತ 75 ವರ್ಷಗಳ ನಂತರವಾದರೂ ಉಳುವವನಿಗೆ ಭೂಮಿ ಕೊಡುವ ಭರವಸೆಯನ್ನು ಜಾರಿಗೆ ತರಬೇಕು. ಸರ್ಕಾರಿ ಭೂಮಿಯನ್ನು ಭೂರಹಿತ ದಲಿತರಿಗೆ, ಕೃಷಿ ಕೂಲಿಕಾರರಿಗೆ, ಬುಡಕಟ್ಟು ಸಮುದಾಯಗಳಿಗೆ ಮತ್ತು ಬಡರೈತರಿಗೆ ಅಗತ್ಯ ಆರ್ಥಿಕ ನೆರವು ಮತ್ತು ಭೂ ಒಡೆತನದ ಹಕ್ಕಿನೊಂದಿಗೆ ವಿತರಿಸಬೇಕು.
5) ಎಸ್.ಸಿ. ಮತ್ತು ಎಸ್.ಟಿ. ಸಮುದಾಯಗಳಿಗೆ ಸೂಕ್ತ ಪರಿಹಾರ ಹಾಗೂ ಪರ್ಯಾಯ ಭೂಮಿ ವಿತರಣೆಯೊಂದಿಗೆ 2013 ರ ಭೂಸ್ವಾಧಿನ ಕಾಯ್ದೆಯನ್ನು ಜಾರಿಗೆ ತರಬೇಕು. ಪುನವರ್ತಿಸತಿ ಕಲ್ಪಿಸದೆ ಯಾರನ್ನೂ ಒಕ್ಕಲೆಬ್ಬಿಸಬಾರದು. ಪುನರ್ವಸತಿ ಕೇಂದ್ರಗಳಲ್ಲಿ ವಾಸಕ್ಕೆ ಸಮರ್ಪಕ ಮನೆ, ಆರೋಗ್ಯ ಹಾಗೂ ಶಿಕ್ಷಣ ಸೌಲಭ್ಯಗಳನ್ನು ತಪ್ಪದೆ ಒದಗಿಸಬೇಕು.
6) ಅರಣ್ಯ ಹಕ್ಕುಗಳ ಕಾಯ್ದೆಯನ್ನು ಸಮರ್ಪಕವಾಗಿ ಜಾರಿ ಮಾಡಬೇಕು. ಅರಣ್ಯವಾಸಿಗಳ ಜೀವನ ನಿರ್ವಹಣೆಯ ಹಕ್ಕುಗಳಿಗೆ ರಕ್ಷಣೆ ನೀಡಬೇಕು. ಉದ್ಯೋಗ ಸೃಷ್ಟಿ ಮತ್ತು ಪರಿಸರ ರಕ್ಷಣೆಗಾಗಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಸಾಮಾಜಿಕ ಅರಣ್ಯ ಅಭಿವೃದ್ಧಿಯನ್ನು ಪ್ರೋತ್ಸಾಹಿಸಬೇಕು. ಈ ರಂಗದಲ್ಲಿ ಕೃಷಿ ಕೂಲಿಕಾರರಿಗೆ ಮತ್ತು ಇತರ ಗ್ರಾಮೀಣ ಕೆಲಸಗಾರರಿಗೆ ಉದ್ಯೋಗ ಒದಗಿಸುವುದು ಆದ್ಯತೆಯಾಗಬೇಕು.
7) ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನು ಬಲಪಡಿಸಬೇಕು. ಇದರಲ್ಲಿ ದ್ವಿದಳ ದಾನ್ಯಗಳು, ಎಣ್ಣೆಗಳು, ಸಾಂಬಾರು ಪದಾರ್ಥಗಳು ಮತ್ತು ಹಣ್ಣು ತರಕಾರಿಗಳನ್ನು ಒಳಗೊಂಡ ಪರಿಪೂರ್ಣವಾದ ಆಹಾರ ಪ್ಯಾಕೇಜ್ ಇರಬೇಕು.
8) ದಲಿತರ ಮೇಲಿನ ದೌರ್ಜನ್ಯಗಳನ್ನು ಕಟ್ಟುನಿಟ್ಟಾಗಿ ತಡೆಗಟ್ಟಬೇಕು. ಎಸ್.ಸಿ. ಮತ್ತು ಎಸ್.ಟಿ. ದೌರ್ಜನ್ಯ ತಡೆಕಾಯ್ದೆ 1989 ನ್ನು ಬಲಪಡಿಸಿ ಸಮರ್ಪಕವಾಗಿ ಜಾರಿಮಾಡಬೇಕು. ಪೋಲಿಸ್ ಠಾಣೆಯಲ್ಲೇ ಜಾಮೀನು ನೀಡಲು ಅವಕಾಶ ನೀಡುವ ಸೆಕ್ಷನ್ 41 ಅನ್ನು ರದ್ದು ಮಾಡಬೇಕು. ದಲಿತರ ವಿರುದ್ಧ ದೌರ್ಜನ್ಯ ಎಸಗುವ ಅಪರಾಧಿಗಳಿಗೆ ಕಠಿಣ ಶಿಕ್ಷೆಯಾಗುವಂತೆ ಪ್ರಕರಣವನ್ನು ದಾಖಲು ಮಾಡಬೇಕು.
9) ಕೇಂದ್ರ ಮತ್ತು ರಾಜ್ಯ ಬಜೆಟ್‌ನಲ್ಲಿ ಎಸ್‌ಸಿ/ಎಸ್.ಟಿ ಉಪಯೋಜನೆಯನ್ನು ಕಟ್ಟುನಿಟ್ಟಾಗಿ ಜಾರಿಮಾಡಬೇಕು. ಇದರ ಅನುಷ್ಠಾನದಲ್ಲಿ ಉಲ್ಲಂಘನೆ ಮಾಡವವವರನ್ನು ಆರ್ಥಿಕ ಕ್ರಿಮಿನಲ್ ಅಪರಾಧಿಗಳೆಂದು ಪರಿಗಣಿಸಬೇಕು.
10) ಖಾಸಗಿ ರಂಗದಲ್ಲಿ ಮೀಸಲಾತಿ ಜಾರಿಮಾಡಬೇಕು. ಮೀಸಲು ಕ್ಷೇತ್ರದಲ್ಲಿ ಬ್ಯಾಕ್‌ಲಾಗ್ ಹುದ್ದೆಗಳನ್ನು ಭರ್ತಿ ಮಾಡಬೇಕು.
11) ಕೃಷಿ ಕೂಲಿಕಾರರ ಕನಿಷ್ಟ ವೇತನವನ್ನು ಪರಿಷ್ಕರಿಸಬೇಕು ಮತ್ತು ಅದನ್ನು ಹಣದುಬ್ಬರ ದರಕ್ಕೆ ಜೋಡಿಸಬೇಕು. ಸಮಾನ ವೇತನ ನೀಡಬೇಕು. ಕೃಷಿ ಕೂಲಿಕಾರರ ವೇತನವು ಇತ್ತೀಚಿನ ವೇತನ ಆಯೋಗದ ವರದಿಗೆ ಅನುಗುಣವಾಗಿರಬೇಕು ಮತ್ತು ಪ್ರತಿ ಎರಡು ವರ್ಷಕ್ಕೊಮ್ಮೆ ಅದನ್ನು ಪರಿಷ್ಕರಿಸಬೇಕು.
12) ಕೇಂದ್ರ ಸರ್ಕಾರವು ಕಾಯ್ದೆಯೊಂದನ್ನು ಅಂಗೀಕರಿಸಿ ವಲಸೆ ಕಾರ್ಮಿಕರ ರಕ್ಷಣೆ, ಭದ್ರತೆ, ಗೌರವಯುತ, ಜೀವನ ನಿರ್ವಹಣೆ ಮತ್ತು ಇತರ ಕಲ್ಯಾಣ ಕಾರ್ಯಗಳಿಗೆ ವ್ಯವಸ್ಥೆ ಮಾಡಬೇಕು.
13) ಬಾಲ್ಯ ದುಡಿಮೆಯನ್ನು ನಿಷೇಧಿಸಬೇಕು. ಪೂರ್ವ ಪ್ರಾಥಮಿಕದಿಂದ ವಿಶ್ವವಿದ್ಯಾಲಯದ ವರೆಗೆ ಉಚಿತ ಹಾಗೂ ಗುಣಮಟ್ಟದ ಶಿಕ್ಷಣ ನೀಡಬೇಕು. ಅಗತ್ಯವಿರುವವರಿಗೆ ವಿದ್ಯಾರ್ಥಿ ವೇತನ ಮತ್ತು ಸಮರ್ಪಕ ವಿದ್ಯಾರ್ಥಿ ನಿಲಯ ವ್ಯವಸ್ಥೆ ಒದಗಿಸಬೇಕು.
14) ಪಂಚಾಯತ್ ಮಟ್ಟದಲ್ಲಿ ಗ್ರಾಮೀಣ ಆರೋಗ್ಯ ಉಪಕೇಂದ್ರಗಳನ್ನು ಬಲಪಡಿಸಿ. ಗಂಭೀರ ಆರೋಗ್ಯ ಪ್ರಕರಣಗಳಲ್ಲಿ ಎಲ್ಲರಿಗೂ ಕೋವಿಡ್ ಅಂತಹ ವ್ಯಾಕ್ಷಿನ್‌ಗಳನ್ನು ಒದಗಿಸಬೇಕು. (ಉಚಿತವಾಗಿ)
15) ಹೊಸ ಕಾರ್ಮಿಕ ಸಂಹಿತೆಗಳನ್ನು ಹಾಗೂ 2020ರ ವಿದ್ಯುತ್ ತಿದ್ದುಪಡಿ ಕಾಯ್ದೆಯನ್ನು ಕೂಡಲೇ ಹಿಂಪಡೆಯಬೇಕು.
16) ಎಲ್ಲ ರೈತರಿಗೂ ಕನಿಷ್ಟ ಬೆಂಬಲ ಬೆಲೆಯನ್ನು ಒದಗಿಸಬೇಕು. ಭೂಮಾಲಕರು ಗೇಣಿದಾರರನ್ನು ಒಕ್ಕಲೆಬ್ಬಿಸಬಾರದು. ಗೇಣಿದಾರ ಹಕ್ಕುಗಳ ರಕ್ಷಣೆಗೆ ಕಾನೂನು ಜಾರಿ, ಎಲ್ಲ ಸರ್ಕಾರಿ ಸೌಲಭ್ಯಗಳು ಗೇಣಿದಾರರಿಗೂ ತಪ್ಪದೆ ತಲಪಬೇಕು.
17) ಶಿಕ್ಷಣ, ಆರೋಗ್ಯ ಮತ್ತು ಸಾರ್ವಜನಿಕ ರಂಗದ ಘಟಕಗಳ ಖಾಸಗೀಕರಣ, ವ್ಯಾಪಾರೀಕರಣ ನಿಲ್ಲಿಸಬೇಕು.
18) ಗೋರಕ್ಷಕ ಎಂಬ ಗುಂಪುಗಳನ್ನು ನಿಷೇದಿಸಬೇಕು. ಕಾನೂನು ಕೈಗೆತ್ತಿಕೊಳ್ಳುವ, ಸಮಾಜದಲ್ಲಿ ಕೋಮುದ್ವೇಷವನ್ನು ಹಬ್ಬಿಸುವ ಶಕ್ತಿಗಳನ್ನು ಕ್ರಿಮಿನಲ್ ಕಾಯ್ದೆ ಅಡಿಯಲ್ಲಿ ಸೇರ್ಪಡಿಸಬೇಕು.
19) ಮಲ ಹೊರುವ ಪದ್ಧತಿಯನ್ನು ಸಂಪೂರ್ಣ ರದ್ದು ಮಾಡಬೇಕು. ಅವರಿಗೆ ಪರ್ಯಾಯ ಕೆಲಸ ಒದಗಿಸಬೇಕು. (ಪಂಚಾಯತ್ ಮತ್ತು ವಾರ್ಡ್ ಮಟ್ಟದಲ್ಲಿ) ಅವರಿಗೆ ಕನಿಷ್ಟ 21,000 ವೇತನ ನೀಡಬೇಕು.
20) ಅಂತರ ಜಾತಿ ವಿವಾಹ ಆಗುವವರಿಗೆ ಪ್ರೋತ್ಸಾಹ ಧನ ಹೆಚ್ಚಿಸಬೇಕು. ಅಂತರ ಧರ್ಮಿಯ ಜೋಡಿಗಳಿಗೆ ರಕ್ಷಣೆ ನೀಡಬೇಕು. ವಿಶೇಷ ವಿವಾಹ ಕಾಯ್ದೆಯಡಿ ಒಂದು ತಿಂಗಳ ನೋಟಿಸ್ ಕೊಡಬೇಕೆಂಬುದನ್ನು ರದ್ದುಮಾಡಿ ಈ ಕಾಯ್ದೆ ಅಡಿಯಲ್ಲಿ ವಿವಾಹವಾಗುವರಿಗೆ ಕಿರುಕುಳ ಆಗುವುದನ್ನು ತಪ್ಪಿಸಬೇಕು.
21) ಕೂಲಿಕಾರ ಮಹಿಳೆಯರಿಗೆ ಅವರ ಅಗತ್ಯಗಳಿಗೆ ಅನುಗುಣವಾದ ಉದ್ಯೋಗ ಯೋಜನೆಗಳನ್ನು ರೂಪಿಸಬೇಕು. ಮತ್ತು ಉದ್ಯೋಗ ನೀತಿಯನ್ನು ಘೋಷಿಸಬೇಕು.
22) ಇ–ಶ್ರಮ ಅಡಿಯಲ್ಲಿ ನೋಂದಾಯಿಸದಿರುವ ಎಲ್ಲರನ್ನು ನೋಂದಾಯಿಸುವುದು ಮತ್ತು ಈ ಕೆಲಸಕ್ಕೆ ಗ್ರಾಮೀಣ ವಿದ್ಯಾವಂತ ಯುವ ಜನರನ್ನು ಬಳಸಿಕೊಳ್ಳಬೇಕು.
23) ಸೂಕ್ತ ರಕ್ಷಣಾ ಕ್ರಮಗಳನ್ನು ಅಳವಡಿಸಿ ಅಪಾಯಕಾರಿ ಕ್ರಿಮಿನಾಷಕಗಳ ಬಳಕೆಯನ್ನು ನಿಯಂತ್ರಿಸಬೇಕು. ಆರೋಗ್ಯ ಅವಗಡಗಳ ಸಂದರ್ಭದಲ್ಲಿ ಅಗತ್ಯ ಪರಿಹಾರ ನೀಡಬೇಕು.
24) ಕೃಷಿ ಕೂಲಿಕಾರರ ಬಸ್ತಿಗಳಲ್ಲಿ ಮತ್ತು ಇತರ ಗ್ರಾಮೀಣ ವಠಾರಗಳಲ್ಲಿ ಶುದ್ಧ ಕುಡಿಯುವ ನೀರನ್ನು ಒದಗಿಸಬೇಕು. ಕೃಷಿ ಕೂಲಿಕಾರ ಕುಟುಂಬಗಳಿಗೆ ಉಚಿತ ವಿದ್ಯುತ್ ಸಂಪರ್ಕವನ್ನು ಒದಗಿಸಬೇಕು.
25) ಕೃಷಿ ಕೂಲಿಕಾರರ ಮತ್ತು ಗ್ರಾಮೀಣ ಭೂರಹಿತ ಬಡವರ ಸಾಲವನ್ನು ಒಂದು ಸಲ ಮನ್ನಾ ಮಾಡಬೇಕು. ಸಹಕಾರಿ ಸಂಘಗಳ ಮತ್ತು ಬ್ಯಾಂಕ್ ಮೂಲಕ ಅವರಿಗೆ ಸಾಲ ನೀಡಬೇಕು. ಸ್ವಸಹಾಯ ಗುಂಪುಗಳ ಸಾಲ ಮನ್ನಾ ಮಾಡಬೇಕು. ಮಹಿಳೆಯರಿಗೆ ಬಡ್ಡಿ ರಹಿತ ಸಾಲ ನೀಡಬೇಕು. ಮೈಕ್ರೊ ಫೈನ್ಯಾನ್ಸ್ ಕಂಪೆನಿಗಳು ಗ್ರಾಮೀಣ ಬಡವರ ಲೂಟಿ ಮಾಡುವುದನ್ನು ತಡೆಗಟ್ಟಲು ಖಃಖ ಸೂಕ್ತ ನಿಯಮಗಳನ್ನು ಮಾಡಬೇಕು.
26) ಬಡತನ ನಿವಾರಣಾ ಮತ್ತು ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮಗಳನ್ನು ಬ್ರಷ್ಟಾಚಾರ ಮುಕ್ತವಾಗಿ ಜಾರಿ ಮಾಡಬೇಕು.
27) ಕೃಷಿ ಕೂಲಿಕಾರರ ಮತ್ತು ಇತರ ಗ್ರಾಮೀಣ ಮಹಿಳೆಯರ ಕಲ್ಯಾಣ ಮಂಡಳಿಗಳನ್ನು ಎಲ್ಲಾ ರಾಜ್ಯಗಳಲ್ಲಿ ಸ್ಥಾಪಿಸಬೇಕು. ಸರಕಾರ ಗ್ರಾಮೀಣ ಪ್ರದೇಶದಲ್ಲಿ ಜನರು ಕೆಲಸ ಕಳೆದುಕೊಳ್ಳಲು ಕಾರಣವಾಗುವಂತಹ ತಂತ್ರಜ್ಞಾನವನ್ನು ಕೃಷಿ ಕ್ಷೇತ್ರದಲ್ಲಿ ಬಳಸಬಾರದು.
28) ಬುಡಕಟ್ಟುಗಳ ಹಿತಕ್ಕೆ ಹಾಗೂ ಪರಿಸರಕ್ಕೆ ಧಕ್ಕೆ ತರುವ ಪಂಚಾಯತಿಗಳ ಹಸ್ತಕ್ಷೇಪಕ್ಕೆ ಅವಕಾಶ ಕೊಡಬಾರದು.

ವೇತನ, ಕೆಲಸದ ಪರಿಸ್ಥಿತಿ, ಸಾಮಾಜಿಕ ಹಿತರಕ್ಷಣೆ ಇತ್ಯಾದಿ ಪ್ರಶ್ನೆಗಳನ್ನು ಕೃಷಿ ಕೂಲಿಕಾರರ ಒಂದು ಸಮಗ್ರವಾದ ಕೇಂದ್ರೀಯ ಕಾನೂನಿನಲ್ಲಿ ಒಳಪಡಿಸಬೇಕು. ಇದು ಕೃಷಿ ಕೂಲಿಕಾರರ ಪ್ರಮುಖ ಬೇಡಿಕೆಯಾಗಿದೆ. ಆಗಸ್ಟ್ 1, 2022 ರಂದು 500 ಜಿಲ್ಲಾ ಕೇಂದ್ರಗಳಲ್ಲಿ ಕೃಷಿ ಕೂಲಿಕಾರ ಸಂಘಟನೆಗಳ ಜಂಟಿ ಪ್ರತಿಭಟನೆ 28 ಹಕ್ಕೊತ್ತಾಯಗಳ ಮನವಿ ಸಲ್ಲಿಕೆ.

ಚಿಂತಕ, ವಿಮರ್ಶಕ, ಹೋರಾಟಗಾರ ಜಿ.ರಾಜಶೇಖರ್ ನಿಧನಕ್ಕೆ ಸಿಪಿಐ(ಎಂ) ಕಂಬನಿ

ಪುಟ 4 ರಿಂದ

ಮೂಲಕ ದಾಖಲಿಸಿದರು. ಅದಕ್ಕೆ ಸಾಹಿತ್ಯ ಅಕಾಡೆಮಿ ಪ್ರಶಸ್ತಿಯೂ ದೊರಕಿತು. ಆದರೆ ಕೋಮುವಾದದ ವಿರುದ್ಧ ಪ್ರತಿಭಟನೆಯಾಗಿ ಅದನ್ನು ತಿರಸ್ಕರಿಸಿದರು.

ದಲಿತ ಹೋರಾಟದಲ್ಲಿಯೂ ಅವರು ತೊಡಗಿಸಿಕೊಂಡಿದ್ದರು. ಮಾರ್ಕ್ಸ್‌ವಾದ ಮತ್ತು ಅಂಬೇಡ್ಕರ್ ವಾದ ಒಂದಕ್ಕೊಂದು ಪೂರಕವಾಗಿದೆ ಎಂದು ಗುರುತಿಸಿದ್ದರು.

ವಿದ್ಯಾರ್ಥಿ, ಯುವಜನ ಹಾಗೂ ಸಾಂಸ್ಕೃತಿಕ ರಂಗದ ಅಧ್ಯಯನ ಶಿಬಿರ ಹಾಗೂ ವಿಚಾರ ಸಂಕಿರಣಗಳಲ್ಲಿ ಮಾರ್ಗದರ್ಶನ ಮಾಡುತ್ತಾ ಹಲವಾರು ಪ್ರಗತಿಪರ ಕಾರ್ಯಕರ್ತರನ್ನು ಉತ್ತೇಜಿಸಿದರು.

ಹೀಗೆ ಬಹುಮುಖ ವ್ಯಕ್ತಿತ್ವದ ಕಾಮ್ರೇಡ್ ರಾಜಶೇಖರ್ ನ್ಯಾಯಕ್ಕಾಗಿ ಹೋರಾಡುವ ಸಮುದಾಯಕ್ಕೆ ಆದರ್ಶಪ್ರಾಯರಾಗಿದ್ದಾರೆ. ಅವರ ಚಿಂತನೆಗಳನ್ನು ಎತ್ತಿ ಹಿಡಿಯುವುದೇ ಅವರಿಗೆ ಸಲ್ಲಿಸುವ ನೈಜ ಶ್ರದ್ಧಾಂಜಲಿ.

ದುಃಖ ತಪ್ತ ಪತ್ನಿ, ಇಬ್ಬರು ಮಕ್ಕಳು, ಕುಟುಂಬಕ್ಕೆ ಸಿಪಿಐ(ಎಂ) ಸಂತಾಪ ಸೂಚಿಸುತ್ತದೆ.

ಸಿಪಿಐ(ಎಂ) ವತಿಯಿಂದ ಉಡುಪಿ ಜಿಲ್ಲಾ ಕಾರ್ಯದರ್ಶಿ ಬಾಲಕೃಷ್ಣ ಶೆಟ್ಟಿ, ರಾಜ್ಯ ಸಮಿತಿ ಸದಸ್ಯ ಮುನೀರ್ ಕಾಟಿಪಳ್ಳ, ದ.ಕ.ಜಿಲ್ಲಾ ಮುಖಂಡರಾದ ಸುನೀಲ್ ಬಜಾಲ್, ಸಂತೋಷ್ ಬಜಾಲ್ ಉಡುಪಿ ಜಿಲ್ಲಾ ಸಮಿತಿ ಸದಸ್ಯರಾದ ಸುರೇಶ್ ಕಲ್ಲಾಗರ, ಕವಿರಾಜ್, ಚಂದ್ರಶೇಖರ್, ಹಿರಿಯ ಚಿಂತಕ ಎ.ಎಸ್.ಆಚಾರ್ಯ ಮತ್ತಿತರರು ಅಂತಿಮ ನಮನ ಸಲ್ಲಿಸಿದರು.

ಚಂದಾ ವಿವರ

ವಾರ್ಷಿಕ ಚಂದಾ : ರೂ.500.00
ದ್ವೈವಾರ್ಷಿಕ ಚಂದಾ : ರೂ.1000.00

ಚಂದಾದಾರರು ಸಂರ್ಕಿಸಿ :
ಕ್ರಿಯಾ ಪ್ರಕಾಶನ, ಸೂರಿ ಭವನ
ನಂ.40/5, 2ನೇ 'ಬಿ' ಮುಖ್ಯರಸ್ತೆ, 16ನೇ
ಅಡ್ಡರಸ್ತೆ, ಸಂಪಂಗಿರಾಮನಗರ,
ಬೆಂಗಳೂರು 560027
ಕಛೇರಿ ದೂರವಾಣಿ : 080–22234369
ಫೋನ್ : 9448578021, 9483966467



ಮೊಸರು, ಮಜ್ಜಿಗೆಗೆ ಜಿಎಸ್‌ಟಿ ಮೋದಿ ಆಡಳಿತದ ನಿರ್ದಯ ಕ್ರಮ

ಮೋದಿ ನೇತೃತ್ವದ ಸರ್ಕಾರ ಶ್ರೀಮಂತರು ಮತ್ತು ಐಷಾರಾಮಿ ಉತ್ಪನ್ನಗಳ ಮೇಲೆ ತೆರಿಗೆ ವಿಧಿಸುವ ಉದ್ದೇಶ ಹೊಂದಿಲ್ಲ. ಮೋದಿ ಸರ್ಕಾರ 2019ರಲ್ಲಿ ಕಾರ್ಪೋರೇಟ್ ತೆರಿಗೆಯನ್ನು ಕಡಿತಗೊಳಿಸಿದ್ದರಿಂದ ಬೊಕ್ಕಸಕ್ಕೆ ರೂ.1.45 ಲಕ್ಷ ಕೋಟಿ ನಷ್ಟವಾಯಿತು. ಜೊತೆಗೆ ಕಾರ್ಪೋರೇಟ್ ಕಂಪನಿಗಳ ಸಾಲವನ್ನು ಮನ್ನಾ ಮಾಡಲಾಗುತ್ತಿದೆ. ಜೊತೆಗೆ ಶ್ರೀಮಂತರು ಬ್ಯಾಂಕ್‌ಗಳಿಗೆ ಸುಸ್ತಿ ಆಗಿರುವ ಮೊತ್ತ ರೂ.2.4 ಲಕ್ಷ ಕೋಟಿಗಳಾಗಿದೆ. ಬೇಲ್‌ಔಟ್ ಮತ್ತು ವಿನಾಯಿತಿಗಳಿಂದ ಆಗಿರುವ ನಷ್ಟವನ್ನು ಪೆಟ್ರೋಲಿಯಂ ಉತ್ಪನ್ನಗಳ ಮೇಲೆ ತೆರಿಗೆಯಂತಹ ಪರೋಕ್ಷ ತೆರಿಗೆ ಮತ್ತು ಆಹಾರ ಉತ್ಪನ್ನಗಳು ಹಾಗೂ ದಿನಬಳಕೆ ಉತ್ಪನ್ನಗಳ ಮೇಲೆ ಜಿಎಸ್‌ಟಿ ವಿಧಿಸುವ ಮೂಲಕ ಬೊಕ್ಕಸ ತುಂಬಲಾಗುತ್ತಿದೆ.

ಪ್ರಕಾಶ್ ಕಾರತ್

ದೇಶದ ಚಾಲ್ತಿ ಖಾತೆ ಮತ್ತು ವಾಣಿಜ್ಯ ಖಾತೆ ಕೊರತೆ ಅಗಾಧವಾಗಿ ವಿಸ್ತರಿಸಿರುವ ನಡುವೆಯೇ ಡಾಲರ್ ಎದುರು ರೂಪಾಯಿ ಮೌಲ್ಯ ಇದೇ ಮೊದಲ ಬಾರಿಗೆ ರೂ.80 ದಾಟಿದೆ. ಹೀಗೆ ರೂಪಾಯಿ ಮೌಲ್ಯ ನಿರಂತರವಾಗಿ ಕುಸಿಯುತ್ತಿರುವುದರಿಂದ ಹಣದುಬ್ಬರದ ಒತ್ತಡ ಹೆಚ್ಚಲಿದೆ. ಈಗಾಗಲೆ ಹೆಚ್ಚಿನ ಪ್ರಮಾಣದಲ್ಲಿರುವ ಹಣದುಬ್ಬರ ಮತ್ತು ಹೆಚ್ಚಿನ ನಿರುದ್ಯೋಗ ಪ್ರಮಾಣದ ಜೊತೆಗೂಡುವ ಈ ರೂಪಾಯಿ ಮೌಲ್ಯ ಕುಸಿತ ಭಾರಿ ಉದ್ಯಮಿಗಳ ಪರ ನೀತಿಗಳನ್ನು ರೂಪಿಸುವ ಮೋದಿ ನೇತೃತ್ವದ ಸರ್ಕಾರ ಆರ್ಥಿಕತೆಯನ್ನು ಹೇಗೆ ಕೆಟ್ಟದಾಗಿ ನಿರ್ವಹಣೆ ಮಾಡಲಾಗುತ್ತಿದೆ ಎಂಬುದನ್ನು ತೋರಿಸಿದೆ. ಸಗಟು ಮತ್ತು ರಿಟೇಲ್ ಹಣದುಬ್ಬರ ದರಗಳು ಕ್ರಮವಾಗಿ ಶೇ.15 ಮತ್ತು ಶೇ.7ರಷ್ಟಿದ್ದು ನಿರಂತರವಾಗಿ ಹೆಚ್ಚಿನ ಪ್ರಮಾಣದಲ್ಲಿ ಮುಂದುವರೆದಿದೆ. ಇದರ ಪರಿಣಾಮವಾಗಿ ಅಗತ್ಯ ವಸ್ತುಗಳು ಅದರಲ್ಲೂ ಆಹಾರ ಉತ್ಪನ್ನಗಳು ಸತತವಾಗಿ ಏರಿಕೆ ಕಾಣುತ್ತಿವೆ. ಇದರ ಜೊತೆಗೆ ಹೆಚ್ಚಿಸಲಾದ ಅಡುಗೆ ಅನಿಲ ಸಿಲಿಂಡರ್ ಮತ್ತು ಇಂಧನ ದರಗಳು ಜನಸಾಮಾನ್ಯರ ಮೇಲೆ ಭಾರಿ ಹೊರೆ ಹೇರಿದೆ.

ವಿವಿಧ ಕಾರಣಗಳಿಂದಾಗಿ ಕಳೆದ ಮೂರು ವರ್ಷಗಳಿಂದಲೂ ರೂಪಾಯಿ ಮೌಲ್ಯ ಸತತವಾಗಿ ಕುಸಿಯುತ್ತಾ ಸಾಗಿದೆ. ಇವುಗಳಲ್ಲಿ ಅತ್ಯಂತ ಪ್ರಮುಖವಾದದ್ದು ವಾಣಿಜ್ಯ ಮತ್ತು ಚಾಲ್ತಿ ಖಾತೆ ಕೊರತೆ. ಈ ಸದ್ಯ ಕುಸಿದಿರುವುದಕ್ಕೆ ಪ್ರಮುಖ ಕಾರಣ ಅಮೆರಿಕದ ಫೆಡರಲ್ ರಿಸರ್ವ್ (ಭಾರತದಲ್ಲಿ ಆರ್‌ಬಿಐ ಇದ್ದಂತೆ) ತನ್ನ ಬಡ್ಡಿದರಗಳನ್ನು ಏರಿಕೆ ಮಾಡಿದ್ದರಿಂದ ವಿದೇಶಿ ಸಾಂಸ್ಥಿಕ ಹೂಡಿಕೆದಾರರು ಭಾರತದಲ್ಲಿನ ಹೂಡಿಕೆಯನ್ನು ಇದ್ದಕ್ಕಿದ್ದಂತೆ ಹಿಂಪಡೆದಿದ್ದು. ಉದಾ: ವಿದೇಶಿ ಸಾಂಸ್ಥಿಕ ಹೂಡಿಕೆದಾರರು ಈ ವರ್ಷದಲ್ಲಿ ಇದುವರೆಗೂ 3,000 ಕೋಟಿ ಡಾಲರ್ ಮೌಲ್ಯದ ಷೇರುಗಳನ್ನು ಮಾರಾಟ ಮಾಡಿದ್ದಾರೆ.

ಆರ್‌ಬಿಐ ಮುಕ್ತ ಮಾರುಕಟ್ಟೆಯಲ್ಲಿ ಮಧ್ಯಪ್ರವೇಶಿಸಿ ತನ್ನಲ್ಲಿನ ವಿದೇಶಿ ವಿನಿಮಯ ಹಣ ಬಳಸಿ ಮುಕ್ತ ಮಾರುಕಟ್ಟೆಯಲ್ಲಿ ವಹಿವಾಟು ನಡೆಸುವ ಮೂಲಕ ರೂಪಾಯಿ ಮೌಲ್ಯ ಕುಸಿತವನ್ನು ತಡೆಯಬಹುದಿತ್ತು. ಆದರೆ ಹಾಗೆ ಮಾಡಲಿಲ್ಲ. ಇದು ಏನನ್ನು ತೋರಿಸುತ್ತದೆ ಎಂದರೆ ಆರ್‌ಬಿಐ ಉದ್ದೇಶಪೂರ್ವಕವಾಗಿಯೇ ರೂಪಾಯಿ ಕುಸಿತಕ್ಕೆ ಅನುವು ಮಾಡಿಕೊಟ್ಟಿತು. ಇದರಿಂದ ರೂಪಾಯಿ ಲೆಕ್ಕಾಚಾರದಲ್ಲಿ ಭಾರತದ ರಫ್ತಿಗೆ ಉತ್ತೇಜನ ಸಿಗಲಿದ್ದು, ಆಮದು ದುಬಾರಿಯಾಗಲಿದೆ. ಮತ್ತೊಂದು ಕಡೆ ವಾಣಿಜ್ಯ ಕೊರತೆ ಇಳಿಮುಖ ಕಾಣುವುದಾಗಿತ್ತು. ಆದರೆ ಇದು ಸಂಭವಿಸಲಿಲ್ಲ. ಏಕೆಂದರೆ ರೂಪಾಯಿ ಮೌಲ್ಯ ಪ್ರಮುಖವಾಗಿ ಕುಸಿದಿದ್ದು ಬಂಡವಾಳ ಹೊರ ಹರಿವಿನಿಂದಾಗಿ. ಈ ಕಾರಣದಿಂದಾಗಿ ವಾಣಿಜ್ಯ ಕೊರತೆ ಕಡಿಮೆಯಾಗಲಿಲ್ಲ.

ರೂಪಾಯಿ ಕುಸಿತದಿಂದ ಆಮದು ದುಬಾರಿಯಾಗಿ ಎಲ್ಲ ವಲಯಗಳ ಮೇಲೂ ವ್ಯತಿರಿಕ್ತ ಪರಿಣಾಮ ಬೀರಿತು. ಸರ್ಕಾರ ಅನಿವಾರ್ಯವಾಗಿ ಅತಿಹೆಚ್ಚಿನ ಸಬ್ಸಿಡಿಗಳನ್ನು ಕಡಿತಗೊಳಿಸುವುದಕ್ಕೆ ಮುಂದಾಯಿತು. ಈ ಪೈಕಿ ರಸಗೊಬ್ಬರ ಮತ್ತು ಪೆಟ್ರೋಲಿಯಂ ಉತ್ಪನ್ನಗಳಿಗೆ ಹೆಚ್ಚಿನ ಸಬ್ಸಿಡಿ ನೀಡುತ್ತಿದ್ದು ಅದನ್ನು ಕಡಿತಗೊಳಿಸಲಾಯಿತು. ಈ ಕ್ರಮದಿಂದ ಈಗಾಗಲೆ ಹೆಚ್ಚಿನ ಪ್ರಮಾಣದಲ್ಲಿರುವ ಹಣದುಬ್ಬರ ಇನ್ನಷ್ಟು ಗಗನಮುಖಿಯಾಗಿ ಅಗತ್ಯ ಉತ್ಪನ್ನಗಳ ದರಗಳು ಇನ್ನಷ್ಟು ಏರಿಕೆ ಕಂಡವು.



ಹೆಚ್ಚಿನ ಪ್ರಮಾಣದ ದರ ಏರಿಕೆಯಿಂದ ಜನಸಾಮಾನ್ಯರು ತಲ್ಲಣಿಸಿರುವ ಸಂದರ್ಭದಲ್ಲೇ ಕೇಂದ್ರ ಸರ್ಕಾರ ಹಲವಾರು ಉತ್ಪನ್ನಗಳ ಮೇಲೆ ಜಿಎಸ್‌ಟಿ ವಿಧಿಸಿದೆ. ಇದೇ ಮೊದಲ ಬಾರಿಗೆ ಬೇಳೆಕಾಳು, ಮೊಸರು, ಮಜ್ಜಿಗೆ, ಮಾಂಸ ಮತ್ತು ಮೀನು ಸೇರಿದಂತೆ ಮತ್ತಿತರ ಉತ್ಪನ್ನಗಳಿಗೆ ಶೇ.5ರಷ್ಟು ಜಿಎಸ್‌ಟಿ ವಿಧಿಸಲಾಗಿದೆ. ಅಂತ್ಯ ಸಂಸ್ಕಾರ, ಆಸ್ಪತ್ರೆ ಕೊಠಡಿಗಳು, ಚೆಕ್ ಮೂಲಕ ವ್ಯವಹಾರ ಸೇರಿದಂತೆ ಹಲವಾರು ಸೇವೆಗಳಿಗೂ ಜಿಎಸ್‌ಟಿ ವಿಧಿಸಲಾಗಿದೆ. ನಿರ್ದಯಿ ಸರ್ಕಾರ ಮಾತ್ರವೇ ಆಹಾರ ಉತ್ಪನ್ನಗಳ ಮೇಲೆ ತೆರಿಗೆಯನ್ನು ವಿಧಿಸುವ ಮೂಲಕ ಜನರ ಮೇಲೆ ಇಂತಹ ಹೊರೆ ಹೇರಲಿದೆ. ಈ ಕುರಿತು ಪ್ರತಿಕ್ರಿಯಿಸಿರುವ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್, ಈ ಪ್ರಸ್ತಾವನೆಗಳನ್ನು ಜಿಎಸ್‌ಟಿ ಕೌನ್ಸಿಲ್‌ನಲ್ಲಿ ಅಳವಡಿಸಿಕೊಳ್ಳಲಾಗಿದೆ ಮತ್ತು ಯಾವುದೇ ರಾಜ್ಯವೂ ಇದನ್ನು ವಿರೋಧಿಸಿ ಮನವಿ ಪತ್ರ ಸಲ್ಲಿಸಿಲ್ಲ ಎಂದು ಹೇಳಿದ್ದಾರೆ. ಇದು ಅಪ್ಪಟ ಸುಳ್ಳು.

ಕೇರಳ ಹಣಕಾಸು ಸಚಿವ ಕೆ.ಎನ್.ಬಾಲಗೋಪಾಲ್ ಜಿಎಸ್‌ಟಿ ದರ ಪರಿಷ್ಕರಣೆ ಜಾರಿಗೆ ತರುವ ಸಚಿವರ ತಂಡ (ಜಿಒಎಂ) ಸದಸ್ಯರಾಗಿದ್ದರು. ಬಾಲಗೋಪಾಲನ್ 29-11-2021ರಂದು ಕೇಂದ್ರ ಸರ್ಕಾರಕ್ಕೆ ಪತ್ರವೊಂದನ್ನು ಬರೆದು ಸಾಮಾನ್ಯ ಜನರಿಗೆ ಹೊರೆಯಾಗದೆ ಜಿಎಸ್‌ಟಿ ವ್ಯವಸ್ಥೆಯಲ್ಲಿ ಆದಾಯ ಹೆಚ್ಚಿಸುವುದು ಹೇಗೆ, ಈ ಕುರಿತು ವಿಸ್ತೃತ ವರದಿ ನೀಡುವಂತೆ ಮನವಿ ಮಾಡಿದ್ದರು. ಕೇರಳ ಸರ್ಕಾರದ ನಿಲುವನ್ನು ವಿವರಿಸಿ ಈ ಪತ್ರವನ್ನು ಮತ್ತೆ ಜೂನ್ 17, 2022ರಂದು ಸಚಿವರ ತಂಡಕ್ಕೆ ಕಳಿಸಿದರು.

ಇತ್ತೀಚೆಗೆ ಚಂಢೀಗಡದಲ್ಲಿ ನಡೆದ ಜಿಎಸ್‌ಟಿ ಸಭೆಯಲ್ಲಿ ಆಹಾರ ಉತ್ಪನ್ನಗಳಿಗೆ ಜಿಎಸ್‌ಟಿ ವಿಧಿಸುವ ಕುರಿತ ತೀರ್ಮಾನವು ಎಷ್ಟು ಅಪಾರದರ್ಶಕ ಎಂಬುದಕ್ಕೆ ನಿದರ್ಶನವಾಗಿತ್ತು. ಈಗ ಕೇರಳ ಸರ್ಕಾರ ಕುಟುಂಬಶ್ರೀ ಅಥವಾ ಸಣ್ಣ ಅಂಗಡಿಗಳಲ್ಲಿ ಮಾರಾಟ ಮಾಡುವ 1 ಕೆ.ಜಿ ಅಥವಾ 2 ಕೆ.ಜಿ ಆಹಾರ ಪಾಕೆಟ್‌ಗಳಿಗೆ ತೆರಿಗೆ ವಿಧಿಸದಿರಲು ತೀರ್ಮಾನಿಸಿದೆ.


ಕೇರಳ ಸರ್ಕಾರ ಈ ಹಿಂದಿನ ಆಡಳಿತಾವಧಿಯಲ್ಲಿ ಥಾಮಸ್ ಐಸಾಕ್ ಹಣಕಾಸು ಸಚಿವರಾದಂದಿನಿಂದಲೂ ಆಹಾರ ಉತ್ಪನ್ನಗಳ ಮೇಲೆ ತೆರಿಗೆ ವಿಧಿಸುವ ಕುರಿತು ತನ್ನದೇ ನಿಲುವನ್ನು ಹೊಂದಿದೆ. ಅಂದಿನಿಂದಲೂ ಗ್ರಾಹಕರಿಗೆ ಕಡಿಮೆ ಜಿಎಸ್‌ಟಿ ವಿಧಿಸುತ್ತಿದೆ. ಬದಲಿಗೆ ಐಷಾರಾಮಿ ಉತ್ಪನ್ನಗಳ ಮೇಲೆ ಕನಿಷ್ಠ ಶೇ.28 ರಷ್ಟು ತೆರಿಗೆ ವಿಧಿಸಲಾಗುತ್ತಿದೆ.

ಹೀಗಿದ್ದರೂ ಮೋದಿ ನೇತೃತ್ವದ ಸರ್ಕಾರ ಶ್ರೀಮಂತರು ಮತ್ತು ಐಷಾರಾಮಿ ಉತ್ಪನ್ನಗಳ ಮೇಲೆ ತೆರಿಗೆ ವಿಧಿಸುವ ಉದ್ದೇಶ ಹೊಂದಿಲ್ಲ. ಮೋದಿ ಸರ್ಕಾರ 2019ರಲ್ಲಿ ಕಾರ್ಪೋರೇಟ್ ತೆರಿಗೆಯನ್ನು ಕಡಿತಗೊಳಿಸಿದ್ದರಿಂದ ಬೊಕ್ಕಸಕ್ಕೆ ರೂ.1.45 ಲಕ್ಷ ಕೋಟಿ ನಷ್ಟವಾಯಿತು. ಜೊತೆಗೆ ಕಾರ್ಪೋರೇಟ್ ಕಂಪನಿಗಳ ಸಾಲವನ್ನು ಮನ್ನಾ ಮಾಡಲಾಗುತ್ತಿದೆ. ಜೊತೆಗೆ ಶ್ರೀಮಂತರು ಬ್ಯಾಂಕ್‌ಗಳಿಗೆ ಸುಸ್ತಿ ಆಗಿರುವ ಮೊತ್ತ ರೂ.2.4 ಲಕ್ಷ ಕೋಟಿಗಳಾಗಿದೆ. ಬೇಲ್‌ಔಟ್ ಮತ್ತು ವಿನಾಯಿತಿಗಳಿಂದ ಆಗಿರುವ ನಷ್ಟವನ್ನು ಪೆಟ್ರೋಲಿಯಂ ಉತ್ಪನ್ನಗಳ ಮೇಲೆ ತೆರಿಗೆಯಂತಹ ಪರೋಕ್ಷ ತೆರಿಗೆ ಮತ್ತು ಆಹಾರ ಉತ್ಪನ್ನಗಳು ಹಾಗೂ ದಿನಬಳಕೆ ಉತ್ಪನ್ನಗಳ ಮೇಲೆ ಜಿಎಸ್‌ಟಿ ವಿಧಿಸುವ ಮೂಲಕ ಬೊಕ್ಕಸ ತುಂಬಲಾಗುತ್ತಿದೆ.

ಇಂತಹ ಆಕ್ರಮಣಕಾರಿ ನೀತಿಗಳು ಕೊನೆಯಾಗಬೇಕು. ಇದರ ಆರಂಭವಾಗಿ ಏರಿಸಿರುವ ಜಿಎಸ್‌ಟಿ ದರಗಳನ್ನು ಹಿಂಪಡೆಯಬೇಕು. ಪೆಟ್ರೋಲ್ ಮತ್ತು ಡೀಸಲ್ ಮೇಲಿನ ಸರ್‌ಚಾರ್ಜ್ ಮತ್ತು ಸೆಸ್ ತೆಗೆಯಬೇಕು. ಇದರ ಬದಲಿಗೆ ಭಾರಿ ಶ್ರೀಮಂತರು ಮತ್ತು ಕಾರ್ಪೋರೇಟ್‌ಗಳ ಮೇಲೆ ಹೆಚ್ಚಿನ ತೆರಿಗೆ ವಿಧಿಸಬೇಕು.

ಅನು: ಮುರಳಿ





> ದಕ್ಷಿಣ ಭಾರತದಲ್ಲಿ ಬಿಜೆಪಿ ಹೆಬ್ಬಾಗಿಲು ಕರ್ನಾಟಕ. ಇದನ್ನು ಶತಾಯ ಗತಾಯ ಹಾಗೇ ಉಳಿಸಿಕೊಳ್ಳಲು ಹೆಣಗಾಡುತ್ತಿದೆ. ಹೀಗಾಗಿ ಎಸ್‌ಸಿ, ಎಸ್‌ಟಿ ಮತ್ತು ಓಬಿಸಿಗಳನ್ನು ತಮ್ಮ ಪಕ್ಷದ ಪ್ರಮುಖ ಬೆಂಬಲಿಗರು ಮತ್ತು ಮತಬ್ಯಾಂಕ್ ಮಾಡಿಕೊಳ್ಳಬೇಕೆಂಬುದು ಬಿಜೆಪಿಯ ಹಳೆಯ ತಂತ್ರ. ಉತ್ತರ ಭಾರತದಲ್ಲಿ ಈ ಸ್ಟ್ರಾಟಜಿಯಲ್ಲಿ ಬಹುತೇಕ ಯಶಸ್ವಿಯಾಗಿದ್ದು ಕರ್ನಾಟಕದಲ್ಲಿ ಈಗ ರಂಗಕ್ಕಿಳಿದಿದೆ. ಈ ಹಿನ್ನೆಯಲ್ಲಿ ಚಿತ್ರದುರ್ಗದಲ್ಲಿ ಮಾದಾರ ಚನ್ನಯ್ಯ ಮಠದಲ್ಲಿ ಎಸ್‌ಸಿ, ಎಸ್‌ಟಿ ಮತ್ತು ಓಬಿಸಿ ಸ್ವಾಮೀಜಿಗಳ ಸಭೆಯನ್ನು ಆರ್‌ಎಸ್‌ಎಸ್ ಸರಸಂಘಚಾಲಕ ಮೋಹನ್ ಭಾಗವತ್ ಇತ್ತೀಚೆಗೆ ಕರೆದಿದ್ದರು. ಹಿಂದೂ ಧರ್ಮವನ್ನು ಬೆಳೆಸುವುದು ಎಂದು ಮೇಲ್ನೋಟಕ್ಕೆ ಹೇಳಿದರೂ ಈ ಚುನಾವಣೆಯಲ್ಲಿ ಬಿಜೆಪಿಯನ್ನು ಮತ್ತೆ ಅಧಿಕಾರಕ್ಕೆ ತರುವುದು ಇದರ ಪ್ರಮುಖ ಗುರಿಯಾಗಿತ್ತು ಎಂಬುದು ಗುಟ್ಟಾಗಿ ಉಳಿದಿಲ್ಲ.



ಚುನಾವಣಾ ಸಿದ್ಧತೆ
ಜಾತಿ ಮತಗಳ ಓಲೈಕೆಯಲ್ಲಿ ಆರೆಸ್ಸೆಸ್ ಬಿಜೆಪಿ ನಾಯಕರು

ಮುರಳಿ ಕೃಷ್ಣ



ಕರ್ನಾಟಕ ವಿಧಾನಸಭೆ ಚುನಾವಣೆ ಇನ್ನೂ ಎಂಟು ತಿಂಗಳು ಇರುವಾಗಲೇ ಪ್ರಮುಖ ರಾಜಕೀಯ ಪಕ್ಷಗಳಾದ ಬಿಜೆಪಿ, ಕಾಂಗ್ರೆಸ್ ಮತ್ತು ಜೆಡಿಎಸ್ ವ್ಯಾಪಕ ತಯಾರಿಯಲ್ಲಿ ತೊಡಗಿವೆ. ಕೋಮುವಾದಿ ಬಿಜೆಪಿಯಂತೂ ತುಂಬಾ ಆಕ್ರಮಣಕಾರಿಯಾಗಿದ್ದು ಎಲ್ಲ ವರ್ಗ ಮತ್ತು ವಲಯಗಳನ್ನು ತಲುಪುವ ಯೋಜನೆ ರೂಪಿಸಿದೆ. ಮಿಷನ್–150 ತಲುಪಲು ಎಲ್ಲ ರೀತಿಯ ಚತುರೋಪಾಯಗಳನ್ನು ಬಳಕೆ ಮಾಡುತ್ತಿದೆ. ಇತ್ತೀಚೆಗೆ ದೇವನಹಳ್ಳಿ ಬಳಿಯ ರೆಸಾರ್ಟ್ ಒಂದರಲ್ಲಿ ರಾಜ್ಯದ ಪ್ರಮುಖ ನಾಯಕರ ಸಭೆ ಕರೆದಿದ್ದು ಚುನಾವಣೆ ತಯಾರಿ ಬಗ್ಗೆ ವಿಸ್ತೃತ ಚರ್ಚೆ ನಡೆಸಲಾಗಿದೆ. ಕಮಲ ನಾಯಕರು ಹೆಚ್ಚಾಗಿ ಮೀಡಿಯಾಗಳ ಮುಂದೆ ಕಾಣಿಸಿಕೊಳ್ಳದೆ ಒಗ್ಗಟ್ಟು ಪ್ರದರ್ಶಿಸುತ್ತಿದ್ದಾರೆ. ಈಗಾಗಲೆ ವಿವಿಧ ಪ್ರಕೋಷ್ಠಗಳ ಸಭೆಗಳನ್ನು ನಡೆಸಿದ್ದು ರಾಜ್ಯದ ಆರು ಸ್ಥಳಗಳಿಂದ ಜಾಥಾಗಳನ್ನು ಹೊರಡಿಸಲು ನಿರ್ಧರಿಸಲಾಗಿದೆ. ಕಿತ್ತೂರಿನ ರಾಣಿ ಚನ್ನಮ್ಮ, ಒನಕೆ ಓಬವ್ವ, ಕರಾವಳಿಯ ಅಬ್ಬಕ್ಕ ಹೀಗೆ ವಿವಿಧ ಹೆಸರುಗಳನ್ನು ಇಡಲಾಗಿದೆ. ಇದು ಆಯಾ ಸಮುದಾಯದ ಜನರನ್ನು ಸೆಳೆಯುವ ತಂತ್ರವಾಗಿದೆ. ಮುಖ್ಯಮಂತ್ರಿ ಮತ್ತು ಬಿಜೆಪಿ ರಾಜ್ಯಾಧ್ಯಕ್ಷರು ಪ್ರತಿದಿನ ಒಂದು ಜಿಲ್ಲೆಗೆ ಭೇಟಿ ನೀಡಬೇಕೆಂದು ಪ್ಲಾನ್ ಮಾಡಲಾಗಿದೆ.

ಬೆಂಗಳೂರು ಮತ್ತು ಮೈಸೂರು ವಲಯಕ್ಕ ಲಗ್ಗೆ ಇಡುವುದು ಈ ಚುನಾವಣೆಯಲ್ಲಿ ಬಿಜೆಪಿಯ ಪ್ರಮುಖ ಕಾರ್ಯತಂತ್ರವಾಗಿದೆ. ಈ ಎರಡೂ ವಲಯದಲ್ಲಿ ಜೆಡಿಎಸ್ ಮತ್ತು ಕಾಂಗ್ರೆಸ್ ಬಲಿಷ್ಠವಾಗಿದ್ದು ಈ ಎರಡೂ ಪಕ್ಷಗಳ ಬುಡವನ್ನು ಅಲ್ಲಾಡಿಸಬೇಕೆಂಬ ಬಲವಾದ ಗುರಿ ಹೊಂದಿದೆ.

ಈ ಹಿನ್ನೆಲೆಯಲ್ಲಿ ಒಕ್ಕಲಿಗ ಮತಗಳ ಮೇಲೆ ಹಿಡಿತ ಹೊಂದಿರುವ ಹೆಚ್.ಡಿ.ಕುಮಾರಸ್ವಾಮಿ ಮತ್ತು ಡಿ.ಕೆ.ಶಿವಕುಮಾರ್ ಬಗ್ಗುಬಡಿದರೆ ಕರ್ನಾಟಕ ಪಕ್ಷದ ಭದ್ರ ಬುನಾದಿಯಾಗಲಿದೆ ಎಂಬ ಹಂಚಿಕೆ ಪಕ್ಷದ್ದು. ಇದಕ್ಕೆ ಪೂರಕವೆಂಬಂತೆ ಮುಖ್ಯಮಂತ್ರಿ ತಾನಾಗಬೇಕು ಒಕ್ಕಲಿಗರ ಬೆಂಬಲ ಬೇಕೆಂದು ಡಿಕೆಶಿ ಮತ್ತು ಹೆಚ್‌ಡಿಕೆ ಬಹಿರಂಗ ವಾಕ್ಸಮರದಲ್ಲಿ ನಿರತರಾಗಿರುವುದು ಕಮಲ ಪಕ್ಷ ಮಧ್ಯಪ್ರವೇಶಕ್ಕೆ ಅನುಕೂಲವಾದರೂ ಆಗಬಹುದು. ಆ ಪಕ್ಷ ಸಹ ಇದಕ್ಕಾಗಿ ಹಲವಾರು ಸ್ಟ್ರಾಟಜಿಗಳನ್ನು ರೂಪಿಸುವಲ್ಲಿ ಹಿಂದೆ ಬಿದ್ದಿಲ್ಲ. ಮಂಡ್ಯ, ಮೈಸೂರು, ರಾಮನಗರ ತುಮಕೂರು ಮತ್ತಿತರ ಕಡೆಗಳಲ್ಲಿ ಒಕ್ಕಲಿಗ ನಾಯಕರನ್ನು ಗುರುತಿಸಿ ಸೆಳೆಯುವ ಕಾಯಕದಲ್ಲಿ ತೊಡಗಿದೆ.

ದಕ್ಷಿಣ ಭಾರತದಲ್ಲಿ ಬಿಜೆಪಿ ಹೆಬ್ಬಾಗಿಲು ಕರ್ನಾಟಕ. ಇದನ್ನು ಶತಾಯ ಗತಾಯ ಹಾಗೇ ಉಳಿಸಿಕೊಳ್ಳಲು ಹೆಣಗಾಡುತ್ತಿದೆ. ಹೀಗಾಗಿ ಎಸ್‌ಸಿ, ಎಸ್‌ಟಿ ಮತ್ತು ಓಬಿಸಿಗಳನ್ನು ತಮ್ಮ ಪಕ್ಷದ ಪ್ರಮುಖ ಬೆಂಬಲಿಗರು ಮತ್ತು ಮತಬ್ಯಾಂಕ್ ಮಾಡಿಕೊಳ್ಳಬೇಕೆಂಬುದು ಬಿಜೆಪಿಯ ಹಳೆಯ ತಂತ್ರ. ಉತ್ತರ ಭಾರತದಲ್ಲಿ ಈ ಸ್ಟ್ರಾಟಜಿಯಲ್ಲಿ ಬಹುತೇಕ ಯಶಸ್ವಿಯಾಗಿದ್ದು ಕರ್ನಾಟಕದಲ್ಲಿ ಈಗ ರಂಗಕ್ಕಿಳಿದಿದೆ. ಈ ಹಿನ್ನೆಯಲ್ಲಿ ಚಿತ್ರದುರ್ಗದಲ್ಲಿ ಮಾದಾರ ಚನ್ನಯ್ಯ ಮಠದಲ್ಲಿ ಎಸ್‌ಸಿ, ಎಸ್‌ಟಿ ಮತ್ತು ಓಬಿಸಿ ಸ್ವಾಮೀಜಿಗಳ ಸಭೆಯನ್ನು ಆರ್‌ಎಸ್‌ಎಸ್ ಸರಸಂಘಚಾಲಕ ಮೋಹನ್ ಭಾಗವತ್ ಇತ್ತೀಚೆಗೆ ಕರೆದಿದ್ದರು. ಹಿಂದೂ ಧರ್ಮವನ್ನು ಬೆಳೆಸುವುದು ಎಂದು ಮೇಲ್ನೋಟಕ್ಕೆ ಹೇಳಿದರೂ ಈ ಚುನಾವಣೆಯಲ್ಲಿ ಬಿಜೆಪಿಯನ್ನು ಮತ್ತೆ ಅಧಿಕಾರಕ್ಕೆ ತರುವುದು ಇದರ ಪ್ರಮುಖ ಗುರಿಯಾಗಿತ್ತು ಎಂಬುದು ಗುಟ್ಟಾಗಿ ಉಳಿದಿಲ್ಲ.

ಆದರೆ ಈ ಸ್ಟ್ರಾಟಜಿಗಳೆಲ್ಲ ವರ್ಕ್‌ಔಟ್ ಆಗುತ್ತಾ ಎನ್ನುವುದು ಪ್ರಶ್ನೆ. ರಾಜ್ಯದಲ್ಲಿ ನಾಯಕ ಸಮುದಾಯ ಗಣನೀಯ ಪ್ರಮಾಣದಲ್ಲಿದೆ. ಈ ಹಿಂದೆ ಸಮುದಾಯಕ್ಕೆ ಉಪಮುಖ್ಯಮಂತ್ರಿ ಸ್ಥಾನ ನೀಡುವುದಾಗಿ ಮತ್ತು ಮೀಸಲಾತಿ ಪ್ರಮಾಣ ಈಗಿರುವ ಶೇ.3ರಿಂದ ಶೇ.7ಕ್ಕೆ ಏರಿಸುವುದಾಗಿ ಭರವಸೆ ನೀಡಿತ್ತು. ಎರಡೂ ಭರವಸೆಗಳು ಈಡೇರಿಲ್ಲ. ರಾಜನಹಳ್ಳಿ ಶ್ರೀಗಳು ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನ ವನದಲ್ಲಿ ಐದೂವರೆ ತಿಂಗಳಿನಿಂದ ಸತತವಾಗಿ ಧರಣಿ ನಡೆಸುತ್ತಿದ್ದಾರೆ. ಮೀಸಲಾತಿ ಹೆಚ್ಚಿಸುವುದಾಗಿ ಭರವಸೆ ಕೊಡುತ್ತಿದ್ದಾರೆಯೇ ವಿನಃ ಕಾರ್ಯರೂಪಕ್ಕೆ ಬಂದಿಲ್ಲ. ಈ ಚುನಾವಣೆಯಲ್ಲಿ ವಾಲ್ಮೀಕಿ ಸಮುದಾಯ ಅವರೊಂದಿಗೆ ನಿಲ್ಲುವುದೇ ಎಂಬುದು ಪ್ರಶ್ನೆ.

ಈಗಿನ ಸರ್ಕಾರದಲ್ಲಿ ವ್ಯಾಪಕ ಭ್ರಷ್ಟಾಚಾರ. ಶೇ.40 ಕಮೀಷನ್ ಜಗಜ್ಜಾಹೀರಾಗಿದ್ದು, ಕಂಟ್ರಾಕ್ಟರ್ ಸಂತೋಷ್ ಆತ್ಮಹತ್ಯೆ, ರೋಹಿತ್ ಚಕ್ರತೀರ್ಥ ಸಮಿತಿ ಪಠ್ಯಗಳನ್ನು ತಿರುಚಿದ್ದು. ಇದರಿಂದ ಇಡೀ ಸಮುದಾಯಗಳು ಪ್ರತಿಭಟನೆಗೆ ಇಳಿದಿದ್ದು. ಜೊತೆಗೆ ಕೇಂದ್ರ ಸರ್ಕಾರ ಹಲವಾರು ಜನವಿರೋಧಿ ನೀತಿಗಳು ಅಂದರೆ ನಿರುದ್ಯೋಗ, ಅಗ್ನಿಪಥ್, ಹಣದುಬ್ಬರ, ಅಡುಗೆ ಅನಿಲ ಮತ್ತು ಇಂಧನ ದರಗಳ ಸತತ ಏರಿಕೆ. ಇವೆಲ್ಲ ರಾಜ್ಯ ವಿಧಾನಸಭೆ ಚುನಾವಣೆಯಲ್ಲಿ ಬಿಜೆಪಿಗೆ ತಿರುಗುಬಾಣ ಆಗುವುದಿಲ್ಲ ಎಂದು ಹೇಳಲಾಗದು. ಹೀಗಾಗಿ ಈ ಚುನಾವಣೆ ಬಿಜೆಪಿ ಎರಡು ಅಲುಗಿನ ಕತ್ತಿಯೇ ಸರಿ.

ಈ ನಡುವೆ ಕಾಂಗ್ರೆಸ್‌ನಲ್ಲಿನ ಮುಖಂಡರು ತಮ್ಮಿಂತಾವೆ ಕಾಲು ಕೆರೆದು ಜಗಳಕ್ಕೆ ನಿಂತಿದ್ದಾರೆ. ಕೂಸು ಹುಟ್ಟುವ ಮುನ್ನವೇ ಕುಲಾವಿ ಎಂಬ ಗಾದೆ ಮಾತಿನಂತೆ ನಾವು ಇಂದೇ ಅಧಿಕಾರಕ್ಕೆ ಬಂದಿದ್ದೇವೆ ಎಂಬಂತೆ ವರ್ತಿಸುತ್ತಿದ್ದಾರೆ. ಕಾಂಗ್ರೆಸ್ ಮತ್ತು ಜೆಡಿಎಸ್ ಸಹ ಜಾತಿ ರಾಜಕಾರದಲ್ಲೇ ಮುಳುಗಿದ್ದಾರೆ. ಕೆಪಿಸಿಸಿ ಅಧ್ಯಕ್ಷರಾಗಿರುವ ಡಿಕೆಸಿ ಇತ್ತೀಚೆಗೆ ರಾಮನಗರದಲ್ಲಿ ಮಾತನಾಡಿ ಎಸ್.ಎಂ.ಕೃಷ್ಣ ನಂತರ ಒಕ್ಕಲಿಗರಿಗೆ ಈ ಅವಕಾಶ ಸಿಕ್ಕಿದೆ. ನಾನು ಮುಖ್ಯಮಂತ್ರಿ ಆಗಲು ಒಕ್ಕಲಿಗ ಸಮುದಾಯ ಬೆಂಬಲ ನೀಡಬೇಕೆಂದು ಬಹಿರಂಗವಾಗಿಯೇ ಕೋರಿದ್ದಾರೆ. ಇದು ಕಾಂಗ್ರೆಸ್ ವಲಯದಲ್ಲೇ ವ್ಯಾಪಕ ಟೀಕೆಗೆ ಗುರಿಯಾಯಿತು. ಚಾಮರಾಜಪೇಟೆ ಶಾಸಕ ಜಮೀರ್ ಅಹಮದ್ ಜಾತಿ ಆಧಾರದಲ್ಲಿ ಸಿಎಂ ಹುದ್ದೇ ಕೇಳಬಾರದು ಎಂದು ಡಿಕೆಶಿಗೆ ಟಾಂಗ್ ನೀಡಿದರು. ನನ್ನ ಸಮುದಾಯ ದೊಡ್ಡ ಸಂಖ್ಯೆಯಲ್ಲಿದ್ದಾರೆ, ಹಾಗಂತ ಸಿಎಂ ಮಾಡಿ ಎಂದು ಕೇಳಲಾಗುತ್ತದೆಯೇ ಎಂದು ಪ್ರಶ್ನಿಸಿದ್ದಾರೆ. ಕಾಂಗ್ರೆಸ್‌ನಲ್ಲಿರುವ ಹಲವಾರು ಒಬಿಸಿ ಸಮುದಾಯದವರು ಮತ್ತೆ ಸಿದ್ದರಾಮಯ್ಯ ಪರ ಬ್ಯಾಟ್ ಬೀಸಿದ್ದಾರೆ. ಈ ನಡುವೆ ದಾವಣಗೆರೆಯಲ್ಲಿ ಸಿದ್ದರಾಮೋತ್ಸವ ನಡೆಯುತ್ತಿರುವುದು ಡಿಕೆಶಿಗೆ ಇರುಸು ಮುರುಸು ಉಂಟುಮಾಡಿದೆ. ಈ ಉತ್ಸವ ಕುರಿತಂತೆ ಪ್ರತಿಕ್ರಿಯಿಸಿದ ಡಿಕೆಸಿ ಇದು ವ್ಯಕ್ತಿಪೂಜೆ ಆಗಬಾರದು ಪಕ್ಷ ಪೂಜೆ ಆಗಬೇಕೆಂದು ಖಾರವಾಗಿಯೇ ಹೇಳಿದ್ದಾರೆ. ಈ ಎಲ್ಲ ಬೆಳವಣಿಗೆಗಳು ಕಾಂಗ್ರೆಸ್ ಪಕ್ಷದಲ್ಲಿ ಬಣರಾಜಕೀಯವನ್ನು ಇನ್ನಷ್ಟು ತೀವ್ರಗೊಳಿಸುವ ಸೂಚನೆ ನೀಡಿವೆ. ಡಿಕೆಶಿ ಮತ್ತು ಸಿದ್ದು ನಡುವಿನ ಶತೃತ್ವ ಬೂದಿ ಮುಚ್ಚಿದ ಕೆಂಡದಂತಿದೆ. ಈ ಬೆಳವಣಿಗೆ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದ ಮುನ್ನಡೆಗೆ ಖಂಡಿತ ಅಡ್ಡಿಯಾಗಲಿದೆ.

ಬಿಜೆಪಿಗೆ ಹೋಲಿಸಿದರೆ ಕಾಂಗ್ರೆಸ್‌ನ ಚುನಾವಣಾ ತಯಾರಿ ಏನೇನೂ ಇಲ್ಲ. ಜೆಡಿಎಸ್ ಮತ್ತು ಕಾಂಗ್ರೆಸ್ ಇಬ್ಬರೂ ಮೇಕೆದಾಟು ವಿಷಯ ಮುಂದಿಟ್ಟುಕೊಂಡು ಹೋರಾಟ ಮಾಡಿದರು. ಪತ್ರಿಕೆಗಳಲ್ಲಿ ಮೂರು ಪಕ್ಷಗಳೂ ಬಹಿರಂಗ ಜಾಹೀರಾತುಗಳನ್ನು ನೀಡಿದರು. ಅಷ್ಟು ಬಿಟ್ಟರೆ ಕಾಂಗ್ರೆಸ್ ಇದುವರೆಗೂ ಯಾವುದೇ ತಯಾರಿ ನಡೆಸಿದಂತಿಲ್ಲ.

ಬಿಜೆಪಿ ಕೇಂದ್ರ ಮತ್ತು ರಾಜ್ಯ ಸರ್ಕಾರದ ವೈಫಲ್ಯಗಳ ಹಿನ್ನೆಲೆಯಲ್ಲಿ ಮುಂಬರುವ ಚುನಾವಣೆಯ ಹೆಚ್ಚಿನ ಲಾಭ ಪಡೆಯುವ ಸಾಧ್ಯತೆಗಳು ಇರುವುದು ಕಾಂಗ್ರೆಸ್‌ಗೆ ಆದರೆ ಆ ಪಕ್ಷದ ರಾಜ್ಯ ನಾಯಕರು ಇದುವರೆಗೂ ಯಾವುದೇ ಪ್ರಯತ್ನಗಳನ್ನು ನಡೆಸಿಲ್ಲ. ಬಿಜೆಪಿ ಸರ್ಕಾರ ಶೇ.40 ಕಮೀಷನ್, ಈಶ್ವರಪ್ಪ ಬಿ ರಿಪೋರ್ಟ್, ಗುತ್ತಿಗೆದಾರ ಸಂತೋಷ್ ಆತ್ಮಹತ್ಯೆ, ವರ್ಗಾವಣೆಗಳಲ್ಲಿ ವ್ಯಾಪಕ ಭಷ್ಟಾಚಾರ, ಬೆಲೆ ಏರಿಕೆ, ಹಣದುಬ್ಬರ, ನಿರುದ್ಯೋಗ, ಆಹಾರ ಉತ್ಪನ್ನಗಳಿಗೆ ಜಿಎಸ್ಟಿ, ಇಂಧನ ದರಗಳ ಏರಿಕೆ. ಹೀಗೆ ಹತ್ತು ಹಲವು ವೈಫಲ್ಯಗಳಿವೆ. ಕಾಂಗ್ರೆಸ್ ತನ್ನ ಬಣರಾಜಕೀಯ ಬಿಟ್ಟು ಬೀದಿಗಿಳಿದರೆ ಈ ಅವಕಾಶವನ್ನು ತನ್ನದಾಗಿಸಿ ಕೊಳ್ಳಬಹುದು. ಇದೇ ಸಂದರ್ಭದಲ್ಲಿ ಬಿಜೆಪಿ ಹಳೆ ಮೈಸೂರು ಪ್ರಾಂತ್ಯವನ್ನು ಪ್ರವೇಶಿಸಿ ಇನ್ನಿಲ್ಲದ ಕಾರ್ಯತಂತ್ರಗಳನ್ನು ರೂಪಿಸುತ್ತಿದೆ ಎಂಬ ಎಚ್ಚರಿಕೆಯೂ ಡಿಕೆಶಿ ಮತ್ತು ಹೆಚ್‌ಡಿಕೆಗೆ ಇರಬೇಕು.



ಮಂಗಳೂರಿನಲ್ಲಿ ಜನಶಕ್ತಿ ಉತ್ಸವ ಸ್ವಾಗತ ಸಮಿತಿ ರಚನೆ



ರಾಜ್ಯ ಮಟ್ಟದ ಜನಶಕ್ತಿ ಉತ್ಸವವೊಂದನ್ನು ಮಂಗಳೂರಿನಲ್ಲಿ ಆಯೋಜಿಸುತ್ತಿದ್ದು ಹಿತೈಷಿಗಳನ್ನು ಒಳಗೊಂಡ ಸಭೆಯನ್ನು ಜುಲೈ 19, 2022 ರಂದು ಮಂಗಳೂರಿನ ವಿಕಾಸ ಕಚೇರಿಯಲ್ಲಿ ನಡೆಯಿತು. ಉತ್ಸವ ಸಿದ್ಧತೆಗಾಗಿ ಸ್ವಾಗತ ಸಮಿತಿಯನ್ನು ರಚಿಸಬೇಕೆಂದು ಸಭೆ ಅಭಿಪ್ರಾಯಪಟ್ಟ ಮೇರೆಗೆ ಸ್ವಾಗತ ಸಮಿತಿಯನ್ನು ರಚಿಸಲಾಯಿತು.

ಸ್ವಾಗತ ಸಮಿತಿಯ ಗೌರವಾಧ್ಯಕ್ಷರಾಗಿ ಮಂಗಳೂರಿನ ನಾರಾಯಣ ಗುರು ಕಾಲೇಜಿನ ಪ್ರಾಂಶುಪಾಲರಾದ ಡಾ.ವಸಂತ ಕುಮಾರ್ ಅವರನ್ನೂ, ಕಾರ್ಯಾಧ್ಯಕ್ಷರಾಗಿ ಸಮುದಾಯ ಸಂಘಟನೆಯ ವಾಸುದೇವ ಉಚ್ಚಿಲ ಅವರನ್ನೂ, ಪ್ರಕಾರ್ಯದರ್ಶಿಯಾಗಿ ಸಮುದಾಯದ ಮನೋಜ್ ವಾಮಂಜೂರು ಅವರನ್ನೂ, ಖಜಾಂಚಿಯಾಗಿ ರೈತ ಸಂಘದ ಕೃಷ್ಣಪ್ಪ ಸಾಲಿಯಾನ್ ಅವರನ್ನೂ ಆಯ್ಕೆ ಮಾಡಲಾಯಿತು. ಗೌರವ ಸಲಹೆಗಾರರಾಗಿ ಪ್ರೊ.ನರೇಂದ್ರ ನಾಯಕ್, ಪ್ರೊ. ಹರಿಯಪ್ಪ ಪೇಜಾವರ, ಪ್ರೊ.ಚಂದ್ರ ಪೂಜಾರಿ, ನ್ಯಾಯವಾದಿಗಳಾದ ಯಶವಂತ ಮರೋಳಿ, ರಾಮಚಂದ್ರ ಬಬ್ಬುಕಟ್ಟೆ, ನಿವೃತ್ತ ಬ್ಯಾಂಕ್ ಅಧಿಕಾರಿಗಳಾದ ಕೆ.ರಾಘವ, ಶ್ಯಾಮಸುಂದರ ರಾವ್, ಪ್ರಭಾಕರ ಕಾಪಿಕಾಡು, ರಮೇಶ್ ಉಳ್ಳಾಲ್, ನಿವೃತ್ತ ಅಧಿಕಾರಿ ಸಂಜೀವ ಬಳ್ಕೂರ್ ಇನ್ನೂ ಕೆಲವರನ್ನು ಆಯ್ಕೆ ಮಾಡಲಾಯಿತು.

ಬರುವ ಆಗಸ್ಟ್ 21, 2022ರ ಭಾನುವಾರ ಮಂಗಳೂರಿನ ಸಭಾಂಗಣವೊಂದರಲ್ಲಿ ನಡೆಯುವ ಉತ್ಸವವನ್ನು ರಾಷ್ಟ್ರದ ಖ್ಯಾತ ಮಾಧ್ಯಮಕರ್ತರೊಬ್ಬರು ಉದ್ಘಾಟಿಸಲಿದ್ದಾರೆ. ಅಪರಾಹ್ನ ಮಾಧ್ಯಮ ಸಂಬಂಧಿಸಿ ಕಾರ್ಯಾಗಾರವೂ ನಡೆಯಲಿದೆ. ದೇಶದ ಸ್ವಾತಂತ್ರ್ಯದ ಅಮೃತೋತ್ಸವ ವರ್ಷದ ಹಿನ್ನೆಲೆಯಲ್ಲಿ ಈ ಜನಶಕ್ತಿ ಉತ್ಸವವನ್ನು ಹಮ್ಮಿಕೊಳ್ಳಲಾಗಿದೆ ಎಂದು ಪ್ರಚಾರ ಪಡಿಸಲಾಗುತ್ತದೆ. ಈ ಉತ್ಸವವನ್ನು ಅತ್ಯಂತ ಯಶಸ್ವಿಗೊಳಿಸಲು ಸ್ವಾಗತ ಸಮಿತಿಗೆ ಆಯ್ಕೆಯಾದ ಗಣ್ಯರು ಭಾರೀ ಉತ್ಸಾಹವನ್ನು ವ್ಯಕ್ತಪಡಿಸಿದ್ದಾರೆ.

ದ.ಕ. ಮತ್ತು ಉಡುಪಿ ಜಿಲ್ಲಾ ಜನವಾದಿ ಮಹಿಳಾ ಸಮ್ಮೇಳನ



ದ.ಕ. ಮತ್ತು ಉಡುಪಿ ಜಿಲ್ಲೆಗಳ ಜನವಾದಿ ಮಹಿಳಾ ಸಮ್ಮೇಳನಗಳು ಜುಲೈ 17 ರಂದು ನಡೆದು ಹೊಸ ಜಿಲ್ಲಾ ಸಮಿತಿಗಳ ರಚನೆಯಾದವು.

ದ.ಕ.ಜಿಲ್ಲಾ ಮಟ್ಟದ ಜೆಎಂಎಸ್ ಸಮ್ಮೇಳನ ಮಂಗಳೂರಿನ ಬಜಾಲ್‌ನಲ್ಲಿ ನಡೆದಿದ್ದು, ಜೆಎಂಎಸ್ ರಾಜ್ಯ ಅಧ್ಯಕ್ಷೆ ದೇವಿಯವರು ಸಮ್ಮೇಳನದ ಉದ್ಘಾಟನೆ ನಡೆಸಿದರು. ದೇಶವ್ಯಾಪಿ ಮಹಿಳೆಯರ ಮೇಲಿನ ದೌರ್ಜನ್ಯಗಳು ಹೆಚ್ಚುತ್ತಲಿದೆ. ಮಹಿಳೆಯರಿಗೆ ರಕ್ಷಣೆಯೇ ಇಲ್ಲದ ಪರಿಸ್ಥಿತಿ ನಿರ್ಮಾಣವಾಗಿದೆ. ಸಂವಿಧಾನ ಬದ್ಧವಾದ ಪ್ರಜಾಪ್ರಭುತ್ವ ಹಕ್ಕುಗಳ ಪರ ಅಥವಾ ವಿರುದ್ಧವಾಗಿ ಧ್ವನಿ ಎತ್ತಿದರೆ, ಪ್ರಕರಣ ದಾಖಲಿಸಿ ಜೈಲಿಗಟ್ಟಲಾಗುತ್ತಿದೆ. ಇದು ಅಪಾಯಕಾರಿ ಬೆಳವಣಿಗೆ ಎಂದವರು ಹೇಳಿದರು.

ಸಂಘಟನೆಯ ಜಿಲ್ಲಾಧ್ಯಕ್ಷೆ ಜಯಂತಿ ಶೆಟ್ಟಿ ಅಧ್ಯಕ್ಷತೆ ವಹಿಸಿದ್ದರು. ಸಿಐಟಿಯು ನಾಯಕ ವಸಂತ ಆಚಾರಿ, ರೈತ ಸಂಘದ ನಾಯಕ ಯಾದವ ಶೆಟ್ಟಿ ಸಭೆಯನ್ನುದ್ದೇಶಿಸಿ ಮಾತನಾಡಿದರು. ಸಮ್ಮೇಳನವು ನೂತನ ಜಿಲ್ಲಾ ಸಮಿತಿಯನ್ನು ಆಯ್ಕೆ ಮಾಡಿದ್ದು, ಅಧ್ಯಕ್ಷರಾಗಿ ಜಯಂತಿ ಶೆಟ್ಟಿ, ಪ್ರ.ಕಾರ್ಯದರ್ಶಿಯಾಗಿ ಭಾರತಿ ಬೋಳಾರ್, ಖಜಾಂಚಿಯಾಗಿ ರಾಧಾ ಮೂಡಬಿದರೆ ಆಯ್ಕೆಯಾಗಿರುತ್ತಾರೆ.



ಉಡುಪಿ ಜಿಲ್ಲಾ ಪ್ರಥಮ ಜನವಾದಿ ಮಹಿಳಾ ಸಮ್ಮೇಳನವು ಕುಂದಾಪುರದಲ್ಲಿ ನಡೆದಿದ್ದು, ಸಮ್ಮೇಳನವನ್ನು ರಾಜ್ಯ ಸಂಘಟನೆಯ ಉಪಾಧ್ಯಕ್ಷೆ ಕೆ.ಎಸ್.ಲಕ್ಷ್ಮಿ ಉದ್ಘಾಟಿಸಿ ಮಾತನಾಡಿದರು.

ಬೆಲೆ ಏರಿಕೆ ಮೂಲಕ ಜನತೆಯ ಮೇಲೆ ನಡೆಸುತ್ತಿರುವ ದೌರ್ಜನ್ಯಗಳ ಬಗ್ಗೆ ಜನತೆಯ ದಿಕ್ಕು ತಪ್ಪಿಸಲು, ನಾಡಿನ ಸೌಹಾರ್ದತೆಯ ಮೇಲೆ ದಾಳಿ ನಡೆಸಲಾಗುತ್ತಿದೆ. ಅಭಿವೃದ್ಧಿ ಅಜೆಂಡಾ ಕೈಬಿಟ್ಟು ಕೋಮು ಅಜೆಂಡಾವನ್ನು ತುರುತ್ತಿರುವುದು ಸಂವಿಧಾನ ವಿರೋಧಿಯಾಗಿದೆ. ಕಾರ್ಪರೇಟ್ ಹಾಗೂ ಕೋಮುವಾದ ಪರವಾದ ನೀತಿಗಳನ್ನು ಜಾರಿ ಮಾಡುವ ಮೂಲಕ ಮಹಿಳೆಯರ ಮೇಲಿನ ಸಾಮಾಜಿಕ ಮತ್ತು ಆರ್ಥಿಕ ದೌರ್ಜನ್ಯಗಳನ್ನು ಹೆಚ್ಚು ಮಾಡುತ್ತಿದೆ ಎಂದವರ ಆರೋಪಿಸಿದರು.

ಲೇಖಿಕಿ ಹಾಗೂ ನಿವೃತ್ತ ಪ್ರಾಧ್ಯಾಪಿಕೆ ಡಾ.ರೇಖಾ ಬನ್ನಾಡಿ ಸಮ್ಮೇಳನಕ್ಕೆ ಶುಭ ಕೋರಿ ಮಾತನಾಡಿದರು. ಸಮ್ಮೇಳನವು ಜೆಎಂಎಸ್ ಪ್ರಥಮ ಜಿಲ್ಲಾ ಸಮಿತಿಯನ್ನು ಆಯ್ಕೆ ಮಾಡಿತು. ಅಧ್ಯಕ್ಷರಾಗಿ ಸರೋಜಾ, ಕಾರ್ಯದರ್ಶಿಯಾಗಿ ಶೀಲಾವತಿ ಪಡುಕೋಣೆ, ಖಜಾಂಚಿಯಾಗಿ ಲಲಿತಾ ಅವರು ಆಯ್ಕೆಯಾಗಿರುತ್ತಾರೆ.

ಕಾ। ಗಿರಿಯಪ್ಪ ಉಳ್ಳಾಲ್ ನಿಧನ



ಮಂಗಳೂರಿನ ಬೋಳಾರ ದಲ್ಲಿರುವ ಹಂಚು ಕಾರ್ಮಿಕರ ಸಂಘದ ಕಚೇರಿ ಸಹಾಯಕರಾಗಿ 35 ವರ್ಷಗಳ ಕಾಲ ಕಚೇರಿಯಲ್ಲಿ ಕಾಣಿಸಿಕೊಳ್ಳುತ್ತಿದ್ದ ಸಂಗಾತಿ ಕಾಗಿರಿಯಪ್ಪ ಉಳ್ಳಾಲ್ ಅವರು ಜುಲೈ 19 ರಂದು ರಾತ್ರಿ ವಿಧಿವಶರಾಗಿದ್ದಾರೆ. ಅವರಿಗೆ 81 ವರ್ಷ ವಯಸ್ಸಾಗಿತ್ತು. ವೃದ್ಧಾಪ್ಯದ ಕಾರಣದಿಂದ ಕಳೆದ 8 ವರ್ಷಗಳ ಹಿಂದೆ ಅವರಿಗೆ ನಿವೃತ್ತಿ ನೀಡಲಾಗಿತ್ತು.

ಉಳ್ಳಾಲ ಕೋಡಿಯವರಾದ ಕಾಗಿರಿಯಪ್ಪರವರು ಎಳೆಯ ವಯಸ್ಸಿನಲ್ಲಿ ಮಂಗಳೂರಿನಲ್ಲಿ ಹಂಚಿನ ಕಾರ್ಖಾನೆ ಕಾರ್ಮಿಕರಾಗಿ ದುಡಿಯುತ್ತಲೇ, ಕಾರ್ಮಿಕ ಸಂಘಟನೆಯಲ್ಲೂ, ಸಿಪಿಐ(ಎಂ) ಪಕ್ಷದಲ್ಲೂ ಕ್ರಿಯಾಶೀಲ ನಿಷ್ಠಾವಂತ ಕಾರ್ಯಕರ್ತರಾಗಿ ದುಡಿದರು. ಕಾರ್ಮಿಕ ಹೋರಾಟದಲ್ಲಿ ಭಾಗವಹಿಸಿದ್ದನ್ನು ನೆಪವೊಡ್ಡಿ ಕಾರ್ಖಾನೆ ಮಾಲೀಕರು ಅವರನ್ನು ಕೆಲಸದಿಂದ ವಜಾಗೊಳಿಸಿದರು. ಹಂಚು ಕಾರ್ಮಿಕ ಸಂಘಟನೆಯ ನಾಯಕತ್ವ, ಕಾಗಿರಿಯಪ್ಪರವರನ್ನು ಕಚೇರಿ ಸಹಾಯಕನಾಗಿ ನೇಮಿಸಿತು. ಅಲ್ಲಿಯೂ ಅವರು ಸಂಘಟನೆಯ ಹಾಗೂ ಪಕ್ಷದ ಚಳುವಳಿಗಳಲ್ಲಿ ಸಕ್ರಿಯ ಪಾತ್ರ ವಹಿಸಿದರು.

ಅವರು ಪತ್ನಿಯ ಜೊತೆ ಉಳ್ಳಾಲ ಕೋಡಿಯ ಮನೆಯಲ್ಲಿ ವಾಸವಾಗಿದ್ದರು. ಈಚೆಗೆ ತೀವ್ರ ಅನಾರೋಗ್ಯದಿಂದ ಬಳಲಿದರು. ಜುಲೈ 20 ರಂದು ಗಿರಿಯಪ್ಪಣ್ಣನ ಅಂತ್ಯಕ್ರಿಯೆ ವೇಳೆ ಪಕ್ಷದ ಉಳ್ಳಾಲ ವಲಯ ಸಮಿತಿ ಕೆಂಪು ಬಾವುಟ ಹೊದಿಸಿ ಅವರನ್ನು ಗೌರವಿಸಿತು. ಪಕ್ಷದ ಜಿಲ್ಲಾ ಮುಖಂಡರಾದ ಕೆ.ಯಾದವ ಶೆಟ್ಟಿ, ವಸಂತ ಆಚಾರಿ ಹಾಗೂ ಹಲವಾರು ಪಕ್ಷದ ಹಿತೈಷಿಗಳು ಅವರಿಗೆ ಅಂತಿಮ ಗೌರವ ಸಲ್ಲಿಸಿದರು.

ಮನೆ ಕೆಲಸಗಾರರ ಸಂಘ ರಾಜಾಜಿನಗರ ವಲಯ ಸಮ್ಮೇಳನ



ಬೆಂಗಳೂರು ಜಿಲ್ಲಾ ಮನೆ ಕೆಲಸಗಾರರ ಸಂಘ ರಾಜಾಜಿನಗರ ವಲಯದ 2ನೇ ಸಮ್ಮೇಳನವು ಜುಲೈ 24, 2022 ರಂದು ಬಸವೇಶ್ವರನಗರದ ಧಾರಿಣಿ ಸಮಾಜದಲ್ಲಿ ನಡೆಯಿತು.

ಕಾಂ. ಎನ್. ರಾಜಣ್ಣರವವರು ಅಧ್ಯಕ್ಷತೆ ವಹಿಸಿದರು. ಜಿಲ್ಲಾ ಸಮಿತಿ ಸದಸ್ಯರಾದ ಕಾಂ. ಹುಳ್ಳಿ ಉಮೇಶ ಮತ್ತು ಕಾಂ. ಮಂಗಳ ಕುಮಾರಿ ಇವರ ಉಪಸ್ಥಿತಿಯಲ್ಲಿ ಕಾಂ.ಶಾರದ ಕೆ.ಎಸ್., ಕಾಂ.ಲಲಿತಾ ಶೆಣೈ, ಕಾಂ.ಗೀತಾ ರವಿಕುಮಾರ್, ಕಾಂ. ಸಿ. ಚಂದ್ರಶೇಖರ ಕಾರ್ಯದರ್ಶಿ, ರಾಜಾಜಿನಗರ ವಲಯ ಮನೆ ಕೆಲಸಗಾರರ ಸಂಘ ಹಾಗೂ ಕಾಂ. ಚಂದ್ರಶೇಖರ ಡಿ. ಕಾರ್ಯದರ್ಶಿ, ರಾಜಾಜಿನಗರ ವಲಯ ಸಮಿತಿ ಸಿಪಿಐ(ಎಂ) ಹಾಜರಿದ್ದರು. ಸಭೆಯಲ್ಲಿ ಸುಮಾರು 140 ಜನ ಮನೆಕೆಲಸಗಾರರ ಸಂಘದ ಪ್ರತಿನಿಧಿಗಳು ಹಾಗೂ ಸದಸ್ಯರು ಭಾಗವಹಿಸಿದ್ದರು.



ಸಮ್ಮೇಳನದಲ್ಲಿ ನೂತನ ಪದಾಧಿಕಾರಿಗಳಾಗಿ ಕಾಂ.ಶಾರದ ಕೆ.ಎಸ್. ಅಧ್ಯಕ್ಷರಾಗಿ, ಕಾಂ. ಗೀತಾರವಿಕುಮಾರ್ ಮತ್ತು ಕಾಂ.ಸಿ.ಚಂದ್ರಶೇಖರ ಉಪಾಧ್ಯಕ್ಷರಾಗಿ ಕಾಂ.ಕಮಲಾಕ್ಷ ಕಾರ್ಯದರ್ಶಿಯಾಗಿ ಕಾಂ.ಗಂಗಲಕ್ಷ್ಮಮ್ಮ ಮತ್ತು ಕಾಂ.ವಸಂತ ಉಪ ಕಾರ್ಯದರ್ಶಿಗಳಾಗಿ ಮತ್ತು ಕಾಂ.ಎನ್. ರಾಜಣ್ಣರವರು ಖಜಾಂಚಿಯಾಗಿ ಆಯ್ಕೆಯಾಗಿದ್ದಾರೆ. 15 ಜನ ಬೇರೆ ಬೇರೆ ಪ್ರದೇಶಗಳಿಂದ ಸಮಿತಿ ಸದಸ್ಯರಾಗಿ ಆಯ್ಕೆಯಾಗಿದ್ದಾರೆ.

ಜಿ. ರಾಜಶೇಖರ ನಿಧನಕ್ಕೆ ಎಡ ಸಂಘಟನೆಗಳ ತೀವ್ರ ಸಂತಾಪ

ಖ್ಯಾತ ವಿಮರ್ಶಕ, ಚಿಂತಕ, ಬರಹಗಾರ ಜಿ ರಾಜಶೇಖರ ನಿಧನಕ್ಕೆ ಮಂಗಳೂರಿನ ಎಡ ಹಾಗು ಜನಪರ ಪಕ್ಷಗಳು ಮತ್ತು ಸಂಘಟನೆಗಳು ತೀವ್ರ ಸಂತಾಪ ವ್ಯಕ್ತಪಡಿಸಿವೆ.

ಕೋಮುವಾದ, ಫ್ಯಾಸಿಸಂ ವಿರುದ್ದದ ದೃಢ ಧ್ವನಿಯಾಗಿದ್ದ ರಾಜಶೇಖರರವರು ಒಂದೆರಡು ತಲೆಮಾರನ್ನು ಪ್ರಭಾವಿಸಿದ ಮಹಾನ್ ಚಿಂತಕ ಎಂದು ಸಂತಾಪ ಸಂದೇಶದಲ್ಲಿ ಬಣ್ಣಿಸಿದೆ. ಜಿ. ರಾಜಶೇಖರರವರು ದಣಿವಿಲ್ಲದೆ ದುಡಿದ ಕೋಮುವಾದ ವಿರೋಧಿ ದಾರಿಯಲ್ಲಿ ರಾಜಿಯಿಲ್ಲದೆ ಸಾಗುವುದು ಅವರಿಗೆ ಸಲ್ಲಿಸುವ ಶ್ರದ್ಧಾಂಜಲಿ ಎಂದು ಸಿಪಿಐಎಂ ದ.ಕ. ಜಿಲ್ಲಾ ಕಾರ್ಯದರ್ಶಿ ಯಾದವ ಶೆಟ್ಟಿ, ಸಿಪಿಐ ಜಿಲ್ಲಾ ಕಾರ್ಯದರ್ಶಿ ವಿ ಕುಕ್ಯಾನ್, ಹಿರಿಯ ವಿಚಾರವಾದಿ ನರೇಂದ್ರ ನಾಯಕ್, ಡಿವೈಎಫ್ಐ ರಾಜ್ಯಾಧ್ಯಕ್ಷ ಮುನೀರ್ ಕಾಟಿಪಳ್ಳ, ಸಮುದಾಯದ ವಾಸುದೇವ ಉಚ್ಚಿಲ, ಮನೋಜ್ ವಾಮಂಜೂರು, ಸಿಐಟಿಯು ಜಿಲ್ಲಾ ನಾಯಕರಾದ ಜೆ.ಬಾಲಕೃಷ್ಣ ಶೆಟ್ಟಿ, ಸುನಿಲ್ ಕುಮಾರ್ ಬಜಾಲ್, ವಸಂತ ಆಚಾರಿ, ಯೋಗೀಶ್ ಜಪ್ಪಿನಮೊಗರು, ದಲಿತ ಮುಖಂಡ ಎಂ ದೇವದಾಸ್, ಪ್ರಗತಿಪರ ಚಿಂತಕರ ವೇದಿಕೆಯ ಡಾ. ಕೃಷ್ಣಪ್ಪ ಕೊಂಚಾಡಿ, ಡಿವೈಎಫ್ಐ ನಾಯಕರಾದ ಬಿ.ಕೆ. ಇಮ್ತಿಯಾಜ್, ಸಂತೋಷ್ ಬಜಾಲ್, ನವೀನ್ ಕೊಂಚಾಡಿ, ಎಸ್ಎಫ್ಐ ನಾಯಕರಾದ ವಿನೀತ್ ಎಂ. ದೇವಾಡಿಗ, ರೇವಂತ್ ಕದ್ರಿಯವರು ಜಂಟಿ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಜನರ ಜೀವನೋಪಾಯಗಳ ಮೇಲೆ ಮತ್ತಷ್ಟು ಏಟುಗಳು – ಸಿಪಿಐ(ಎಂ) ಪೊಲಿಟ್‌ಬ್ಯುರೊ

ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷ (ಸಿಪಿಐ–ಎಂ) ಪೊಲಿಟ್‌ಬ್ಯೂರೊ ಜುಲೈ 16ರಂದು ಸಭೆ ಸೇರಿ ಚರ್ಚೆ ನಡೆಸಿ ಈ ಹೇಳಿಕೆ ಬಿಡುಗಡೆ ಮಾಡಿದ್ದು, 2020–22ರ ಅವಧಿಯಲ್ಲಿ ಭಾರತದ ಆರ್ಥಿಕ ಬೆಳವಣಿಗೆ ವಾರ್ಷಿಕ ಕೇವಲ ಶೇ.0.8 ಇರಲಿದೆ ಎಂದು ವಿಶ್ವ ಬ್ಯಾಂಕ್ ವರದಿ ಹೇಳಿದೆ.

ನಿರುದ್ಯೋಗ:

ಜನವರಿ–ಏಪ್ರಿಲ್ 2022ರ ಸಿಎಂ.ಐ.ಇ. ವರದಿಯ ಪ್ರಕಾರ 20–24 ವರ್ಷ ವಯೋಗುಂಪಿನ ನಿರುದ್ಯೋಗಿಗಳ ಸಂಖ್ಯೆ 2 ಕೋಟಿಗೂ ಹೆಚ್ಚು – ಅಂದರೆ 42 ಶೇಕಡಾದಷ್ಟು ಭಾರೀ ಪ್ರಮಾಣದ ನಿರುದ್ಯೋಗ ದರ. 25–29 ವಯೋಮಾನದವರಲ್ಲಿ, ಇದು ಅರವತ್ತು ಲಕ್ಷಕ್ಕಿಂತ ಹೆಚ್ಚಿತ್ತು – ನಿರುದ್ಯೋಗ ದರ ಶೇಕಡಾ 12.72. ಒಟ್ಟಾರೆಯಾಗಿ 20–29 ವಯಸ್ಸಿನ ನಿರುದ್ಯೋಗವು 15 ವರ್ಷಕ್ಕಿಂತ ಮೇಲ್ಪಟ್ಟ ಉದ್ಯೋಗವನ್ನು ಸಕ್ರಿಯವಾಗಿ ಅರಸುತ್ತಿರುವ 3 ಕೋಟಿಗೂ ಹೆಚ್ಚು ನಿರುದ್ಯೋಗಿ ಭಾರತೀಯರಲ್ಲಿ ಸುಮಾರು 80 ಶೇಕಡಾದಷ್ಟು..

ಭಾರತದ ದುಡಿಯುವ ವಯಸ್ಸಿನ ಜನಸಂಖ್ಯೆಯು ಒಟ್ಟು ಜನಸಂಖ್ಯೆಯ ಶೇಕಡಾ 36 ರಷ್ಟಿದೆ. ಈ ಪೈಕಿ ಶೇ 61.2ರಷ್ಟು ಮಂದಿ ಉದ್ಯೋಗ ಹುಡುಕುವುದನ್ನೇ ನಿಲ್ಲಿಸಿದ್ದಾರೆ. ಏಕೆಂದರೆ ಉದ್ಯೋಗಗಳಿಲ್ಲ. ಕಾರ್ಮಿಕರ ಭಾಗವಹಿಸುವಿಕೆ ದರವು 38.8 ಶೇಕಡಾಕ್ಕೆ ಇಳಿದಿದೆ. ಇದು ಸಾರ್ವಕಾಲಿಕ ಕನಿಷ್ಠ ಪ್ರಮಾಣ.

ಬೆಲೆ ಏರಿಕೆಯ ನಾಗಾಲೋಟ:


ವಾರ್ಷಿಕ ಸಗಟು ಬೆಲೆ ಸೂಚ್ಯಂಕ ಮೇ 2022 ರಲ್ಲಿ ಶೇಕಡಾ 15.8 ಕ್ಕೆ ಏರಿದೆ – ಇದು 1998ರ ನಂತರದ ಅತ್ಯಧಿಕ ಮಟ್ಟ. ಆಹಾರದ ಬೆಲೆಗಳು ಶೇಕಡಾ 14.4 ರಷ್ಟು ಏರುತ್ತಿವೆ; ಪ್ರಾಥಮಿಕ ವಸ್ತುಗಳು ಶೇ.19.71, ಇಂಧನ ಮತ್ತು ಶಕ್ತಿ ಶೇ.40.63 ಮತ್ತು ತಯಾರಿಕೆಯ ಉತ್ಪನ್ನಗಳ ಬೆಲೆಗಳು ಶೇ.10.11.ರಷ್ಟು ಏರಿವೆ.

ಈ ಬೆಲೆ ಏರಿಕೆಯು ಮತ್ತಷ್ಟು ಸಂಕಷ್ಟಗಳನ್ನು ಹೇರುತ್ತಿದೆ ಮತ್ತು ಭಾರತೀಯ ಜನರ ಕೊಳ್ಳುವ ಸಾಮರ್ಥ್ಯವನ್ನು ಕುಂಠಿತಗೊಳಿಸುತ್ತಿದೆ. ಆಂತರಿಕ ಬೇಡಿಕೆಯು ಕುಗ್ಗಿ ತಯಾರಿಕಾ ಚಟುವಟಿಕೆಗಳನ್ನು ಕೆಳಕ್ಕೆ ತಳ್ಳುತ್ತಿರುವುದು ಮತ್ತಷ್ಟು ಉದ್ಯೋಗ ನಷ್ಟಕ್ಕೆ ಕಾರಣವಾಗುತ್ತದೆ.

ಅಸಮಾನತೆಯ ಹೊಲಸು ಮಟ್ಟಗಳು:

ಕೋಮುವಾದಿ–ಕಾರ್ಪೊರೇಟ್ ನಂಟು, ಬಂಟ ಬಂಡವಾಳಶಾಹಿ ಮತ್ತು ನಮ್ಮ ರಾಷ್ಟ್ರೀಯ ಸೊತ್ತುಗಳ ಲೂಟಿಯು ಆದಾಯ ಮತ್ತು ಸಂಪತ್ತಿನ ಅಸಮಾನತೆಗಳನ್ನು ಇನ್ನಷ್ಟು ವೇಗವಾಗಿ ಹೆಚ್ಚಿಸಿ ಮತ್ತು ವಿಸ್ತರಿಸಿ ಹೊಲಸು ಮಟ್ಟಕ್ಕೆ ಒಯ್ಯುತ್ತಿವೆ. ಮುಂಬೈ ಸ್ಟಾಕ್ ಎಕ್ಸ್‌ಚೇಂಜ್‌ನಲ್ಲಿ ಪಟ್ಟಿ ಮಾಡಲಾದ ಕಂಪನಿಗಳು 2021–22ರಲ್ಲಿ 9.3 ಲಕ್ಷ ಕೋಟಿಗಳಿಗಿಂತಲೂ ಹೆಚ್ಚು ಸಾಮೂಹಿಕ ಲಾಭಗಳನ್ನು ವರದಿ ಮಾಡಿವೆ– ಹಿಂದಿನ ವರ್ಷಕ್ಕಿಂತ ಶೇಕಡಾ 70 ಕ್ಕಿಂತ ಹೆಚ್ಚು ಮತ್ತು ಮಹಾಸೋಂಕಿನ ಮೊದಲು ಒಂದು ದಶಕದವರೆಗೆ, ಅಂದರೆ 2010–2022 ರ ನಡುವೆ ವಾರ್ಷಿಕವಾಗಿ ಗಳಿಸಿದ ಸರಾಸರಿ ಲಾಭಕ್ಕಿಂತ ಮೂರು ಪಟ್ಟು ಹೆಚ್ಚು.

ಕೇಂದ್ರ ಸರ್ಕಾರವು ತಕ್ಷಣವೇ ಅತಿ ಶ್ರೀಮಂತರ ಮೇಲೆ ತೆರಿಗೆಯನ್ನು ವಿಧಿಸಬೇಕು ಮತ್ತು ಅದರ ಆದಾಯವನ್ನು ನಮ್ಮ ಬಹು ಅಗತ್ಯದ ಮೂಲಸೌಕರ್ಯಗಳನ್ನು ನಿರ್ಮಿಸಲು, ಅರ್ಥ ವ್ಯವಸ್ಥೆಯಲ್ಲಿ ಉದ್ಯೋಗಗಳನ್ನು ಸೃಷ್ಟಿಸಲು ಮತ್ತು ಆಂತರಿಕ ಬೇಡಿಕೆಯನ್ನು ಹೆಚ್ಚಿಸಲು ಸಾರ್ವಜನಿಕ ಹೂಡಿಕೆಗಳನ್ನು ಹೆಚ್ಚಿಸಲಿಕ್ಕೆ ಬಳಸಬೇಕು.




ಮನರೇಗದ ಅಡಿಯಲ್ಲಿ ಕೆಲಸ ಮಾಡಿದವರಿಗೆ ಬಹುಕಾಲದಿಂದ ಬಾಕಿ ಉಳಿದಿರುವ ಕೂಲಿಗಳನ್ನು ನೀಡಲು ಕೇಂದ್ರ ಸರ್ಕಾರ ತಕ್ಷಣ ಹಣವನ್ನು ಬಿಡುಗಡೆ ಮಾಡಬೇಕು. ಮನರೇಗಕ್ಕೆ ಬಜೆಟ್ ಹಂಚಿಕೆಯನ್ನು ಗಣನೀಯವಾಗಿ ಹೆಚ್ಚಿಸಬೇಕು.

ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ (ಮನರೇಗ)

ಈಗಾಗಲೇ ಮನರೇಗದ ಅಡಿಯಲ್ಲಿ ಕೆಲಸ ಮಾಡಿದವರಿಗೆ ಬಹುಕಾಲದಿಂದ ಬಾಕಿ ಉಳಿದಿರುವ ಕೂಲಿಗಳನ್ನು ನೀಡಲು ಕೇಂದ್ರ ಸರ್ಕಾರ ತಕ್ಷಣ ಹಣವನ್ನು ಬಿಡುಗಡೆ ಮಾಡಬೇಕು.

ಮನರೇಗಕ್ಕೆ ಬಜೆಟ್ ಹಂಚಿಕೆಯನ್ನು ಗಣನೀಯವಾಗಿ ಹೆಚ್ಚಿಸಬೇಕು, ಏಕೆಂದರೆ ಇದು ಕೋಟಿಗಟ್ಟಲೆ ಗ್ರಾಮೀಣ ಯುವಕರಿಗೆ ಉದ್ಯೋಗ ಮತ್ತು ಜೀವನೋಪಾಯದ ಏಕೈಕ ಮೂಲವಾಗಿದೆ.

ಕಡ್ಡಾಯ ಆಧಾರ್ ಹಿಂಪಡೆಯಬೇಕು




ಮಕ್ಕಳ ಪೂರಕ ಪೌಷ್ಠಿಕ ಕಾರ್ಯಕ್ರಮಕ್ಕೆ ಆಧಾರ್ ಕಡ್ಡಾಯಗೊಳಿಸಿದ ಆದೇಶವನ್ನು ಕೇಂದ್ರ ಸರ್ಕಾರ ಕೂಡಲೇ ಹಿಂಪಡೆಯಬೇಕು. 2013 ರಲ್ಲಿ ರಾಷ್ಟ್ರೀಯ ಆಹಾರ ಭದ್ರತಾ ಕಾಯಿದೆಯ ಜೊತೆಗೆ ಜಾರಿಗೆ ತರಲಾದ ಆರು ತಿಂಗಳಿಂದ ಆರು ವರ್ಷದೊಳಗಿನ ಲಕ್ಷಗಟ್ಟಲೆ ಮಕ್ಕಳಿಗೆ ನಕಲಿ ಫಲಾನುಭವಿಗಳ ಕಳೆ ತೆಗೆಯುವ ಹೆಸರಿನಲ್ಲಿ ಈ ಕಾನೂನು ಅರ್ಹತೆಯನ್ನು ನಿರಾಕರಿಸಲಾಗುತ್ತದೆ. ಪ್ರಸ್ತುತ, 7.9 ಕೋಟಿ ಮಕ್ಕಳು ಈ ಕಾರ್ಯಕ್ರಮದಿಂದ ಪ್ರಯೋಜನ ಪಡೆಯುತ್ತಾರೆ ಆದರೆ, ಅಧಿಕೃತ ದಾಖಲೆಗಳ ಪ್ರಕಾರ ಐದು ವರ್ಷಕ್ಕಿಂತ ಕಡಿಮೆ ವಯಸ್ಸಿನ 23 ಪ್ರತಿಶತ ಮಕ್ಕಳು ಮಾತ್ರ ಆಧಾರ್ ಕಾರ್ಡ್‌ಗಳನ್ನು ಹೊಂದಿದ್ದಾರೆ. ಭಾರತವು ಇಂದು ವಿಶ್ವದ ಮಕ್ಕಳ ಅಪೌಷ್ಟಿಕತೆಯ ಕೆಟ್ಟ ದಾಖಲೆಗಳನ್ನು ಹೊಂದಿರುವ ದೇಶಗಳಲ್ಲಿ ಒಂದಾಗಿದೆ.

ಪುಟ 15 ಕ್ಕೆ

ಭಾರತದ ಸ್ವಾತಂತ್ರ್ಯದ 75 ವರ್ಷಗಳು


ನಮ್ಮ ಜಾತ್ಯತೀತ ಪ್ರಜಾಸತ್ತಾತ್ಮಕ ಸಾಂವಿಧಾನಿಕ ಗಣರಾಜ್ಯ, ಭಾರತದ ಸಂವಿಧಾನ, ಪ್ರಜಾಪ್ರಭುತ್ವ, ಪ್ರಜಾಪ್ರಭುತ್ವ ಹಕ್ಕುಗಳು ಮತ್ತು ನಾಗರಿಕ ಸ್ವಾತಂತ್ರ್ಯಗಳನ್ನು ರಕ್ಷಿಸಲು ಭಾರತೀಯ ಜನರಿಗೆ ಕರೆ ನೀಡುವ ವ್ಯಾಪಕ ಕಾರ್ಯಕ್ರಮಗಳನ್ನು ಆಯೋಜಿಸುವ ಮೂಲಕ ಆಗಸ್ಟ್ 1–15 ನ್ನು ಆಚರಿಸಲು ಇಡೀ ಪಕ್ಷಕ್ಕೆ ಪೊಲಿಟ್‌ಬ್ಯೂರೋ ಕರೆ ನೀಡಿದೆ.



ಪ್ರಧಾನ ಮಂತ್ರಿಗಳಿಗೆ ಕೇರಳ ಮುಖ್ಯಮಂತ್ರಿಗಳ ಪತ್ರ

ಪ್ರಿಯ ಶ್ರೀ ಮೋದೀಜೀ,

ಜಿಎಸ್‌ಟಿ ಮಂಡಳಿಯ 47ನೇ ಸಭೆ ಅಕ್ಕಿ, ಗೋದಿ, ಹಿಟ್ಟು, ಧಾನ್ಯಗಳು, ಬೇಳೆಕಾಳುಗಳು ಇತ್ಯಾದಿ ಸರಕುಗಳ ಮೇಲೆ ಜಿಎಸ್‌ಟಿ ಹೇರಿಕೆಯ ವಿಧಿ–ವಿಧಾನಗಳನ್ನು ಬದಲಿಸಲು ನಿರ್ಧರಿಸಿದೆ. ಇವು ಆವಶ್ಯಕ ಸರಕುಗಳು, ನಮ್ಮ ದೇಶದಲ್ಲಿ ಸಾಮಾನ್ಯ ವ್ಯಕ್ತಿಯ ಬಳಕೆ ಬಜೆಟಿನ ಒಂದು ಗಮನಾರ್ಹ ಭಾಗವಾಗಿವೆ. ಈ ಮೇಲಿನ ಸರಕುಗಳು "ಪೂರ್ವ ಪ್ಯಾಕೇಜ್ ಮತ್ತು ಲೇಬಲ್" ಆದಾಗ, ಅವುಗಳ ಮೇಲೆ ಜಿಎಸ್‌ಟಿ ವಿಧಿಸಬೇಕಾಗುತ್ತದೆ ಎಂಬುದು ಮಂಡಳಿಯ ನಿರ್ಧಾರ. ಈ ಬದಲಾವಣೆ, ಈಗಾಗಲೇ ಉನ್ನತ ಹಣದುಬ್ಬರದ ಹೊರೆಯನ್ನು ಹೊರುತ್ತಿರುವ ಅಪಾರ ಸಂಖ್ಯೆಯ ನಮ್ಮ ಜನಗಳ ಕುಟುಂಬ ಬಜೆಟಿನ ಮೇಲೆ ನಕಾರಾತ್ಮಕ ಪ್ರಭಾವ ಬೀರುವ ಸಾಧ್ಯತೆ ಇದೆ. ಕೇರಳದ ಹಣಕಾಸು ಮಂತ್ರಿಗಳು ಒಂದು ವಿವರವಾದ ಅಧ್ಯಯನವಿಲ್ಲದೆ ಜಿಎಸ್‌ಟಿ ದರ ಪರಿಷ್ಕರಣವನ್ನು ಜಾರಿ ಮಾಡುವ ಬಗ್ಗೆ ಈಗಾಗಲೇ ಈ ಸಭೆಯಲ್ಲಿ ರಾಜ್ಯ ಸರಕಾರದ ಸಂದೇಹಗಳನ್ನು ಮಂತ್ರಿಗಳ ಗುಂಪಿಗೆ ತಿಳಿಸಿದ್ದಾರೆ. ಇವನ್ನು ದಿನಾಂಕ ನವಂಬರ್ 29, 2021 ರ ಪತ್ರದ ಮೂಲಕ ಮಂತ್ರಿಗಳ ಗುಂಪಿನ ಸಂಚಾಲಕರಿಗೂ ತಿಳಿಸಲಾಗಿದೆ.



GOVERNMENT OF KERALA
Pinarayi Vijayan
CHIEF MINISTER

D.O. No. 1067/2022/CM, Dated 18.07.2022

Dear Shri. Modi ji,

The 47th meeting of the GST Council has decided to change the modality of imposition of GST on goods such as rice, wheat, flour, pulses, cereals etc. These are essential commodities and form a substantial part of the consumption budget of the ordinary person in our country. The decision of the Council is that when the above commodities are "pre-packaged and labelled", they will become liable for levy of GST. This change is most likely to have a negative impact on the family budget of a vast number of our people, who are already bearing the brunt of high inflation. Kerala's Finance Minister has already conveyed the reservations of the State Government in the meeting of the Group of Ministers (GoM) on implementing GST rate revision without a detailed study. The apprehensions were also communicated to the Convenor of the GoM vide letter dated November 29, 2021.

Many small shopkeepers and millers pre-pack and keep the items ready for sale so that the customers can readily purchase them off the shelf rather than spend time for getting the items weighed and packed. Such pre-packing is a common practice in most of the retail shops in Kerala. The present change will have adverse impact on large number of ordinary customers who frequent these shops for their essential purchases. In this context, I request your urgent intervention to take necessary steps to re-examine the present changes so that common persons are not put to further hardship at this juncture when high inflation rates are prevailing.

With regards,

Yours sincerely,

Pinarayi Vijayan

Shri. Narendra Modi
Hon'ble Prime Minister of India
152, South Block
Raisina Hill, New Delhi - 110 011.

www.keralacm.gov.in

ಹಲವು ಸಣ್ಣ ಅಂಗಡಿಯವರು ಮತ್ತು ಗಿರಣಿಯವರು ತೂಕಮಾಡಲು ಮತ್ತು ಪೊಟ್ಟಣ ಕಟ್ಟಲು ಗಿರಾಕಿಗಳು ಸಮಯ ವ್ಯಯ ಮಾಡುವ ಅಗತ್ಯವಿಲ್ಲದೆ ಹಾಗೆಯೇ ಒಯ್ಯಲು ಸಾಧ್ಯವಾಗುವಂತೆ ಈ ಐಟಂಗಳನ್ನು ಮೊದಲೇ ಪ್ಯಾಕ್ ಮಾಡಿ ಮಾರಾಟಕ್ಕೆ ಸಿದ್ಧಮಾಡಿ ಇಟ್ಟುಕೊಳುತ್ತಾರೆ. ಕೇರಳದ ಬಹುಪಾಲು ಚಿಲ್ಲರೆ ಅಂಗಡಿಗಳಲ್ಲಿ ಇಂತಹ ಪೂರ್ವಪ್ಯಾಕಿಂಗ್ ಸಾಮಾನ್ಯ ಅಭ್ಯಾಸವಾಗಿದೆ. ಪ್ರಸ್ತುತ ಬದಲಾವಣೆ, ತಮ್ಮ ಅಗತ್ಯ ಖರೀದಿಗಳಿಗಾಗಿ ಈ ಅಂಗಡಿಗಳಿಗೆ ಆಗಾಗ ಬರುವ ದೊಡ್ಡ ಸಂಖ್ಯೆಯ ಸಾಮಾನ್ಯ ಗಿರಾಕಿಗಳ ಮೇಲೆ ಪ್ರತಿಕೂಲ ಪ್ರಭಾವ ಬೀರುತ್ತದೆ. ಈ ಸನ್ನಿವೇಶದಲ್ಲಿ, ನಾನು ಪ್ರಸ್ತುತ ಬದಲಾವಣೆಗಳ ಮರುಪರೀಕ್ಷಣೆಗೆ ಅಗತ್ಯ ಕ್ರಮಗಳನ್ನು ಕೈಗೊಳ್ಳಲು ನಿಮ್ಮ ತುರ್ತು ಮಧ್ಯಪ್ರವೇಶವನ್ನು ಕೋರುತ್ತೇನೆ, ಈ ಮೂಲಕ ಸಾಮಾನ್ಯ ಜನರು ಉನ್ನತ ಹಣದುಬ್ಬರ ದರಗಳು ಇರುವ ಈ ಸನ್ನಿವೇಶದಲ್ಲಿ ಮತ್ತಷ್ಟು ತೊಂದರೆಗಳಿಗೆ ಈಡಾಗದಂತಾಗಬೇಕು.

ಆದರದೊಂದಿಗೆ,

ನಿಮ್ಮ ವಿಶ್ವಾಸಿ,
ಪಿಣರಾಯಿ ವಿಜಯನ್

ಎಂಎಸ್‌ಪಿ ಕಾನೂನು ಮಾಡುವ ಅಜೆಂಡಾವೇ ಇಲ್ಲದ ಸರಕಾರೀ ನಿಷ್ಠಾವಂತರ ಸಮಿತಿ ನೇಮಕ–ಎಸ್‌ಕೆಎಂ ತಿರಸ್ಕಾರ

ಅಮೃತ ಕಾಲವಿದು!

ಕೊನೆಗೂ ಕೇಂದ್ರ ಸರಕಾರ ಎಲ್ಲ ಬೆಳೆಗಳಿಗೆ ಕನಿಷ್ಟ ಬೆಂಬಲ ಬೆಲೆಯನ್ನು ಕಾನೂನು ಹಕ್ಕಾಗಿ ಮಾಡಬೇಕು ಎಂಬ ರೈತರ ಆಗ್ರಹವನ್ನು ಪರಿಶೀಲಿಸಲು ಒಂದು ಸಮಿತಿಯನ್ನು ನೇಮಿಸಿದೆ. ಆದರೆ ಈ ಕುರಿತು ರೈತ ಸಂಘಟನೆಗಳಿಗೆ ಮತ್ತು ಸಂಯುಕ್ತ ಕಿಸಾನ್ ಮೋರ್ಚಾ(ಎಸ್‌ಕೆಎಂ)ಕ್ಕೆ ಇದ್ದ ಎಲ್ಲಾ ಆತಂಕಗಳು ನಿಜವಾಗಿವೆ. ಸರ್ಕಾರದ ಪ್ರತಿನಿಧಿಗಳು ಮತ್ತು ಅದರ ನಿಷ್ಠಾವಂತರಿಂದ ತುಂಬಿರುವ ಈ ಸಮಿತಿಯ ಕಾರ್ಯಸೂಚಿಯಲ್ಲಿ ಎಂಎಸ್‌ಪಿ ಕಾನೂನನ್ನು ಚರ್ಚಿಸಲು ಯಾವುದೇ ಅವಕಾಶವಿಲ್ಲ. ಅಲ್ಲದೆ ಕೃಷಿ ಮಾರ್ಕೆಟಿಂಗ್‌ನಲ್ಲಿ ಸುಧಾರಣೆಗಳ ಹೆಸರಿನಲ್ಲಿ, ಮೂರು ಕರಾಳ ಕಾನೂನುಗಳನ್ನು ಮರಳಿ ತರಲು ಸರ್ಕಾರ ಪ್ರಯತ್ನಿಸಬಹುದಾದ ಐಟಂ ಅನ್ನು ಸೇರಿಸಲಾಗಿದೆ.

ಆದ್ದರಿಂದ ಈ ಸಮಿತಿಯನ್ನು ತಿರಸ್ಕರಿಸುವುದಾಗಿ ಸಂಯುಕ್ತ ಕಿಸಾನ್ ಮೋರ್ಚಾ ಹೇಳಿದೆ. ಇಂತಹ ರೈತ ವಿರೋಧಿ ಸಮಿತಿಯೊಂದಿಗೆ ಮೋರ್ಚಾ ಯಾವುದೇ ಸಂಬಂಧ ಹೊಂದುವಂತಿಲ್ಲ. ಸಂಯುಕ್ತ ಕಿಸಾನ್ ಮೋರ್ಚಾ ತನ್ನ ಪ್ರತಿನಿಧಿಗಳನ್ನು ಈ ಸಮಿತಿಗೆ ಕಳುಹಿಸಲು ಯಾವುದೇ ತಾರ್ಕಿಕ ಆಧಾರವಿಲ್ಲವಾಗಿದೆ, ರೈತರ ಬೆಳೆಗೆ ನ್ಯಾಯಯುತ ಬೆಲೆ ಖಾತ್ರಿಪಡಿಸಲು ಎಂಎಸ್‌ಪಿ ಕಾನೂನು ಖಾತರಿಗಾಗಿ ಹೋರಾಟ ಮುಂದುವರಿಯುತ್ತದೆ ಎಂದು ಎಸ್‌ಕೆಎಂ ಸ್ಪಷ್ಟಪಡಿಸಿದೆ.

ನವೆಂಬರ್ 19 ರಂದು ಮೂರು ಕರಾಳ ಕಾನೂನುಗಳನ್ನು ರದ್ದುಗೊಳಿಸುವುದರೊಂದಿಗೆ, ಎಂಎಸ್‌ಪಿ ಬಗ್ಗೆ ಒಂದು ಸಮಿತಿಯನ್ನು ನೇಮಿಸಲಾಗುವುದು ಎಂದು ಪ್ರಧಾನ ಮಂತ್ರಿಯವರು ಘೋಷಿಸಿದಾಗಿನಿಂದ ಈ ಬಗ್ಗೆ ತನಗಿರುವ ಅನುಮಾನಗಳನ್ನು ಎಸ್‌ಕೆಎಂ ಸಾರ್ವಜನಿಕವಾಗಿ ವ್ಯಕ್ತಗೊಳಿಸಿದೆ. ಮಾರ್ಚ್ ತಿಂಗಳಿನಲ್ಲಿ ಸರ್ಕಾರವು ಈ ಸಮಿತಿಗೆ ಹೆಸರುಗಳನ್ನು ಕೇಳಿದಾಗ, ಮೋರ್ಚಾವು ಸಮಿತಿಯ ಬಗ್ಗೆ ಸರ್ಕಾರದಿಂದ ಸ್ಪಷ್ಟೀಕರಣವನ್ನು ಕೇಳಿತ್ತು, ಅದಕ್ಕೆ ಉತ್ತರವೇ ಬಂದಿಲ್ಲ. ಜುಲೈ 3 ರಂದು, ಸಂಯುಕ್ತ ಕಿಸಾನ್ ಮೋರ್ಚಾದ ರಾಷ್ಟ್ರೀಯ ಸಭೆಯು ಸರ್ವಾನುಮತದಿಂದ "ಸರ್ಕಾರವು ಈ ಸಮಿತಿಯ ಅಧಿಕಾರ ವ್ಯಾಪ್ತಿ ಮತ್ತು ಉಲ್ಲೇಖದ ನಿಯಮಗಳನ್ನು ಸ್ಪಷ್ಟಪಡಿಸದ ಹೊರತು, ಈ ಸಮಿತಿಗೆ ಸಂಯುಕ್ತ ಕಿಸಾನ್ ಮೋರ್ಚಾದ ಪ್ರತಿನಿಧಿಯನ್ನು ನಾಮನಿರ್ದೇಶನ ಮಾಡುವಲ್ಲಿ ಯಾವುದೇ ಅರ್ಥವಿಲ್ಲ" ಎಂದು ನಿರ್ಧರಿಸಿತು.

ಈ ಸಮಿತಿಯ ಬಗ್ಗೆ ಸಂಯುಕ್ತ ಕಿಸಾನ್ ಮೋರ್ಚಾದ ಎಲ್ಲಾ ಅನುಮಾನಗಳು ಸರ್ಕಾರ ಹೊರಡಿಸಿದ ಅಧಿಸೂಚನೆಯಿಂದ ನಿಜವಾಗಿವೆ. ನಿಸ್ಸಂಶಯವಾಗಿ, ಇಂತಹ ರೈತ ವಿರೋಧಿ ಮತ್ತು ಅರ್ಥಹೀನ ಸಮಿತಿಗೆ ಸಂಯುಕ್ತ ಕಿಸಾನ್ ಮೋರ್ಚಾದ ಪ್ರತಿನಿಧಿಗಳನ್ನು ಕಳುಹಿಸುವುದಕ್ಕೆ ಯಾವುದೇ ತಾರ್ಕಿಕ ಆಧಾರವಿಲ್ಲ ಎಂದು ಎಸ್‌ಕೆಎಂ ರಾಷ್ಟ್ರೀಯ ಮುಖಂಡರು ಒಂದು ಜಂಟಿ ಹೇಳಿಕೆಯಲ್ಲಿ ಹೇಳಿದ್ದಾರೆ.

ಸರ್ಕಾರವು ಈ ಸಮಿತಿಗೆ ಹೆಸರುಗಳನ್ನು ಸೂಚಿಸಲು ಎಸ್‌ಕೆಎಂನ್ನು ಕೇಳಿದಾಗ, 24 ಮಾರ್ಚ್ 2022 ರಂದು ಕೃಷಿ ಕಾರ್ಯದರ್ಶಿಗೆ ಕಳುಹಿಸಲಾದ ಇಮೇಲ್‌ನಲ್ಲಿ, ಈ ಕೆಳಗಿನ ಸ್ಪಷ್ಟೀಕರಣಗಳನ್ನು ಸರಕಾರದಿಂದ ಕೇಳಲಾಯಿತು.

1) ಈ ಸಮಿತಿಯ ಉಲ್ಲೇಖದ ಷರತ್ತುಗಳು(ಟಿಒಆರ್) ಏನಾಗಿರುತ್ತವೆ?
2) ಸಂಯುಕ್ತ ಕಿಸಾನ್ ಮೋರ್ಚಾವನ್ನು ಹೊರತುಪಡಿಸಿ, ಈ ಸಮಿತಿಯಲ್ಲಿ ಇತರ ಯಾವ ಸಂಸ್ಥೆಗಳು, ವ್ಯಕ್ತಿಗಳು ಮತ್ತು ಪದಾಧಿಕಾರಿಗಳನ್ನು ಸೇರಿಸಲಾಗುವುದು?
3) ಸಮಿತಿಯ ಅಧ್ಯಕ್ಷರು ಯಾರು ಮತ್ತು ಅದರ ಕಾರ್ಯಚಟುವಟಿಕೆ ಹೇಗಿರುತ್ತದೆ?
4) ಸಮಿತಿಯು ತನ್ನ ವರದಿಯನ್ನು ಸಲ್ಲಿಸಲು ಎಷ್ಟು ಸಮಯವನ್ನು ಪಡೆಯುತ್ತದೆ?
5) ಸಮಿತಿಯ ಶಿಫಾರಸುಗಳನ್ನು ಸರ್ಕಾರ ಜಾರಿಮಾಡಲು ಬದ್ಧವಾಗಿದೆಯೇ?

ಈ ಪ್ರಶ್ನೆಗಳಿಗೆ ಸರ್ಕಾರ ಉತ್ತರಿಸಲಿಲ್ಲ. ಆದರೂ ಕೃಷಿ ಸಚಿವರು ಸಂಯುಕ್ತ ಕಿಸಾನ್ ಮೋರ್ಚಾದಿಂದ ಪ್ರತಿನಿಧಿಗಳ ಹೆಸರು ಬರದ್ದರಿಂದಾಗಿ ಸಮಿತಿ ರಚನೆಯು ಸ್ಥಗಿತಗೊಂಡಿದೆ ಎಂದು ಹೇಳಿಕೆಗಳನ್ನು ನೀಡುತ್ತಲೇ ಬಂದರು.

ಈಗ ಸಂಸತ್ ಅಧಿವೇಶನದ ಮುನ್ನ ಈ ಸಮಿತಿಯನ್ನು ಪ್ರಕಟಿಸಿ ಸರ್ಕಾರ ದಾಖಲೆಗಳನ್ನು ಪೂರ್ಣಗೊಳಿಸಲು ಪ್ರಯತ್ನಿಸಿದೆ. ಆದರೆ ಅಧಿಸೂಚನೆಯು ಈ ಸಮಿತಿಯ ಹಿಂದೆ ಸರ್ಕಾರದ ದುರುದ್ದೇಶ ಮತ್ತು ಈ ಸಮಿತಿಯ ಅಪ್ರಸ್ತುತತೆಯನ್ನು ಸ್ಪಷ್ಟಪಡಿಸುತ್ತದೆ ಎಂದು ಎಸ್‌ಕೆಎಂ ಹೇಳಿದೆ. ಇದಕ್ಕೆ ಅದು ಮೂರು ಕಾರಣಗಳನ್ನು ಕೊಟ್ಟಿದೆ:

1. ಸಮಿತಿಯ ಅಧ್ಯಕ್ಷರು ಮಾಜಿ ಕೃಷಿ ಕಾರ್ಯದರ್ಶಿ ಸಂಜಯ್ ಅಗರ್ವಾಲ್, ಎಲ್ಲಾ ಮೂರು ರೈತ ವಿರೋಧಿ ಕಾನೂನುಗಳನ್ನು ರಚಿಸಿದವರು ಇವರೇ. ಅವರೊಂದಿಗೆ, ಈ ಮೂರು ಕಾನೂನುಗಳ ಮುಖ್ಯ ಪ್ರತಿಪಾದಕರಾಗಿದ್ದ ನೀತಿ ಆಯೋಗ್‌ನ ಸದಸ್ಯ ರಮೇಶ್ ಚಂದ್ ಅವರು ಇದ್ದಾರೆ. ತಜ್ಞರಾಗಿ ಎಂಎಸ್‌ಪಿಗೆ ಕಾನೂನು ಸ್ಥಾನಮಾನ ನೀಡುವುದನ್ನು ವಿರೋಧಿಸಿದವರು ಅರ್ಥಶಾಸ್ತ್ರಜ್ಞರು.
2. ಸಮಿತಿಯಲ್ಲಿ ಸಂಯುಕ್ತ ಕಿಸಾನ್ ಮೋರ್ಚಾದ 3 ಪ್ರತಿನಿಧಿಗಳಿಗೆ ಜಾಗ ಬಿಡಲಾಗಿದೆ. ಆದರೆ ಉಳಿದ ಜಾಗಗಳಲ್ಲಿ, ರೈತ ನಾಯಕರ ಹೆಸರಿನಲ್ಲಿ, ಸರ್ಕಾರವು ಎಲ್ಲಾ ಮೂರು ರೈತ ವಿರೋಧಿ ಕಾನೂನುಗಳನ್ನು ಬಹಿರಂಗವಾಗಿ ಪ್ರತಿಪಾದಿಸಿದ ತನ್ನ 5 ನಿಷ್ಠಾವಂತರನ್ನು ಇರಿಸಿದೆ. ಇವರೆಲ್ಲ ಬಿಜೆಪಿ–ಆರ್‌ಎಸ್‌ಎಸ್‌ನೊಂದಿಗೆ ನೇರವಾಗಿ ಸಂಬಂಧ ಹೊಂದಿದ್ದಾರೆ ಅಥವಾ ಅವರ ನೀತಿಯನ್ನು ಬೆಂಬಲಿಸುತ್ತಾರೆ. ಕೃಷ್ಣ ವೀರ್ ಚೌಧರಿ ಅವರು ಇಂಡಿಯನ್ ಫಾರ್ಮರ್ಸ್ ಸೊಸೈಟಿಯೊಂದಿಗೆ ಸಂಬಂಧ ಹೊಂದಿದ್ದಾರೆ ಮತ್ತು ಬಿಜೆಪಿಯ ನಾಯಕರಾಗಿದ್ದಾರೆ. ಸೈಯದ್ ಪಾಶಾ ಪಟೇಲ್ ಮಹಾರಾಷ್ಟ್ರದ ಮಾಜಿ ಬಿಜೆಪಿ ಎಂಎಲ್‌ಸಿ. ಪ್ರಮೋದ್ ಕುಮಾರ್ ಚೌಧರಿ ಅವರು ಆರ್‌ಎಸ್‌ಎಸ್ ಅಂಗಸಂಸ್ಥೆ ಭಾರತೀಯ ಕಿಸಾನ್ ಸಂಘದ ರಾಷ್ಟ್ರೀಯ ಕಾರ್ಯಕಾರಿಣಿ ಸದಸ್ಯರಾಗಿದ್ದಾರೆ. ಶೇತ್ಕರಿ ಸಂಘಟನೆಗೆ ಸಂಬಂಧಿಸಿದ ಗುಣವಂತ್ ಪಾಟೀಲ್ ಅವರು ಡಬ್ಲ್ಯುಟಿಒ ಪ್ರತಿಪಾದಕರು ಮತ್ತು ಸ್ವತಂತ್ರ ಭಾರತ್ ಪಕ್ಷ್ ಪಕ್ಷದ ಪ್ರಧಾನ ಕಾರ್ಯದರ್ಶಿಯಾಗಿದ್ದಾರೆ. ಗುಣಿ ಪ್ರಕಾಶ್ ಅವರು ರೈತರ ಚಳವಳಿಯನ್ನು ವಿರೋಧಿಸುವಲ್ಲಿ ಒಬ್ಬ ಹರಿಕಾರರು. ಈ ಐದು ಜನರು ಎಲ್ಲಾ ಮೂರು ರೈತ ವಿರೋಧಿ ಕಾನೂನುಗಳ ಪರವಾಗಿ ಬಹಿರಂಗವಾಗಿ ಮಾತನಾಡಿದವರು ಮತ್ತು ಅವರಲ್ಲಿ ಹೆಚ್ಚಿನವರು ರೈತರ ಚಳವಳಿಯ ವಿರುದ್ಧ ವಿಷವನ್ನು ಉಗುಳುತ್ತಿದ್ದ ಬಂದಿದ್ದಾರೆ.
3. ಸಮಿತಿಯ ಕಾರ್ಯಸೂಚಿಯಲ್ಲಿ ಎಂಎಸ್‌ಪಿ ಕುರಿತು ಕಾನೂನು ಮಾಡುವ ಯಾವುದೇ ಉಲ್ಲೇಖವಿಲ್ಲ. ಅಂದರೆ, ಈ ಪ್ರಶ್ನೆಯನ್ನು ಸಮಿತಿಯ ಮುಂದೆ ಇಡಲಾಗುವುದಿಲ್ಲ. ಸರ್ಕಾರದ ಸಮಿತಿಯನ್ನು ಈಗಾಗಲೇ ಸ್ಥಾಪಿಸಿರುವ ಕೆಲವು ಐಟಂಗಳನ್ನು ಕಾರ್ಯಸೂಚಿಯಲ್ಲಿ ಹಾಕಲಾಗಿದೆ. ಕೃಷಿ ಮಾರ್ಕೆಟಿಂಗ್‌ನಲ್ಲಿ ಸುಧಾರಣೆಗಳ ಹೆಸರಿನಲ್ಲಿ, ಮೂರು ಕರಾಳ ಕಾನೂನುಗಳನ್ನು ಮರಳಿ ತರಲು ಸರ್ಕಾರ ಪ್ರಯತ್ನಿಸಬಹುದಾದ ಐಟಂ ಅನ್ನು ಸೇರಿಸಲಾಗಿದೆ.

ಈ ಸಂಗತಿಗಳ ಹಿನ್ನೆಲೆಯಲ್ಲಿ ಸಂಯುಕ್ತ ಕಿಸಾನ್ ಮೋರ್ಚಾ ತನ್ನ ಪ್ರತಿನಿಧಿಗಳನ್ನು ಈ ಸಮಿತಿಗೆ ಕಳುಹಿಸಲು ಯಾವುದೇ ತಾರ್ಕಿಕ ಆಧಾರ ಇಲ್ಲ ಎಂದಿರುವ ಈ ಹೇಳಿಕೆ ರೈತರ ಬೆಳೆಗೆ ನ್ಯಾಯಯುತ ಬೆಲೆ ಖಾತ್ರಿಪಡಿಸಲು ಎಂಎಸ್‌ಪಿ ಕಾನೂನು ಖಾತರಿಗಾಗಿ ಹೋರಾಟ ಮುಂದುವರಿಯುತ್ತದೆ ಎಂದು ಘೋಷಿಸಿದೆ.

15ನೇ ರಾಷ್ಟ್ರಪತಿಯಾಗಿ ದ್ರೌಪದಿ ಮುರ್ಮು ಆಯ್ಕೆ

ಎನ್‌ಡಿಎ ಮೈತ್ರಿಕೂಟದ ಅಭ್ಯರ್ಥಿ ದ್ರೌಪದಿ ಮುರ್ಮು ದೇಶದ 15ನೇ ರಾಷ್ಟ್ರಪತಿಯಾಗಿ ಆಯ್ಕೆಯಾಗಿದ್ದಾರೆ. ಈ ಮೂಲಕ ಬುಡಕಟ್ಟು ಸಮುದಾಯದ ಮೊದಲ ಮಹಿಳೆ ಎಂಬ ಗೌರವಕ್ಕೆ ಪಾತ್ರರಾಗಿದ್ದಾರೆ.


ದ್ರೌಪದಿ ಮುರ್ಮು ಅವರಿಗೆ 5,121 ಮತಗಳು ಬಿದ್ದಿವೆ. ಈ ಮತಗಳ ಒಟ್ಟು ಮೌಲ್ಯ 5,77,777 ಆಗಿದೆ. ವಿಪಕ್ಷ ಅಭ್ಯರ್ಥಿ ಯಶವಂತ್ ಸಿನ್ಹಾ ಅವರಿಗೆ 1,058 ಮತಗಳು ಬಿದ್ದಿದ್ದು ಇದರ ಮೌಲ್ಯ 2,61,062 ಆಗಿದೆ.

ಯಾರಿಗೂ ಭಯಪಡದೆ ಸಂವಿಧಾನದ ಪಾಲಕರಾಗಬೇಕು: ದ್ರೌಪದಿ ಮುರ್ಮುರವರನ್ನು ಅಭಿನಂದಿಸಿದ ಪ್ರತಿಪಕ್ಷಗಳ ಅಭ್ಯರ್ಥಿ ಯಶವಂತ್ ಸಿನ್ಹಾ "ಭಾರತದ 15ನೇ ರಾಷ್ಟ್ರಪತಿಯಾಗಿ ಅವರು ಭಯಪಡದೆ ಸಂವಿಧಾನದ ಪಾಲಕರಾಗಿ ಕಾರ್ಯನಿರ್ವಹಿಸುತ್ತಾರೆ ಎಂದು ನಾನು ಭಾವಿಸುತ್ತೇನೆ. ನಿಜವಾಗಿ, ಪ್ರತಿಯೊಬ್ಬ ಭಾರತೀಯನೂ ಇದನ್ನೇ ಆಶಿಸುತ್ತಾರೆ." ಎಂದಿದ್ದಾರೆ.


ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಂ ಯೆಚುರಿಯವರು ಕೂಡ ದ್ರೌಪದಿ ಮುರ್ಮುರವರನ್ನು ಅಭಿನಂದಿಸುತ್ತ "ಭಾರತದ ಸಂವಿಧಾನದ ಪಾಲಕರಾಗಿ ನಮ್ಮ ಸಂವಿಧಾನಿಕ ಮೌಲ್ಯಗಳನ್ನು ಮತ್ತು ಜಾತ್ಯತೀತ, ಪ್ರಜಾಸತ್ತಾತ್ಮಕ ಭಾರತೀಯ ಗಣತಂತ್ರದ ಚಾರಿತ್ರ್ಯವನ್ನು ರಕ್ಷಣೆ ಮತ್ತು ಬಲಪಡಿಸುವಿರಾಗಿ ನಿರೀಕ್ಷಿಸುತ್ತೇವೆ" ಎಂದು ಹೇಳಿದ್ದಾರೆ.

ಜಾತ್ಯತೀತ ಪಕ್ಷಗಳ ಜಂಟಿ ಅಭ್ಯರ್ಥಿಯಾಗಿ ಯಶವಂತ ಸಿನ್ಹಾ ಭಾರತೀಯ ಸಂವಿಧಾನಿಕ ಗಣತಂತ್ರದ ಬುನಾದಿಯನ್ನು ಗಟ್ಟಿಮಾಡುವ ಪ್ರಶ್ನೆಯ ಮೇಲೆ ಅವಿಶ್ರಾಂತವಾಗಿ ಪ್ರಯತ್ನ ಪ್ರಚಾರ ನಡೆಸಿದರು. ಇನ್ನು ಮುಂದೆಯೂ ಪ್ರಸ್ತುತವಾಗಿರುವ ಮಹತ್ವದ ಪ್ರಶ್ನೆಗಳನ್ನು ಅವರು ಎತ್ತಿದರು ಎಂದು ಮುಂದುವರೆದು ಯೆಚುರಿ ಹೇಳಿದ್ದಾರೆ.

ಹೊಸ ರಾಷ್ಟ್ರಪತಿಗಳು ನಮ್ಮ ಸಂವಿಧಾನ ಎತ್ತಿ ಹಿಡಿದಿರುವ ಪ್ರಜಾಪ್ರಭುತ್ವ ಮೌಲ್ಯಗಳನ್ನು ರಕ್ಷಿಸುತ್ತ, ನಮ್ಮ ಜನಗಳ ಸೋದರತ್ವದ ಬಂಧಗಳನ್ನು ಬಲಪಡಿಸುತ್ತ ಮತ್ತು ಸವಾಲುಗಳನ್ನು ಮೀರಿ ನಿಲ್ಲುತ್ತ ದೇಶ ಮುನ್ನಡೆಯಲು ಮಾರ್ಗದರ್ಶನ ನೀಡುತ್ತಾರೆ ಎಂದು ಆಶಿಸುವುದಾಗಿ ಕೇರಳ ಮುಖ್ಯಮಂತ್ರಿ ತನ್ನ ಅಭಿನಂದನಾ ಸಂದೇಶದಲ್ಲಿ ಹೇಳಿದ್ದಾರೆ.



ವ್ಯಂಗ್ಯಚಿತ್ರ ಕೃಪೆ: ಸಂದೀಪ ಅಧ್ವರ್ಯು, ಟೈಮ್ಸ್ ಆಫ್ ಇಂಡಿಯ



ಇತ್ತ ಬುಡಕಟ್ಟು ಸಮುದಾಯದಿಂದ ಬಂದವರನ್ನು ರಾಷ್ಟ್ರಪತಿ ಹುದ್ದೆಯ ಅಭ್ಯರ್ಥಿಯಾಗಿ ಆರಿಸುತ್ತಲೇ, ಅತ್ತ ಅರಣ್ಯ ಸಂರಕ್ಷಣಾ ತಿದ್ದುಪಡಿಗಳ ಹೆಸರಿನಲ್ಲಿ ಬಂಡವಾಳಶಾಹಿಗಳಿಗೆ ಬುಡಕಟ್ಟು ಭೂಮಿಯ ಪಟ್ಟ!

ವ್ಯಂಗ್ಯಚಿತ್ರ ಕೃಪೆ: ಸಾತ್ವಿಕ್ ಗಡೆ, ದಿ ಹಿಂದು

ಲಿಂಗ ಅಂತರ ವರದಿ 2022ರಲ್ಲಿ ಭಾರತದ ಸ್ಥಾನ 135/146

ಭಾರತ ಮೊದಲ ಬುಡಕಟ್ಟು ಸಮುದಾಯದ ಮಹಿಳೆಯನ್ನು ರಾಷ್ಟ್ರಪತಿಯ ಅತ್ಯುನ್ನತ ಹುದ್ದೆಗೆ ಚುನಾಯಿಸಿರುವಾಗ ಮತ್ತು ಉಪರಾಷ್ಟ್ರಪತಿ ಹುದ್ದೆಗೆ ವಿಪಕ್ಷಗಳು ಅಲ್ಪಸಂಖ್ಯಾತ ಸಮುದಾಯದ ಮಹಿಳೆಯನ್ನು ಅಭ್ಯರ್ಥಿಯಾಗಿ ಆರಿಸಿರುವ ವೇಳೆಯಲ್ಲಿ ಲಿಂಗ ಅಂತರ ವರದಿ 2022 ಬಂದಿದೆ. ಅದರ ಪ್ರಕಾರ ಭಾರತ 146 ದೇಶಗಳ ಪೈಕಿ 135ನೇ ಸ್ಥಾನದಲ್ಲಿದೆ.

ನಿಜ, ಮಹಿಳೆಯರ ರಾಜಕೀಯ ಸಬಲೀಕರಣದಲ್ಲಿ ಭಾರತ ಸಾಕಷ್ಟು ಮೇಲಿದೆ, 46ನೇ ಸ್ಥಾನದಲ್ಲಿದೆ. ಆದರೆ ಮಹಿಳೆಯರ ಆರೋಗ್ಯ ಮತ್ತು ಬದುಕುಳಿದಿರುವಿಕೆಯಲ್ಲಿ 146ನೇ ಸ್ಥಾನದಲ್ಲಿ, ಅಂದರೆ ಕೊನೆಯ ಸ್ಥಾನನದಲ್ಲಿದೆ.

* ಶ್ರಮ ಭಾಗವಹಿಸುವಿಕೆ, ಅಂದರೆ ಉದ್ಯೋಗದ ವಲಯದಲ್ಲಿಯೂ ಹಾಗೂ ಅಂದಾಜು ಆದಾಯ ಗಳಿಕೆಯಲ್ಲಿಯೂ 140ನೇ ಸ್ಥಾನದಲ್ಲಿದೆ.
* ಶಾಸಕರು, ಹಿರಿಯ ಅಧಿಕಾರಿಗಳು ಮತ್ತು ಮ್ಯಾನೇಜರುಗಳ ಪ್ರಮಾಣದಲ್ಲಿ 123ನೇ ಸ್ಥಾನ
* ವೇತನ/ಕೂಲಿ ಸಮಾನತೆಯ ಪ್ರಶ್ನೆಯಲ್ಲಿ 122ನೇ ಸ್ಥಾನ
* ಸಾಕ್ಷರತೆ ದರದಲ್ಲಿ 121ನೇ ಸ್ಥಾನ
* ವೃತ್ತಿಪರ ಮತ್ತು ತಾಂತ್ರಿಕ ಕೆಲಸದ ವಲಯದಲ್ಲಿ 118ನೇಸ್ಥಾನ
* ಶೈಕ್ಷಣಿಕ ಸಾಧನೆಯಲ್ಲಿ 107ನೇ ಸ್ಥಾನ

ಸಾಮ್ರಾಜ್ಯಶಾಹಿಯ ಬೆನ್ನೇರಿ ಬೆಳೆದ ಸ್ಕ್ಯಾಂಡಿನೇವಿಯ ಬಂಡವಾಳಶಾಹಿ

ಸಾಮ್ರಾಜ್ಯಶಾಹಿಯ ಆಶ್ರಯವಿಲ್ಲದೆ ಬಂಡವಾಳಶಾಹಿಯು ಬೆಳೆಯುವುದಿಲ್ಲ ಎಂಬ ವಾದವನ್ನು ಸ್ಕ್ಯಾಂಡಿನೇವಿಯನ್ ಬಂಡವಾಳಶಾಹಿಯು ಸ್ಪಷ್ಟವಾಗಿ ಅಲ್ಲಗಳೆಯುತ್ತದೆ ಎಂಬ ಬಹು ಸಾಮಾನ್ಯ ತರ್ಕದಲ್ಲಿ ಹುರುಳಿಲ್ಲ. ಪ್ರಧಾನ ಬಂಡವಾಳಶಾಹಿ ದೇಶವು ಇಡೀ ಬಂಡವಾಳಶಾಹಿ ಜಗತ್ತನ್ನು ತನ್ನ ಹೆಗಲ ಮೇಲೆ ಇರುವ ಕೂಸುಮರಿಯಂತೆ ಭಾವಿಸುತ್ತದೆ. ಆದ್ದರಿಂದ ಸಾಮ್ರಾಜ್ಯಗಳನ್ನು ಹೊಂದಿರದ ಸ್ಕ್ಯಾಂಡಿನೇವಿಯನ್ ದೇಶಗಳು ಸಾಮ್ರಾಜ್ಯಶಾಹಿಯ ಆಶ್ರಯವಿಲ್ಲದೇ ತಮ್ಮ ಬಂಡವಾಳಶಾಹಿಯನ್ನು ತಾವೇ ನಿರ್ಮಿಸಿಕೊಂಡವು ಎನ್ನುವಂತಿಲ್ಲ: ಅವು ಪ್ರಮುಖ ಬಂಡವಾಳಶಾಹಿ ದೇಶದ ಸಾಮ್ರಾಜ್ಯಶಾಹೀ ಪ್ರಯೋಜನಗಳನ್ನು ಪಡೆದುಕೊಂಡಿವೆ. ಸೋವಿಯತ್ ಬೆದರಕೆಯ ಗುಮ್ಮ ಜೋರಾಗಿದ್ದಾಗಲೂ ನ್ಯಾಟೋ ಕೂಟದಿಂದ ದೂರವೇ ಉಳಿದಿದ್ದ ಸ್ವೀಡನ್ ಮತ್ತು ಫಿನ್ಲ್ಯಾಂಡ್ ದೇಶಗಳು ಇತ್ತೀಚೆಗೆ ನ್ಯಾಟೋ ಸದಸ್ಯತ್ವ ಕೇಳುವ ನಿರ್ಧಾರ ತೆಗೆದುಕೊಂಡಿವೆ ಎಂಬುದನ್ನು ಗಮನಿಸಬೇಕು.

ಪ್ರೊ.ಪ್ರಭಾತ್ ಪಟ್ನಾಯಕ್ ಅನು: ಕೆ.ಎಂ.ನಾಗರಾಜ್

ಸ್ಕ್ಯಾಂಡಿನೇವಿಯ ಪ್ರದೇಶದ ಬಂಡವಾಳಶಾಹಿಯ ಬಗ್ಗೆ ಅನೇಕ ತಪ್ಪು ಕಲ್ಪನೆಗಳಿವೆ. (ಉತ್ತರ ಯೂರೋಪಿನ ಡೆನ್ಮಾರ್ಕ್, ನಾರ್ವೆ, ಸ್ವೀಡನ್ ಮತ್ತು ಫಿನ್ಲ್ಯಾಂಡ್ ದೇಶಗಳನ್ನೊಳಗೊಂಡ ಪ್ರದೇಶವನ್ನು ಸ್ಕ್ಯಾಂಡಿನೇವಿಯನ್/ನಾರ್ಡಿಕ್ ದೇಶಗಳೆಂದು ಕರೆಯುತ್ತಾರೆ–ಅನು.). ಇಂಗ್ಲೆಂಡ್, ಫ್ರಾನ್ಸ್, ಜರ್ಮನಿ, ಇಟಲಿ, ಹಾಲೆಂಡ್ ಮತ್ತು ಪೋರ್ಚುಗಲ್ ಮುಂತಾದ ಸಾಮ್ರಾಜ್ಯಶಾಹಿ ದೇಶಗಳು ವಸಾಹತುಗಳನ್ನು ಹೊಂದಿದ್ದ ರೀತಿಯಲ್ಲಿ ಸ್ಕ್ಯಾಂಡಿನೇವಿಯನ್ ದೇಶಗಳು ಎಂದೂ ವಸಾಹತುಗಳನ್ನು ಹೊಂದದಿದ್ದರೂ ಸಹ, ಶಕ್ತಿಶಾಲಿ ಬಂಡವಾಳಶಾಹಿ ಅರ್ಥವ್ಯವಸ್ಥೆಗಳನ್ನು ಅಭಿವೃದ್ಧಿಪಡಿಸಿಕೊಂಡಿವೆ. ಸಾಮ್ರಾಜ್ಯಶಾಹಿಯ ಆಶ್ರಯವಿಲ್ಲದೆ ಬಂಡವಾಳಶಾಹಿಯು ಬೆಳೆಯುವುದಿಲ್ಲ ಎಂಬ ಒಂದು ವಾದವನ್ನು ಸ್ಕ್ಯಾಂಡಿನೇವಿಯನ್ ಬಂಡವಾಳಶಾಹಿಯು ಸ್ಪಷ್ಟವಾಗಿ ಅಲ್ಲಗಳೆಯುತ್ತದೆ ಎಂಬುದು ಬಹಳವೇ ಸಾಮಾನ್ಯವಾಗಿ ಕೇಳಬರುವ ತರ್ಕ. ಈ ರೀತಿಯ ವಾದವನ್ನು ನಾನು ದಶಕಗಳಿಂದಲೂ ಕೇಳುತ್ತಲೇ ಇದ್ದೇನೆ. ಆದರೆ, ಇದೊಂದು ಹುರುಳಿಲ್ಲದ ವಾದ. ಈ ವಾದವು, ಸ್ಕ್ಯಾಂಡಿನೇವಿಯಾ ಬಂಡವಾಳಶಾಹಿಯ ಬಗ್ಗೆ ಮಾತ್ರವಲ್ಲ, ಎಲ್ಲಕ್ಕಿಂತ ಹೆಚ್ಚಾಗಿ, ಸಾಮ್ರಾಜ್ಯಶಾಹಿಯ ಬಗ್ಗೆಯೇ ಒಂದು ತಪ್ಪು ಕಲ್ಪನೆಯನ್ನು ಆಧರಿಸಿದೆ.

ಸಮಾಜವಾದದ ಕೆಲವು ಅಂಶಗಳನ್ನು ಅಳವಡಿಸಿಕೊಂಡಿರುವ ಸ್ಕ್ಯಾಂಡಿನೇವಿಯನ್ ಸಾಮಾಜಿಕ ಪ್ರಜಾಪ್ರಭುತ್ವವು (Scandinavian social democracy) ಬಂಡವಾಳಶಾಹಿಯಿಂದ ಹಿಂಡಿ ಪಡೆದ ಕೆಲವು ಕಲ್ಯಾಣ ಕ್ರಮಗಳ ರಿಯಾಯ್ತಿಗಳ ಬಗ್ಗೆ ಸಕಾರಾತ್ಮಕವಾಗಿ ಹೇಳಬಹುದಾದರೂ, (ಇವುಗಳಲ್ಲಿ ಕೆಲವು ಇಂದಿನ ನವ–ಉದಾರವಾದಿ ಆಳ್ವಿಕೆಯಲ್ಲಿ ಅಪಾಯಕ್ಕೊಳಗಾಗಿದ್ದರೂ ಸಹ), ಸ್ಕ್ಯಾಂಡಿನೇವಿಯ ಸಾಮ್ರಾಜ್ಯಶಾಹಿಯಿಂದ ಅಂತರ ಕಾಯ್ದುಕೊಂಡ ಬಂಡವಾಳಶಾಹಿಗೆ ಒಂದು ಉದಾಹರಣೆಯಾಗಿದೆ ಎಂದು ಹೇಳುವುದು, ಬಂಡವಾಳಶಾಹಿಯ ಬಗ್ಗೆ ಪೂರ್ಣವಾಗಿ ತಪ್ಪು ಕಲ್ಪನೆಗಳಿಂದ ಕೂಡಿದ ನಿರೂಪಣೆಯಾಗುತ್ತದೆ. ಎರಡನೇ ಮಹಾಯುದ್ಧದ ಮೊದಲಾಗಲಿ ಅಥವಾ ನಂತರದಲ್ಲಾಗಲಿ, ಸ್ಕ್ಯಾಂಡಿನೇವಿಯನ್ ದೇಶಗಳು ಸ್ವತಃ ವಸಾಹತುಗಳನ್ನು ಹೊಂದಿರಲಿಲ್ಲ ಎಂಬುದು ನಿಜವೇ. ಆದರೆ, ಅವರು ಉಳಿದ ಸಾಮ್ರಾಜ್ಯಶಾಹಿಗಳ ಮೇಲೆ ಕೂಸುಮರಿ ಸವಾರಿ ಮಾಡಿದರು. ಈ ಸಾಮ್ರಾಜ್ಯಶಾಹಿ ಏರ್ಪಾಡನ್ನು ನಾವು ಸ್ವಲ್ಪ ವಿವರವಾಗಿ ನೋಡೋಣ.

ಸಾಮ್ರಾಜ್ಯಶಾಹಿಯೊಳಗೇ ಬಂಡವಾಳಶಾಹೀ ಬೆಳವಣಿಗೆ

ಪ್ರತಿ ಯಶಸ್ವಿ ಬಂಡವಾಳಶಾಹಿ ದೇಶವೂ ತನ್ನದೇ ಆದ ಸಾಮ್ರಾಜ್ಯವನ್ನು ಹೊಂದಿರಬೇಕು ಎಂದೇನಿಲ್ಲ. ಆದರೆ, ಒಟ್ಟಾಗಿ ಸಾಮ್ರಾಜ್ಯಶಾಹಿ ವ್ಯವಸ್ಥೆಯೊಳಗೇ ಬಂಡವಾಳಶಾಹಿಯ ಬೆಳವಣಿಗೆ ಸಂಭವಿಸುತ್ತದೆ. ವಿವಿಧ ಮುಂದುವರಿದ ಬಂಡವಾಳಶಾಹಿ ದೇಶಗಳು ತಮ್ಮದೇ ಆದ ಸಾಮ್ರಾಜ್ಯಗಳನ್ನು ಹೊಂದಿಲ್ಲದಿದ್ದರೂ ಸಹ, ಅವು ಈ ಸಾಮ್ರಾಜ್ಯಶಾಹಿ ವ್ಯವಸ್ಥೆಯ ಫಲಾನುಭವಿಗಳೇ. ಉದಾಹರಣೆಗೆ, ಬ್ರಿಟಿಷ್ ಸಾಮ್ರಾಜ್ಯಶಾಹಿಯ ಉಚ್ಛ್ರಾಯ ಕಾಲದಲ್ಲಿ, ಬ್ರಿಟಿಷ್ ಮಾರುಕಟ್ಟೆಯು ಯುರೋಪ್ ಭೂಖಂಡದ ಎಲ್ಲ ದೇಶಗಳಿಗೂ ಮುಕ್ತವಾಗಿತ್ತು. ಯುರೋಪಿನ ದೇಶಗಳು ತಮ್ಮದೇ ಆದ ಪ್ರತ್ಯೇಕ ಮಾರುಕಟ್ಟೆಗಳನ್ನು ಹೊಂದುವ ಅಗತ್ಯವಿರಲಿಲ್ಲ, ಏಕೆಂದರೆ, ಈ ದೇಶಗಳು ತಮ್ಮ ಸರಕುಗಳನ್ನು ಮಾರಾಟ ಮಾಡಲು ಬ್ರಿಟಿಷ್ ಮಾರುಕಟ್ಟೆಯನ್ನು ಮುಕ್ತವಾಗಿ ಪ್ರವೇಶಿಸಬಹುದಿತ್ತು. ಈ ದೇಶಗಳು ತಮಗೆ ದೊರೆತ ಈ ಅವಕಾಶವನ್ನು ಯಶಸ್ವಿಯಾಗಿ ಬಳಕೆಮಾಡಿಕೊಂಡಿದ್ದವು. ಬ್ರಿಟನ್ ಕೈಗಾರಿಕೀಕರಣವನ್ನು “ಮುಂಚಿತವಾಗಿ ಆರಂಭ" ಮಾಡಿದ್ದರಿಂದ ಅದರ ಶ್ರಮ ಉತ್ಪಾದಕತೆಯು (labour productivity) ನಂತರ ಕೈಗಾರಿಕೀಕರಣಗೊಂಡ ದೇಶಗಳಿಗಿಂತ ಕೆಳ ಮಟ್ಟದಲ್ಲಿತ್ತು. ಹಾಗಾಗಿ, (ಹೆಚ್ಚು ಕಡಿಮೆ ಒಂದೇ ಪ್ರಮಾಣದ ಕೂಲಿ ವೇತನಗಳಿದ್ದರೂ ಸಹ) ಬ್ರಿಟನ್ನಿನ ಉತ್ಪಾದನಾ ವೆಚ್ಚವು ಹೆಚ್ಚಾಗಿತ್ತು. ಅದೇ ರೀತಿಯಲ್ಲಿ ಬ್ರಿಟಿಷ್ ಸಾಮ್ರಾಜ್ಯಶಾಹಿಯು ತನ್ನ ವಸಾಹತುಗಳಿಂದ ಮತ್ತು ಅರೆ–ವಸಾಹತುಗಳಿಂದ ಹೊತ್ತೊಯ್ದ ಪ್ರಾಥಮಿಕ ಸರಕುಗಳು ಯುರೋಪಿನ ದೇಶಗಳಿಗೆ ಮತ್ತು ಆ ಕಾಲದಲ್ಲಿ ಹೊಸದಾಗಿ ಅಭಿವೃದ್ಧಿ ಹೊಂದುತ್ತಿದ್ದ ಇತರ ಬಂಡವಾಳಶಾಹಿ ದೇಶಗಳಿಗೂ ಲಭ್ಯವಿದ್ದವು. ಆದ್ದರಿಂದ ಈ ದೇಶಗಳು ತಮಗೆ ಬೇಕಾದ ಪ್ರಾಥಮಿಕ ಸರಕುಗಳ ಪೂರೈಕೆಗಾಗಿ ತಮ್ಮದೇ ಆದ ಪ್ರತ್ಯೇಕ ಏರ್ಪಾಡುಗಳನ್ನು ಮಾಡಿಕೊಳ್ಳಬೇಕಾಗಿರಲಿಲ್ಲ.

ಇದು ಎಲ್ಲ ಪ್ರಮುಖ ಸಾಮ್ರಾಜ್ಯಶಾಹಿ ದೇಶಗಳೂ ಯಾವುದೇ ಸಮಯದಲ್ಲೂ ನಿರ್ವಹಿಸಿದ ಪಾತ್ರವೇ: ಸಾಮ್ರಾಜ್ಯಶಾಹಿಯು ನಾಯಕತ್ವದ ಪಾತ್ರ ವಹಿಸಿದಾಗ ಈ ನಿರ್ವಹಣೆ ಸಹಜವೇ. ಈ ಕಾರ್ಯವು ಪ್ರತಿಸ್ಪರ್ಧಿ ದೇಶಗಳಲ್ಲಿ ಬಂಡವಾಳಶಾಹಿ ಹರಡುವುದನ್ನು ಸಮ್ಮತಿಸುತ್ತದೆ ಮತ್ತು ಹೀಗೆ ಉದಯವಾದ ಹೊಸ ಬಂಡವಾಳಿಗರ ಕಡೆಯಿಂದ ಸಾಮ್ರಾಜ್ಯಶಾಹಿಯ ನಾಯಕತ್ವಕ್ಕೆ ಯಾವ ರೀತಿಯಲ್ಲೂ ಧಕ್ಕೆ ಉಂಟಾಗುವುದಿಲ್ಲ. ಹಾಗೆ ನೋಡಿದರೆ, ತಮ್ಮ ದೇಶದಲ್ಲಿ ಕೈಗಾರಿಕಾ ಬಂಡವಾಳಶಾಹಿಯನ್ನು ಅಭಿವೃದ್ಧಿಪಡಿಸುವಲ್ಲಿ ತೊಡಗಿರುವ ಈ ಪ್ರತಿಸ್ಪರ್ಧಿ ದೇಶಗಳಿಂದಲೇ ಈ "ನಾಯಕ" ದೇಶಗಳು ತಮಗೆ ಬೇಕಾದ ಸರಕುಗಳನ್ನು ತೆಗೆದುಕೊಳ್ಳುತ್ತವೆ ಮತ್ತು ಈ ಒಂದು ಏರ್ಪಾಟಿನಿಂದಾಗಿ ತಾವು ಚಾಲ್ತಿ ಖಾತೆ ಕೊರತೆಗೆ ಒಳಗಾಗುವುದನ್ನು ತಪ್ಪಿಸಿಕೊಳ್ಳುತ್ತವೆ. ಚಾಲ್ತಿ ಖಾತೆಯಲ್ಲಿ ಅಪಾರ ಕೊರತೆಯನ್ನು ಹೊಂದಿದ್ದ ಬ್ರಿಟನ್, ತನ್ನ ವಸಾಹತುಗಳ ಪ್ರಾಕೃತಿಕ ಸಂಪನ್ಮೂಲಗಳನ್ನು ಬರಿದು ಮಾಡುವ ಮೂಲಕ ನೀಗಿಸಿಕೊಂಡಿತು. ಈ ವಸಾಹತುಗಳ ಪ್ರಾಕೃತಿಕ ಸಂಪನ್ಮೂಲಗಳನ್ನು ಎಷ್ಟು ದೊಡ್ಡ ಪ್ರಮಾಣದಲ್ಲಿ ಬ್ರಿಟನ್ ಬರಿದು ಮಾಡಿತು ಎಂದರೆ, ತನ್ನ ಅಪಾರ ಕೊರತೆಯನ್ನು ಸರಿದೂಗಿಸಿಕೊಂಡಿದ್ದು ಮಾತ್ರವಲ್ಲದೆ, ಚಾಲ್ತಿ ಖಾತೆ ಕೊರತೆ ಹೊಂದಿದ್ದ ಇತರ ದೇಶಗಳಿಗೆ, ಅಂದರೆ ಯುರೋಪಿಯನ್ ವಲಸಿಗರು ಬಂದು ನೆಲಸಿದ್ದ ಸಮಶೀತೋಷ್ಣ ದೇಶಗಳಿಗೆ ಗಣನೀಯ ಪ್ರಮಾಣದ ಬಂಡವಾಳವನ್ನು ರಫ್ತು ಮಾಡಿತ್ತು.

ಸಾಮ್ರಾಜ್ಯಶಾಹೀ ಪ್ರಯೋಜನಗಳು

ಬ್ರಿಟನ್ನಿನ ನಂತರ ಬಂಡವಾಳಶಾಹಿ ಜಗತ್ತಿನ ನಾಯಕನಾಗಿ ಹೊರ ಹೊಮ್ಮಿದ ಅಮೆರಿಕಾಗೆ ಬ್ರಿಟನ್‌ಗೆ ಇದ್ದಂತಹ ವಸಾಹತುಶಾಹಿ ಸಿರಿ ಸಂಪತ್ತಿನ ಅನುಕೂಲವಿರಲಿಲ್ಲ. ಆದರೆ, ಡಾಲರ್‌ಗಳನ್ನು ಮುದ್ರಿಸುವ ಮೂಲಕ ಅಮೆರಿಕಾ ತನ್ನ ಚಾಲ್ತಿ ಖಾತೆ ಕೊರತೆಯನ್ನು ನಿರ್ವಹಿಸಿಕೊಳ್ಳುತ್ತದೆ. ಬ್ರೆಟನ್ ವುಡ್ಸ್ ವ್ಯವಸ್ಥೆಯಡಿಯಲ್ಲಿ ಡಾಲರ್ ಅನ್ನು "ಚಿನ್ನಕ್ಕೆ ಸಮ" ಎಂದು ಘೋಷಿಸಲಾಯಿತು (ಪ್ರತಿ ಔನ್ಸ್ ಚಿನ್ನಕ್ಕೆ $35 ರಂತೆ ಡಾಲರ್‌ಗಳನ್ನು ಚಿನ್ನವಾಗಿ ಪರಿವರ್ತಿಸಬಹುದಿತ್ತು). ತದನಂತರದಲ್ಲಿ, ಬ್ರೆಟನ್ ವುಡ್ಸ್ ವ್ಯವಸ್ಥೆ ಮತ್ತು ಚಿನ್ನದ ಪರಿವರ್ತನೀಯತೆಗಳು ಕುಸಿತದ ನಂತರವೂ, ಡಾಲರ್‌ಗಳನ್ನು ವಿಶ್ವದ ಸಂಪತ್ತು ಹೊಂದಿರುವವರು ಚಿನ್ನಕ್ಕೆ ಸಮವೆಂದು ವಸ್ತುಶಃ ಒಪ್ಪಿಕೊಂಡಿದ್ದಾರೆ ಮತ್ತು ತಮ್ಮ ಸಂಪತ್ತನ್ನು ಡಾಲರ್ ಕರೆನ್ಸಿಯ ರೂಪದಲ್ಲಿ ಹಿಡಿದಿಟ್ಟುಕೊಳ್ಳುತ್ತಾರೆ.

ಸಂಕ್ಷಿಪ್ತವಾಗಿ ಹೇಳುವುದಾದರೆ, ಪ್ರಧಾನ ಬಂಡವಾಳಶಾಹಿ ದೇಶವು ಇಡೀ ಬಂಡವಾಳಶಾಹಿ ಜಗತ್ತನ್ನುತನ್ನಹೆಗಲಮೇಲೆಇರುವಕೂಸುಮರಿಯಂತೆ ಭಾವಿಸುತ್ತದೆ. ಕೆಲವು ಮುಂದುವರಿದ ದೇಶಗಳಿಗೆ ಇದು ಕಿರಿಕಿರಿಯಾಗಬಹುದು, ನಿಜ. ಈ ದೇಶಗಳು ತಮ್ಮದೇ ಸಾಮ್ರಾಜ್ಯಗಳನ್ನು ಕಟ್ಟಿಕೊಳ್ಳಲು ಪ್ರಯತ್ನಿಸಬಹುದು. ಆದರೆ, ಸಾಮ್ರಾಜ್ಯಗಳನ್ನು ಹೊಂದಿರದ ಸ್ಕ್ಯಾಂಡಿನೇವಿಯನ್ ದೇಶಗಳು ಸಾಮ್ರಾಜ್ಯಶಾಹಿಯ ಆಶ್ರಯವಿಲ್ಲದೇ ತಮ್ಮ ಬಂಡವಾಳಶಾಹಿಯನ್ನು ತಾವೇ ನಿರ್ಮಿಸಿಕೊಂಡವು ಎನ್ನುವಂತಿಲ್ಲ: ಅವು ಪ್ರಮುಖ ಬಂಡವಾಳಶಾಹಿ ದೇಶದ ಸಾಮ್ರಾಜ್ಯಶಾಹೀ ಪ್ರಯೋಜನಗಳನ್ನು ಪಡೆದುಕೊಂಡಿವೆ.



ಈ ಸಂದರ್ಭದಲ್ಲಿ ಎರಡು ಅಧಿಕ ಅಂಶಗಳನ್ನು ಗಮನಿಸಬೇಕಾಗುತ್ತದೆ. ಉದಯೋನ್ಮುಖ ಬಂಡವಾಳಶಾಹಿ ದೇಶಗಳು ಪ್ರಧಾನ ಬಂಡವಾಳಶಾಹಿ ದೇಶದ ಮಾರುಕಟ್ಟೆಗೆ ಮುಕ್ತ ಪ್ರವೇಶಾವಕಾಶವನ್ನು ಹೊಂದಿದ್ದವು. ಅದೇ ಸಮಯದಲ್ಲಿ ಈ ದೇಶಗಳು ತಮ್ಮ ಮಾರುಕಟ್ಟೆಗಳಲ್ಲಿ ಆಮದುಗಳ ಮೇಲೆ ಸುಂಕವನ್ನು ವಿಧಿಸುತ್ತಿದ್ದವು. ಪ್ರಧಾನ ಬಂಡವಾಳಶಾಹಿ ದೇಶದ ಆಮದುಗಳ ಮೇಲೂ ಸುಂಕ ವಿಧಿಸುತ್ತಿದ್ದವು. ಈ ರೀತಿಯಲ್ಲಿ, ಜರ್ಮನಿ ಮತ್ತು ಅಮೆರಿಕಾ ದೇಶಗಳು ಮೊದಲ ಮಹಾಯುದ್ಧ–ಪೂರ್ವ ಅವಧಿಯಲ್ಲಿ ಬ್ರಿಟಿಷ್ ಮಾರುಕಟ್ಟೆಯನ್ನು ಅತಿಕ್ರಮಿಸಿದರೂ ಸಹ ತಮ್ಮ ತಮ್ಮ ದೇಶಗಳ ಬಂಡವಾಳಗಾರರ ಹಿತ ಕಾಪಾಡುವ ಸಲುವಾಗಿ ಆಮದು ಸುಂಕಗಳನ್ನು ವಿಧಿಸಿದವು. ಈ ಅಸಮ್ಮಿತಿಯಿಂದಾಗಿಯೇ, ಬ್ರಿಟನ್ ಹೊಂದಿದ್ದ ಪ್ರಾರಂಭಾನುಕೂಲದ ಹೊರತಾಗಿಯೂ, ಈ ಉದಯೋನ್ಮುಖ ದೇಶಗಳಿಗೆ ಕೈಗಾರಿಕೀಕರಣಗೊಳ್ಳುವ ಅವಕಾಶ ದೊರೆಯಿತು. ಯೂರೋಪಿನ ಇತರ ದೇಶಗಳೂ ಸಹ ಇದನ್ನೇ ಅನುಸರಿಸಿದವು. ಎರಡನೆಯದಾಗಿ, ಈ ಪ್ರತಿಸ್ಪರ್ಧಿ ದೇಶಗಳು ಬ್ರಿಟಿಷ್ ಮಾರುಕಟ್ಟೆಗೆ ಮಾತ್ರವಲ್ಲದೆ ಬ್ರಿಟಿಷ್ ವಸಾಹತುಗಳ ಮಾರುಕಟ್ಟೆಗಳಿಗೂ ಸಹ 1920 ಮತ್ತು 1930ರ ದಶಕದವರೆಗಾದರೂ ಪ್ರವೇಶಾವಕಾಶ ಹೊಂದಿದ್ದವು.

ಎರಡು ಮಹಾಯದ್ಧಗಳ ಮಧ್ಯದ ಅವಧಿಯಲ್ಲಿ “ಸಾಮ್ರಾಜೀಯ ಒಲವು” ಆರಂಭವಾಯಿತು. ಅಂದರೆ ಸಾಮ್ರಾಜ್ಯದ ವಸಾಹತುಗಳ ನಡುವೆ ಆಮದು ಸುಂಕಗಳನ್ನು ರಿಯಾಯ್ತಿ ದರದಲ್ಲಿ ವಿಧಿಸಲಾಗುತ್ತಿತ್ತು. ಅಂದರೆ, ಬ್ರಿಟಿಷ್ ಸಾಮ್ರಾಜ್ಯದ ಹೊರಗೆ ತಯಾರಾದ ಸರಕುಗಳ ಮೇಲೆ ಬ್ರಿಟಿಷ್ ಸಾಮ್ರಾಜ್ಯದ ಒಳಗೆ ತಯಾರಿಸಿದ ಸರಕುಗಳಿಗೆ ಹೋಲಿಸಿದರೆ, ಹೆಚ್ಚಿನ ಸುಂಕಗಳನ್ನು ವಿಧಿಸಲಾಗುತ್ತಿತ್ತು. ಈ ಕ್ರಮವು ಸಾಮ್ರಾಜ್ಯಶಾಹಿ ವ್ಯವಸ್ಥೆಯಲ್ಲಾದ ಒಂದು ಬದಲಾವಣೆಯನ್ನು ಸೂಚಿಸಿತು. ಅಧಿಕ ಸುಂಕ ವಿಧಿಸುವ ಕ್ರಮವನ್ನು ಪ್ರಧಾನವಾಗಿ ಬ್ರಿಟನ್ನಿನ ಏಷ್ಯಾದ ವಸಾಹತುಗಳ ಮಾರುಕಟ್ಟೆಗಳನ್ನು ವಶಪಡಿಸಿಕೊಳ್ಳುವ ಜಪಾನೀಯರ ಬೃಹತ್ ಪ್ರಯತ್ನದ ವಿರುದ್ಧವಾಗಿ ರೂಪಿಸಲಾಗಿತ್ತು. ಸುಂಕ ವಿಧಿಸುವಲ್ಲಿ ಈ ರೀತಿಯ “ಸಾಮ್ರಾಜೀಯ

ಪುಟ 14 ಕ್ಕೆ





ಸಾಮ್ರಾಜ್ಯಶಾಹಿಯ ಬೆನ್ನೇರಿ ಬೆಳೆದ ಸ್ಕ್ಯಾಂಡಿನೇವಿಯ ಬಂಡವಾಳಶಾಹಿ

ಪುಟ 13 ರಿಂದ

ಒಲವು" ಮತ್ತು ನಂತರದ "ಸಾಮ್ರಾಜ್ಯದ ವಸ್ತುಗಳನ್ನೇ ಖರೀದಿಸಿ" ಅಭಿಯಾನದ ಮುಖ್ಯ ಗುರಿ ಜಪಾನ್ ಆಗಿದ್ದರೂ ಸಹ, ಈ ಭೇದಾತ್ಮಕ ಸುಂಕಗಳು ಸಾಮ್ರಾಜ್ಯಶಾಹಿ ವ್ಯವಸ್ಥೆಯಲ್ಲಿ ಉಂಟಾದ ಒಂದು ಸಾಮಾನ್ಯ ಬದಲಾವಣೆಯನ್ನು ಅರ್ಥೈಸುತ್ತವೆ ಮತ್ತು ಅವು ಅಂತರ್-ಸಾಮ್ರಾಜ್ಯಶಾಹಿ ಪೈಪೋಟಿಯ ಕಾರಣ ಮತ್ತು ಲಕ್ಷಣ ಎರಡೂ ಆಗಿದ್ದವು ಮತ್ತು ಮಹಾ ಆರ್ಥಿಕ ಕುಸಿತದಿಂದಾಗಿ ಭೇದಾತ್ಮಕ ಸುಂಕಗಳು ಹೆಚ್ಚಿದವು. ಈ ಬದಲಾವಣೆಗಳಾಗುವ ಹಿಂದಿನ ಅವಧಿಯಲ್ಲಿ, ಅಂದರೆ, ಮೊದಲನೆಯ ಮಹಾಯುದ್ಧ-ಪೂರ್ವ ಏರ್ಪಾಟನ್ನು ಬುಡಮೇಲುಗೊಳಿಸಿದ ಜಪಾನಿನ ಆರ್ಥಿಕ ವಿಸ್ತರಣಾವಾದದ ಮೊದಲು, ಬ್ರಿಟನ್ನಿನ ಈ ರಕ್ಷಣಾತ್ಮಕ ಕ್ರಮಗಳು ಜಪಾನಿಗೆ ಅಡ್ಡಿಯಾದಾಗ, ಮಾರುಕಟ್ಟೆಗಳನ್ನು ವಶಪಡಿಸಿಕೊಳ್ಳುವ ಅದರ ಪ್ರಯತ್ನವು ಜಪಾನೀ ಮಿಲಿಟರಿ ವಿಸ್ತರಣಾವಾದವಾಗಿ ರೂಪುಗೊಂಡಾಗ, ಬ್ರಿಟಿಷ್ ವಸಾಹತುಶಾಹಿ ಮಾರುಕಟ್ಟೆಗಳು ಬ್ರಿಟನ್ನಿನ ಸರಕುಗಳಿಗೆ ಮಾತ್ರವಲ್ಲದೆ ಪ್ರತಿಸ್ಪರ್ಧಿ ಬಂಡವಾಳಶಾಹಿ ದೇಶಗಳ ಸರಕುಗಳಿಗೂ ಮುಕ್ತವಾದವು.

ನ್ಯಾಟೋ ಸದಸ್ಯತ್ವಕ್ಕಾಗಿ ಈಗ ಅರ್ಜಿ ಏಕೆ?

ಈ ಪ್ರಕಾರವಾಗಿ ಸ್ಕ್ಯಾಂಡಿನೇವಿಯನ್ ದೇಶಗಳು ತಮ್ಮದೇ ಆದ ವಸಾಹತುಗಳನ್ನು ಹೊಂದಿರದಿದ್ದರೂ, ಸ್ಕ್ಯಾಂಡಿನೇವಿಯನ್ ಬಂಡವಾಳಶಾಹಿಯ ಬೆಳವಣಿಗೆಯು, ಬಂಡವಾಳಶಾಹಿಯ ಬೆಳವಣಿಗೆಗೆ ಸಾಮ್ರಾಜ್ಯಶಾಹಿಯ ಅಗತ್ಯವನ್ನು ಅಲ್ಲಗಳೆಯುವುದಿಲ್ಲ. ಈ ವಿದ್ಯಮಾನವು ಸಾಮ್ರಾಜ್ಯಶಾಹಿ ವ್ಯವಸ್ಥೆಯ ಸಂಕೀರ್ಣತೆಯನ್ನು ಮಾತ್ರ ಒತ್ತಿಹೇಳುತ್ತದೆ. ಇದರಿಂದ ತಿಳಿದುಬರುವುದೇನೆಂದರೆ, ಸ್ಕ್ಯಾಂಡಿನೇವಿಯನ್ ದೇಶಗಳೂ ಸಹ ಇತರ ಯಾವುದೇ ಪ್ರಮುಖ ಬಂಡವಾಳಶಾಹಿ ದೇಶದ ರೀತಿಯಲ್ಲೇ ಸಾಮ್ರಾಜ್ಯಶಾಹಿ ವ್ಯವಸ್ಥೆಯನ್ನು ಸಂರಕ್ಷಿಸುವಲ್ಲಿ ಹೆಚ್ಚಿನ ಆಸಕ್ತಿಯನ್ನು ಹೊಂದಿವೆ ಎಂಬುದನ್ನು. ಈ ಸಂರಕ್ಷಣೆಯ ಅಗತ್ಯ ಕೇವಲ ರಾಜಕೀಯ ಕಾರಣಗಳಿಗಾಗಿ ಅಂದರೆ, ರಾಜಕೀಯವಾಗಿ ಸುತ್ತುಗಟ್ಟುವಿಕೆಯ ಮೂಲಕ ಸಾಮ್ರಾಜ್ಯದ "ಭದ್ರತಾ" ವ್ಯವಸ್ಥೆ ಕುಸಿಯುವಂತೆ ಮಾಡುತ್ತದೆ ಎಂಬ ಕಾರಣಕ್ಕೆ ಮಾತ್ರವಲ್ಲ, ಯಾವುದೇ ನಿರ್ದಿಷ್ಟ ಮುಂದುವರಿದ ದೇಶದ ಬಂಡವಾಳಶಾಹಿಯ ಉಳಿವನ್ನು ಹೆಚ್ಚು ಕಷ್ಟಕರವಾಗಿಸುತ್ತದೆ ಎಂಬುದರಿಂದಾಗಿಯೂ. ಸಾಮ್ರಾಜ್ಯಶಾಹಿ ವ್ಯವಸ್ಥೆಯು ದುರ್ಬಲಗೊಂಡಾಗ ಮುಂದುವರೆದ ಬಂಡವಾಳಶಾಹಿ ದೇಶಗಳಲ್ಲಿ ಉತ್ಪಾದನೆ ಮಾಡಲಾಗದ ಉಷ್ಣವಲಯದ ಮತ್ತು ಅರೆ-ಉಷ್ಣವಲಯದ ಸರಕುಗಳ ಸಂಪೂರ್ಣ ಶ್ರೇಣಿಯ ಪೂರೈಕೆಗಳು ಅಸ್ತವ್ಯಸ್ತಗೊಳ್ಳುತ್ತವೆ. ಅವುಗಳ ಲಭ್ಯತೆಯನ್ನು ಖಚಿತಪಡಿಸಿಕೊಳ್ಳುವಲ್ಲಿ ಇದೊಂದು ಆರ್ಥಿಕ ಅಗತ್ಯವೂ ಆಗುತ್ತದೆ.

ನ್ಯಾಟೋ ಸದಸ್ಯತ್ವ ಬಯಸಿ ಸ್ವೀಡನ್ ಮತ್ತು ಫಿನ್ಲ್ಯಾಂಡ್ ದೇಶಗಳು ಇತ್ತೀಚೆಗೆ ನಿರ್ಧಾರ ತೆಗೆದುಕೊಂಡಿವೆ. ಈ ದೇಶಗಳನ್ನು ನ್ಯಾಟೋಗೆ ಸೇರಿಸಿಕೊಳ್ಳುವ ಬಗ್ಗೆ ಟರ್ಕಿ ದೇಶವು ವಿರೋಧ ವ್ಯಕ್ತಪಡಿಸಿದೆ. ಈ ಸಂಬಂಧವಾಗಿ ಸ್ವೀಡನ್ ಮತ್ತು ಫಿನ್ಲ್ಯಾಂಡ್ ದೇಶಗಳು ಟರ್ಕಿಯೊಂದಿಗೆ ಒಂದು ಒಪ್ಪಂದ ಮಾಡಿಕೊಂಡಿವೆ. ಈ ಒಪ್ಪಂದದ ಪ್ರಕಾರ, ಕುರ್ದಿಶ್ ನಿರಾಶ್ರಿತರಿಗೆ ನೀಡಿದ ರಾಜಕೀಯ ಆಶ್ರಯವನ್ನು ಈ ದೇಶಗಳು ಕೊನೆಗೊಳಿಸಿ ಕುರ್ದಿಶ್ ನಿರಾಶ್ರಿತರನ್ನು ಶಿಕ್ಷೆಗೆ ಒಳಪಡಿಸಬಯಸುವ ಟರ್ಕಿಗೆ ಒಪ್ಪಿಸುವ ಬಗ್ಗೆ ಅನೇಕರು ಆಶ್ಚರ್ಯಪಟ್ಟಿದ್ದಾರೆ. ಉಕ್ರೇನ್‌ನೊಂದಿಗಿನ ರಷ್ಯಾದ ಯುದ್ಧವು, ಸ್ವೀಡನ್ ಮತ್ತು ಫಿನ್ಲ್ಯಾಂಡ್ ದೇಶಗಳು ನ್ಯಾಟೋ ಕೂಟ ಸೇರುವ ಇಚ್ಛೆಯನ್ನು ವ್ಯಕ್ತಪಡಿಸಿದ ತಕ್ಷಣದ ಹಿನ್ನೆಲೆಯನ್ನು ಒದಗಿಸಿದೆ ಎಂಬುದರಲ್ಲಿ ಅನುಮಾನವಿಲ್ಲ. ಆದರೆ, ಈ ದೇಶಗಳು ಈ ವರೆಗೆ ಹೊಂದಿದ್ದ ನಿಲುವನ್ನು ಈಗ ಬದಲಾವಣೆ ಮಾಡಿಕೊಂಡಿರುವ ವಿದ್ಯಮಾನವು ಬಂಡವಾಳಶಾಹಿ ಜಗತ್ತಿನಲ್ಲಿ ನಡೆಯುತ್ತಿರುವ ಒಂದು ಮೂಲಭೂತ ಬದಲಾವಣೆಯನ್ನು ಸೂಚಿಸುತ್ತದೆ.

ಈ ಬದಲಾವಣೆಯನ್ನು ವಿವರಿಸಲು ಸಾಮ್ರಾಜ್ಯಶಾಹಿಯು "ವಿಸ್ತರಣಾವಾದಿ ರಷ್ಯ"ದಿಂದ ಎದುರಾದ ಬೆದರಿಕೆಯನ್ನು ಉತ್ಪ್ರೇಕ್ಷಿಸುತ್ತದೆ. ಆದರೆ, ಈ ವಾದವನ್ನು ಪರಿಶೀಲನೆಗೆ ಒಳಪಡಿಸಿದಾಗ ಅದು ಬಿದ್ದುಹೋಗುತ್ತದೆ. ರಷ್ಯಾವನ್ನು ಒಂದು ಅಚಲ "ವಿಸ್ತರಣಾವಾದಿ" ಎಂದು ಒಂದು ವೇಳೆ ಊಹಿಸಿಕೊಂಡರೂ ಸಹ, ಈ ವರೆಗೆ ಅದರ ವಿಸ್ತರಣಾ ಕಾರ್ಯಾಚರಣೆಯು ಒಂದು ಕಾಲದಲ್ಲಿ ಸೋವಿಯತ್ ಒಕ್ಕೂಟದ ಒಂದು ಭಾಗವಾಗಿದ್ದ ಪ್ರದೇಶಗಳ ವ್ಯಾಪ್ತಿಯಲ್ಲಿದೆ. ಆದರೆ, ಸ್ವೀಡನ್ ಆಗಲಿ ಅಥವಾ ಫಿನ್ಲ್ಯಾಂಡ್ ಆಗಲಿ ಈ ವ್ಯಾಪ್ತಿಯಲ್ಲಿ ಬರುವುದಿಲ್ಲ. ಅದಕ್ಕಿಂತಲೂ ಹೆಚ್ಚಾಗಿ, ಬಂಡವಾಳವಾದೀ ದೇಶಗಳು ಮತ್ತು ಸಮಾಜವಾದದ ನಡುವೆ ನಡೆಯುತ್ತಿದ್ದ ಶೀತಲ ಸಮರವು ಉತ್ತುಂಗದಲ್ಲಿದ್ದಾಗ, ಸೋವಿಯತ್ ಗುಮ್ಮದ ಬೆದರಿಕೆಯ ಬಗ್ಗೆ ಯುರೋಪಿಯನ್ ದೇಶಗಳು ಬೊಬ್ಬೆ ಹೊಡೆಯುತ್ತಿದ್ದಾಗ ಮತ್ತು ದಿನ ನಿತ್ಯವೂ ಯುರೋಪಿನ ಜನರಿಗೆ ಸೋವಿಯತ್-ವಿರೋಧಿ ವಿಚಾರಗಳನ್ನು ಉಣಬಡಿಸುತ್ತಿದ್ದಾಗ, ಸ್ವೀಡನ್ ಮತ್ತು ಫಿನ್ಲ್ಯಾಂಡ್ ದೇಶಗಳು ನ್ಯಾಟೋದಿಂದ ದೂರ ಉಳಿದಿದ್ದವು. ಮೇಲಾಗಿ, ಸೋವಿಯತ್ ಒಕ್ಕೂಟ ಮತ್ತು ಅದರ ಸಮಾಜವಾದವು ಪತನವಾಗಿ ಹಲವು ವರ್ಷಗಳೇ ಉರುಳಿರುವಾಗ ಮತ್ತು ಸಾಮ್ರಾಜ್ಯಶಾಹಿ ಪ್ರಾಬಲ್ಯದ ವಿರುದ್ಧವಾಗಿ ಸೋವಿಯತ್ ಒಕ್ಕೂಟವು ಒಡ್ಡಿದ ಸೈದ್ಧಾಂತಿಕ ಸವಾಲು ಹಿಮ್ಮೆಟ್ಟಿರುವಾಗ, ಈಗ ಇದ್ದಕ್ಕಿದ್ದಂತೆಯೇ ಈ ದೇಶಗಳು ನ್ಯಾಟೋ ಸದಸ್ಯತ್ವಕ್ಕಾಗಿ ಅರ್ಜಿ ಸಲ್ಲಿಸಿರುವುದಾದರೂ ಏಕೆ?

ಈ ಪ್ರಶ್ನೆಗೆ ಉತ್ತರ ಇಲ್ಲಿದೆ, ನವ-ಉದಾರವಾದವು ಒಂದು ಸುದೀರ್ಘ ಬಿಕ್ಕಟ್ಟಿಗೆ ಒಳಗಾದ ಪರಿಣಾಮವಾಗಿ ಪಾಶ್ಚಾತ್ಯ ಸಾಮ್ರಾಜ್ಯಶಾಹಿಯು ಒಳಗೊಳಗೇ ಸ್ಫೋಟಗೊಳ್ಳುತ್ತಿರುವ ಅಂಶದಲ್ಲಿ ಇದು ಅಡಗಿದೆ. ಸುದೀರ್ಘ ಬಿಕ್ಕಟ್ಟಿನಿಂದ ನರಳುತ್ತಿರುವ ಸಾಮ್ರಾಜ್ಯಶಾಹಿಗಳಿಗೆ ತಮ್ಮ ಹುಕುಂಗಳನ್ನು ಚಲಾಯಿಸುವುದು ಕಷ್ಟವಾಗುತ್ತಿದೆ. ವಿಶ್ವವು ಬದಲಾವಣೆಗಾಗಿ ಹಾತೊರೆಯುತ್ತಿದೆ. ಈಗ ಅದರ ಹೊಸ್ತಿಲ ಮೇಲೆ ಬಂದು ನಿಂತಿದೆ ಎಂದು ತೋರುತ್ತದೆ. ಹಾಗಾಗಿ, ಒಂದು ಅತಿ-ಆಕ್ರಮಣಕಾರಿ ನಿಲುವನ್ನು ತೆಗೆದುಕೊಳ್ಳುವ ಮೂಲಕ ಪಾಶ್ಚಾತ್ಯ ಶಕ್ತಿಗಳು ಈ ಬದಲಾವಣೆಯನ್ನು ತಪ್ಪಿಸುವ ಹತಾಶ ಪ್ರಯತ್ನದಲ್ಲಿ ತೊಡಗಿವೆ. ಪಾಶ್ಚಾತ್ಯ ಶಕ್ತಿಗಳ ಪ್ರಾಬಲ್ಯವು ಅವನತಿ ಹೊಂದುತ್ತಿರುವ ಸಮಯದಲ್ಲೇ ಚೀನಾ ಮತ್ತು ರಷ್ಯಾ ದೇಶಗಳು ಅಧಿಕಾರದ ಪರ್ಯಾಯ ಕೇಂದ್ರಗಳಾಗಿ ಹೊರಹೊಮ್ಮುತ್ತಿರುವ ಸಂಗತಿ ಮತ್ತು ಜಾಗತಿಕ ಬದಲಾವಣೆಗಳ ಸಂಭವನೀಯತೆಯ ಭೀತಿಯು ಸ್ಕ್ಯಾಂಡಿನೇವಿಯನ್ ದೇಶಗಳನ್ನೂ ಒಳಗೊಂಡಂತೆ, ಪಾಶ್ಚಾತ್ಯ ದೇಶಗಳನ್ನು ಹಿಂದೆಂದೂ ಕಂಡರಿಯದ ರೀತಿಯಲ್ಲಿ ಒಟ್ಟಿಗೆ ತಂದಿದೆ. ಆದ್ದರಿಂದ, ಸ್ಕ್ಯಾಂಡಿನೇವಿಯನ್ ದೇಶಗಳ ನಿಲುವಿನ ಬದಲಾವಣೆಯು, ರಷ್ಯಾದ ಅತಿ-ಆಕ್ರಮಣಶೀಲತೆಯನ್ನು ವ್ಯಕ್ತಪಡಿಸುವುದರ ಬದಲಾಗಿ, ಸುದೀರ್ಘ ಆರ್ಥಿಕ ಬಿಕ್ಕಟ್ಟಿನಲ್ಲಿ ಮುಳುಗಿರುವಾಗ ತಮ್ಮ ಅಧಿನಾಯಕತ್ವಕ್ಕೆ ಬೆದರಿಕೆ ಎದುರಾದ ಪರಿಸ್ಥಿತಿಯಲ್ಲಿ, ಪಾಶ್ಚಾತ್ಯ ಶಕ್ತಿಗಳ ಅತಿರೇಕದ ಆಕ್ರಮಣಶೀಲತೆಯ ಸಂಕೇತವಾಗಿದೆ.

13,800 ಪ್ರಾಥಮಿಕ ಶಾಲೆಗಳನ್ನು ಮುಚ್ಚುವ ಸರಕಾರದ ನಿರ್ಧಾರ-ಸಿಪಿಐ(ಎಂ) ತೀವ್ರ ವಿರೋಧ

ಕರ್ನಾಟಕ ಸರಕಾರ ರಾಜ್ಯದಾದ್ಯಂತ 13,800 ಪ್ರಾಥಮಿಕ ಶಾಲೆಗಳನ್ನು ಮುಚ್ಚುವ ನಿರ್ಧಾರ ಮಾಡಿರುವುದು ಬಡವರ ಹಾಗೂ ದಲಿತರ ಮಕ್ಕಳಿಗೆ ಶಿಕ್ಷಣವನ್ನು ವಂಚಿಸುವ ಮತ್ತು ಕನ್ನಡ ವಿರೋಧಿ ನಿಲುಮೆಯಾಗಿದೆಯೆಂದು, ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸವಾದಿ) ರಾಜ್ಯ ಸಮಿತಿಯು ಬಲವಾಗಿ ಖಂಡಿಸುತ್ತದೆ. ಮತ್ತು ಈ ತಕ್ಷಣವೇ ಪ್ರಾಥಮಿಕ ಶಾಲೆಗಳನ್ನು ಮುಚ್ಚುವ ನಿರ್ಧಾರವನ್ನು ಹಿಂಪಡೆಯಬೇಕೆಂದು ಮುಖ್ಯಮಂತ್ರಿಗಳನ್ನು ಬಲವಾಗಿ ಒತ್ತಾಯಿಸಿದೆ.

ರಾಜ್ಯದಲ್ಲಿ ಕನ್ನಡ ಶಾಲೆಗಳು ಮುಚ್ಚುವಂತಹ ದುಸ್ಥಿತಿಗೆ ಒಕ್ಕೂಟ ಹಾಗೂ ರಾಜ್ಯ ಸರಕಾರಗಳೇ ನೇರ ಹೊಣೆಗಾರರಾಗಿವೆ.

ಶಾಲೆಗೆ ಬರ ಬೇಕಾದ ಮಕ್ಕಳು ಬರದೇ ಇರುವುದಕ್ಕೆ ಕಾರಣ ಪ್ರಾಥಮಿಕ ಶಾಲೆಗಳು ಮಕ್ಕಳನ್ನು ಆಕರ್ಶಿಸುತ್ತಿಲ್ಲ. ಅಂತಹ ಆಕರ್ಷಣೀಯ ಶೈಕ್ಷಣಿಕ ಕೇಂದ್ರಗಳನ್ನಾಗಿ ಅವುಗಳನ್ನು ಸಾಕಷ್ಟು ಅನುದಾನ ಒದಗಿಸಿ ಮೇಲ್ದರ್ಜೆಗೆ ಏರಿಸುವ ಅಗತ್ಯ ಕ್ರಮಗಳನ್ನು ಅನುಸರಿಸದೇ ಉಪೇಕ್ಷೆ ಮಾಡಿ, ನಾಯಿಕೊಡೆಗಳಂತೆ ಎದ್ದಿರುವ ಖಾಸಗೀ ಶಿಕ್ಷಣ ಸಂಸ್ಥೆಗಳ ಬೆಳವಣಿಗೆಗೆ ನೆರವಾಗುತ್ತಿರುವುದು ಪ್ರಮುಖ ಕಾರಣವಾಗುತ್ತಿದೆ.

ಪಕ್ಕದ ಕೇರಳ ರಾಜ್ಯದಲ್ಲಿ ಶಾಲೆಗಳ ಗುಣಮಟ್ಟವನ್ನು ವ್ಯಾಪಕವಾಗಿ ಹೆಚ್ಚಿಸಿರುವುದರಿಂದ, ಸಾವಿರಾರು ಖಾಸಗೀ ಶಿಕ್ಷಣ ಸಂಸ್ಥೆಗಳು ವಿದ್ಯಾರ್ಥಿಗಳಿಲ್ಲದೆ ಮುಚ್ಚುವಂತಾಗಿ, ಅಲ್ಲಿನ ಲಕ್ಷಾಂತರ ಮಕ್ಕಳು ಸಾರ್ವಜನಿಕ ಶಾಲೆಗಳಿಗೆ ವಾಪಾಸು ಬಂದಿರುವುದು ನಮ್ಮ ಕಣ್ಣ ಮುಂದಿದೆ.

ದೆಹಲಿ ಸರಕಾರ ನಡೆಸುವ ಶಾಲೆಗಳು ಅಂತರಾಷ್ಟ್ರೀಯ ಗುಣಮಟ್ಟದ ಶಾಲೆಗಳೆಂದು ಸ್ವತಃ ಪ್ರಧಾನ ಮಂತ್ರಿಗಳು ಜಗತ್ತಿಗೆ ಪರಿಚಯಿಸಿದ್ದಿದೆ.

ದೇಶದ ಅನುಭವ ಹೀಗಿರುವಾಗ, ಕರ್ನಾಟಕ ಸರಕಾರ ಶಿಕ್ಷಣವನ್ನು ಖಾಸಗೀಕರಿಸುವ ಮತ್ತು ಕೋಮುವಾದಿ ಕರಿಸುವ ಹೊಸ ರಾಷ್ಟ್ರೀಯ ಶಿಕ್ಷಣ ನೀತಿ ಹಾಗೂ ಬಡವರು ಹಾಗೂ ಕನ್ನಡ ವಿರೋಧಿಯಾದ ನಿಲುಮೆಗಳನ್ನು ಕೈಬಿಟ್ಟು ಸರಕಾರಿ ಶಾಲೆಗಳು ವಿದ್ಯಾರ್ಥಿಗಳನ್ನು ಆಕರ್ಷಿಸುವಂತಹ ಶೈಕ್ಷಣಿಕ ಕೇಂದ್ರಗಳನ್ನಾಗಿ ಮೇಲ್ದರ್ಜೆಗೇರಿಸಲು ಅಗತ್ಯ ಬಜೆಟ್ ಒದಗಿಸಿ ಯೋಜಿತ ಕ್ರಮಗಳಿಗೆ ಮುಂದಾಗಬೇಕೆಂದು ಸಿಪಿಐ(ಎಂ) ವಿವರಿಸಿದೆ.


ಝೀ ವಾಹಿನಿಯಲ್ಲಿ ಅಂತರ್ ಕಲಹ ಮತ್ತೊಂದು ಕೂಗುಮಾರಿ ವಾಹಿನಿಗೆ ಹಾದಿ

ಪುಟ 6 ರಿಂದ

ಗುಟ್ಟಿನ ಮಾತೇನಲ್ಲ. ಪ್ರಜಾತಂತ್ರ ವ್ಯವಸ್ಥೆಯ ಒಂದು ಪ್ರಮುಖ ಅಂಗವಾಗಿ ಸಾರ್ವಜನಿಕರ ನಡುವೆ ಸದಾ ಜಾಗೃತಾವಸ್ಥೆಯಲ್ಲಿರುವ ಒಂದು ಸಂಸ್ಥೆಯಾಗಿ ಮಾಧ್ಯಮವೂ ಮುಖ್ಯವಾಗುತ್ತದೆ. ಆಡಳಿತಾರೂಢ ಪಕ್ಷಗಳು ಈ ಮಾಧ್ಯಮಗಳ ಮೂಲಕ, ವಾಹಿನಿಗಳ ಮೂಲಕ ತಮ್ಮದೇ ಆದ ಪ್ರಭಾವಿ ವಲಯವನ್ನು ಸೃಷ್ಟಿಸಿಕೊಳ್ಳಲು ಸದಾ ಹಾತೊರೆಯುತ್ತಿರುತ್ತವೆ. ಮುದ್ರಣ ಮಾಧ್ಯಮಗಳೇ ಪ್ರಧಾನವಾಗಿದ್ದ ಸಂದರ್ಭದಲ್ಲೂ ಇದನ್ನು ಕಾಣಬಹುದಿತ್ತು. ವಿದ್ಯುನ್ಮಾನ ಮಾಧ್ಯಮಗಳು ದೇಶದ ಮೂಲೆ ಮೂಲೆಗೂ, ಕಟ್ಟಕಡೆಯ ವ್ಯಕ್ತಿಯವರೆಗೂ ತಲುಪುವ ಸಾಮರ್ಥ್ಯ ಹೊಂದಿರುವುದರಿಂದ ಆಡಳಿತಾರೂಢ ಪಕ್ಷಗಳು, ಮಾಧ್ಯಮಗಳನ್ನು ತಮ್ಮ ಆಡಳಿತ ನೀತಿಗಳ ವಾಹಕಗಳಾಗಿ ಬಳಸಿಕೊಳ್ಳುತ್ತವೆ. ಹಿಂದಿನ ಕಾಂಗ್ರೆಸ್ ಸರ್ಕಾರಗಳೂ ಇದನ್ನು ಮಾಡುತ್ತಲೇ ಬಂದಿವೆ. ಬಿಜೆಪಿ ಸರ್ಕಾರ ಈ ನಿಟ್ಟಿನಲ್ಲಿ ಒಂದು ಹೆಜ್ಜೆ ಮುಂದಿದೆ.

ಇದರೊಟ್ಟಿಗೇ ನವ ಉದಾರವಾದ ಮತ್ತು ಜಾಗತೀಕರಣದ ಆರ್ಥಿಕ ನೀತಿಗಳು ದೇಶದಲ್ಲಿ ಸೃಷ್ಟಿಸುತ್ತಿರುವ ಜನಾಕ್ರೋಶ ಮತ್ತು ಜನಸಾಮಾನ್ಯರ ನಡುವೆ ಸೃಷ್ಟಿಯಾಗುತ್ತಿರುವ ಹತಾಶೆಯನ್ನು ನಿವಾರಿಸುವ ನಿಟ್ಟಿನಲ್ಲಿ, ಆಡಳಿತ ನೀತಿಗಳ ಪರವಾದ ಸಾರ್ವಜನಿಕ ಅಭಿಪ್ರಾಯವನ್ನು ಉತ್ಪಾದಿಸುವಲ್ಲಿ ವಿದ್ಯುನ್ಮಾನ ಮಾಧ್ಯಮಗಳು ಪ್ರಧಾನ ಪಾತ್ರ ವಹಿಸುತ್ತವೆ. ಟಿವಿ ವಾಹಿನಿಗಳಲ್ಲಿ ನಡೆಯುವ ಏಕಮುಖಿ ಚರ್ಚೆಗಳು ಈ ನಿಟ್ಟಿನಲ್ಲಿ ಅತ್ಯಂತ ಪರಿಣಾಮಕಾರಿಯಾಗಿ ಕಂಡುಬರುತ್ತವೆ. ಹಾಗಾಗಿ ಮಾರುಕಟ್ಟೆ ವ್ಯವಸ್ಥೆ ಮತ್ತು ಕಾರ್ಪೋರೇಟ್ ಔದ್ಯಮಿಕ ಹಿತಾಸಕ್ತಿಗಳಿಗೆ ವಿದ್ಯುನ್ಮಾನ ಮಾಧ್ಯಮಗಳು ಒಂದು ಪ್ರಬಲ ವೇದಿಕೆಗಳೂ ಆಗುತ್ತವೆ. ಡಿಜಿಟಲ್ ಯುಗದಲ್ಲಿ ದೇಶದ ಅರ್ಥವ್ಯವಸ್ಥೆ ಹೆಚ್ಚು ಹೆಚ್ಚು ಕಾರ್ಪೋರೇಟ್ ಮಾರುಕಟ್ಟೆ ಕೇಂದ್ರಿತವಾಗುತ್ತಿರುವುದರಿಂದ ಆಳುವ ವರ್ಗಗಳಿಗೂ ಈ ವೇದಿಕೆಗಳು ಅಪ್ಯಾಯಮಾನವಾಗಿ ಕಾಣುತ್ತವೆ.

ಸುಧೀರ್ ಚೌಧರಿ ಬಹುಶಃ ಇಂತಹುದೇ ಒಂದು ಹೊಸ ವೇದಿಕೆಯನ್ನು ದೇಶದ ಜನತೆಗೆ ಸಮರ್ಪಿಸಲಿದ್ದಾರೆ. ವಸ್ತುನಿಷ್ಠ ವರದಿಗಾರಿಕೆ, ಜನಪರ ದನಿಯನ್ನು ಬಿಂಬಿಸುವ ಧೋರಣೆ ಮತ್ತು ಜನಸಮುದಾಯಗಳ ನಿತ್ಯ ಬದುಕಿನ ಬವಣೆಗಳನ್ನು ಬಿಂಬಿಸುವ ಜನೋಪಯೋಗಿ ವಿಧಾನಗಳಿಗಿಂತಲೂ ಮಿಗಿಲಾಗಿ, ಆಳುವ ವರ್ಗಗಳ ಆಡಳಿತ ನೀತಿಗಳನ್ನು ಜನರ ನಡುವೆ ಜನಪ್ರಿಯಗೊಳಿಸುವ ನಿಟ್ಟಿನಲ್ಲಿ ಈ ವಾಹಿನಿಗಳು ಕಾರ್ಯನಿರ್ವಹಿಸುತ್ತವೆ. ತಮ್ಮ ಕೂಗುಮಾರಿ ಧೋರಣೆಗೆ ಖ್ಯಾತಿ ಪಡೆದಿರುವ ಸುಧೀರ್ ಚೌಧರಿ ಬಹುಶಃ ತಮ್ಮ ಭವಿಷ್ಯದ ಯೋಜನೆಯಲ್ಲಿ ಯಶಸ್ಸುಗಳಿಸಲೂ ಇದೇ ಧೋರಣೆ ನೆರವಾಗುತ್ತದೆ. ಕಾರ್ಪೋರೇಟ್ ಬಂಡವಾಳ ಸ್ನೇಹಿ ಸರ್ಕಾರ ಮತ್ತು ಮಾರುಕಟ್ಟೆ ಸ್ನೇಹಿ ಮಾಧ್ಯಮ ಜಂಟಿಯಾಗಿ ನವ ಉದಾರವಾದವನ್ನು ತಳಮಟ್ಟದವರೆಗೂ ಪರಿಣಾಮಕಾರಿಯಾಗಿ ವಿಸ್ತರಿಸಲು ನೆರವಾಗುವುದನ್ನು ಈ ಸಂದರ್ಭದಲ್ಲಿ ಗಮನಿಸಬೇಕಾಗುತ್ತದೆ. ಬಹುಶಃ ಸುಧೀರ್ ಚೌಧರಿ ಆರಂಭಿಸಲಿರುವ ಹೊಸ ವಾಹಿನಿ ಈ ಸಾಲಿಗೆ ಸೇರ್ಪಡೆಯಾಗಲಿರುವ ಮತ್ತೊಂದು ವೇದಿಕೆಯಾಗಲಿದೆ. ಸುಧೀರ್ ಚೌಧರಿ ಸ್ವತಃ ಕಾರ್ಪೋರೇಟ್ ರೂಪದಲ್ಲಿ ಹೊರಹೊಮ್ಮಲಿದ್ದಾರೋ ಅಥವಾ ಮತ್ತೊಂದು ಉದ್ದಿಮೆಯ ಭಾಗವಾಗಿ ತಮ್ಮ ವಾಹಿನಿಯ ಸಾರಥ್ಯ ವಹಿಸುವರೋ ಕಾದುನೋಡಬೇಕಿದೆ.



ಜನರ ಜೀವನೋಪಾಯಗಳ ಮೇಲೆ ಮತ್ತಷ್ಟು ಏಟುಗಳು


ಪುಟ 11 ರಿಂದ



ಶಿಕ್ಷಣದ ಮೇಲಿನ ದಾಳಿಗಳು

ಸಾಂಕ್ರಾಮಿಕ ಸಮಯದಲ್ಲಿ ನಿರ್ಬಂಧಗಳನ್ನು ಬಳಸಿಕೊಂಡು ರಾಷ್ಟ್ರೀಯ ಶಿಕ್ಷಣ ನೀತಿ, 2020 ರ ಆಕ್ರಮಣಕಾರಿ ಅನ್ವೇಷಣೆ, ಜೊತೆಗೆ ಆನ್‌ಲೈನ್ ಶಿಕ್ಷಣವನ್ನು ಪರಿಚಯಿಸುವ ಎಲ್ಲಾ ಪ್ರಯತ್ನಗಳು ಹಾನಿಯನ್ನುಂಟುಮಾಡುತ್ತಿವೆ. ಲಕ್ಷಗಟ್ಟಲೆ ಶಾಲೆ ಗಳನ್ನು ಮುಚ್ಚಲಾಗಿದೆ ಮತ್ತು ಕಾಲೇಜು ಮತ್ತು ವಿಶ್ವವಿದ್ಯಾನಿಲಯ ಹಂತಗಳಲ್ಲಿ ನಡುವೆಯೇ ಬಿಟ್ಟು ಬಿಡುವವರ ಸಂಖ್ಯೆಗಳು ಅಪಾಯಕಾರಿ ಪ್ರಮಾಣದಲ್ಲಿ ಬೆಳೆಯುತ್ತಿವೆ. ಶಿಕ್ಷಣದ ಜಾತ್ಯತೀತ ಮತ್ತು ವೈಜ್ಞಾನಿಕ ವಿಷಯದ ವಿರುದ್ಧ ಅಸಹ್ಯಕರ ಆಕ್ರಮಣಕಾರಿ ಹಲ್ಲೆ ನಡೆಯುತ್ತಿದೆ.

ಆದಿವಾಸಿಗಳ ಹಕ್ಕುಗಳ ಮೇಲೆ ದಾಳಿ




ಅರಣ್ಯ ಸಂರಕ್ಷಣಾ ಕಾಯ್ದೆಯಡಿ ನಿಯಮಗಳನ್ನು ತಿದ್ದುಪಡಿ ಮಾಡುವ ಮೂಲಕ ಮೋದಿ ಸರ್ಕಾರವು ಬುಡಕಟ್ಟು ಹಕ್ಕುಗಳ ಮೇಲೆ ಕೆಟ್ಟ ದಾಳಿ ನಡೆಸಿದೆ. ಈ ತಿದ್ದುಪಡಿಗಳು ಖಾಸಗಿ ಕಾರ್ಪೊರೇಟ್‌ಗಳಿಗೆ ತಮ್ಮ ಲಾಭಗಳನ್ನು ಗರಿಷ್ಟಗೊಳಿಸಿಕೊಳ್ಳುವುದಕ್ಕಾಗಿ ಭಾರತದ ಅರಣ್ಯಗಳನ್ನು ಪ್ರವೇಶಿಸಲು ಮತ್ತು ನಿಯಂತ್ರಿಸಲು ಅನುಕೂಲ ಮಾಡಿಕೊಡುವ ಗುರಿಯನ್ನು ಹೊಂದಿವೆ. ಈ ನಿಯಮಗಳು ಗ್ರಾಮ ಸಭೆಗಳು, ಬುಡಕಟ್ಟು ಸಮುದಾಯಗಳು ಮತ್ತು ಇತರ ಪಾರಂಪರಿಕ ಅರಣ್ಯ ನಿವಾಸಿಗಳ ಹಕ್ಕುಗಳನ್ನು ನಿರ್ಮೂಲಗೊಳಿಸುತ್ತವೆ. ಅವರ ಪೂರ್ವಾನುಮತಿಯು ಅರಣ್ಯ ಭೂಮಿಯನ್ನು ಬೇರೆ ಉದ್ದೇಶಗಳತ್ತ ತಿರುಗಿಸಲು ಕಡ್ಡಾಯವಾಗಿತ್ತು. ಇದು ಬುಡಕಟ್ಟು ಸಮುದಾಯಗಳಿಗೆ ನೀಡಿರುವ ಸಾಂವಿಧಾನಿಕ ಖಾತರಿಗಳ ಸ್ಪಷ್ಟ ಉಲ್ಲಂಘನೆಯಾಗಿದೆ. ಕೂಡಲೇ ಈ ನಿಯಮಗಳನ್ನು ಹಿಂಪಡೆಯಬೇಕು.

ನಾಗರಿಕ ಸ್ವಾತಂತ್ರ್ಯಗಳ ಮೇಲೆ ಹೆಚ್ಚುತ್ತಿರುವ ಆಕ್ರಮಣಗಳು

ತೀಸ್ತಾ ಸೆಟಲ್ವಾಡ್, ಜುಬೇರ್ ಮೊಹಮ್ಮದ್ ಮತ್ತು ಇತರರ ಮೇಲಿನ ಪ್ರಕರಣಗಳನ್ನು ತಕ್ಷಣವೇ ಹಿಂಪಡೆಯಬೇಕು ಎಂದು ಪೊಲಿಟ್ ಬ್ಯೂರೋ ಒತ್ತಾಯಿಸಿದೆ. ಭಿನ್ನಾಭಿಪ್ರಾಯವನ್ನು ಹತ್ತಿಕ್ಕುವ ಗುರಿಯಿಂದ ಈ ಬಂಧನಗಳು ನಡೆಯುತ್ತಿವೆ. ದ್ವೇಷ ಹೊತ್ತಿಸುವ ಮತ್ತು ಹಿಂಸಾಚಾರದ ವಾತಾವರಣವನ್ನು ಸೃಷ್ಟಿಸುವ ಹಿಂದುತ್ವದ ಕೋಮುವಾದಿ ಸಂಘಟನೆಗಳು ಪ್ರಚಾರ ಮಾಡುವ ಸುಳ್ಳು ಸುದ್ದಿಗಳನ್ನು ಬಯಲಿಗೆಳೆದು ಜನರ ಮುಂದೆ ಸತ್ಯವನ್ನು ತರುವವರು ಹೆಚ್ಚೆಚ್ಚಾಗಿ ಬಿಜೆಪಿ ಸರ್ಕಾರಗಳ ಕೆಂಗಣ್ಣಿಗೆ ಗುರಿಯಾಗುತ್ತಿದ್ದಾರೆ. ದ್ವೇಷ ಭಾಷಣಗಳನ್ನು ಪ್ರಚಾರ ಮಾಡುವವರ ವಿರುದ್ಧ ಕ್ರಮ ಕೈಗೊಳ್ಳುವುದಿಲ್ಲ, ಆದರೆ ಅವನ್ನು ವಿರೋಧಿಸುವವರ ವಿರುದ್ಧ ಕಿರುಕುಳ ಮತ್ತು ಕಾನೂನು ಕ್ರಮ ಜರುಗಿಸಲಾಗುತ್ತದೆ. ದ್ವೇಷ ಪ್ರಚೋದಕರಿಗೆ ಈ ಅಧಿಕೃತ ಕೃಪಾಪೋಷಣೆ ನಿಲ್ಲಬೇಕು.

ವಿನಾಶಕಾರಿ ಪ್ರವಾಹಗಳು



ದೇಶದ ವಿವಿಧ ಭಾಗಗಳಲ್ಲಿ ಪ್ರವಾಹದಿಂದ ಉಂಟಾದ ಹಾನಿಯ ಬಗ್ಗೆ ಪೊಲಿಟ್‌ಬ್ಯೂರೋ ತನ್ನ ತೀವ್ರ ಕಳವಳ ವ್ಯಕ್ತಪಡಿಸಿದೆ. ಅಸ್ಸಾಂನಲ್ಲಿ ಪ್ರವಾಹವು ವ್ಯಾಪಕ ಹಾನಿಯನ್ನುಂಟುಮಾಡಿದೆ, ಅನೇಕ ಜೀವಗಳನ್ನು ಬಲಿ ತೆಗೆದುಕೊಂಡಿದೆ, ಆಸ್ತಿಪಾಸ್ತಿಗಳನ್ನು ನಾಶಪಡಿಸಿದೆ ಮತ್ತು ಲಕ್ಷಗಟ್ಟಲೆ ಜನರನ್ನು ಸ್ಥಳಾಂತರಿಸಿದೆ. ಅದೇ ರೀತಿ ತೆಲಂಗಾಣ, ಮಹಾರಾಷ್ಟ್ರ, ಗುಜರಾತ್ ಮತ್ತು ಇತರೆಡೆಗಳಲ್ಲಿ ಪ್ರವಾಹವು ಹಾನಿಯನ್ನುಂಟುಮಾಡುತ್ತಿದೆ. ಕೇಂದ್ರ ಸರ್ಕಾರವು ಪೀಡಿತ ರಾಜ್ಯಗಳಿಗೆ ಅಗತ್ಯ ಸಂಪನ್ಮೂಲಗಳು ಮತ್ತು ಸಾಮಗ್ರಿಗಳನ್ನು ತಕ್ಷಣವೇ ಬಿಡುಗಡೆ ಮಾಡಬೇಕು.

ಆಧಾರ ರಹಿತ ಆರೋಪಗಳಿಗೆ ಖಂಡನೆ

ಭಾರತದ ಮಾಜಿ ಉಪರಾಷ್ಟ್ರಪತಿ ಶ್ರೀ ಹಮೀದ್ ಅನ್ಸಾರಿಯವರ ಮೇಲೆ ಆಡಳಿತಾರೂಢ ಬಿಜೆಪಿಯವರು ಮಾಡಿರುವ ಆಧಾರಗಳಿಲ್ಲದ ಮತ್ತು ಬುಡಹೀನ ಆರೋಪಗಳನ್ನು ಪೊಲಿಟ್ ಬ್ಯೂರೋ ಬಲವಾಗಿ ಖಂಡಿಸಿದೆ. ಶ್ರೀ ಅನ್ಸಾರಿಯವರು ಜಾಗತಿಕವಾಗಿ ಗೌರವಾನ್ವಿತ ರಾಜತಾಂತ್ರಿಕರು, ವಿದ್ವಾಂಸರು ಮತ್ತು ಕೇಂದ್ರ ಸರ್ಕಾರವು ತಮಗೆ ನೀಡಿದ ಪ್ರತಿಯೊಂದು ಜವಾಬ್ದಾರಿಯಲ್ಲಿಯೂ ದೇಶಪ್ರೇಮದ ದೋಷರಹಿತ ಸೇವೆ ಸಲ್ಲಿಸಿದ ದಾಖಲೆ ಹೊಂದಿರುವವರು.

ಶ್ರೀ ಅನ್ಸಾರಿಯವರ ಮೇಲೆ ಅವರ ಅಸ್ಮಿತೆ ಮತ್ತು ಭಾರತೀಯ ಸಂವಿಧಾನ ಮತ್ತು ಜಾತ್ಯತೀತ ಪ್ರಜಾಸತ್ತಾತ್ಮಕ ಗಣರಾಜ್ಯಕ್ಕೆ ಅವರ ದೃಢವಾದ ಬದ್ಧತೆಯ ಕಾರಣದಿಂದಾಗಿ ಗುರಿಯಿಟ್ಟಿರುವುದನ್ನು ಒಪ್ಪಲು ಸಾಧ್ಯವಿಲ್ಲ.

ಕೇರಳದ ಬೆಳವಣಿಗೆಗಳು

ಕೇಂದ್ರೀಯ ಸಂಸ್ಥೆಗಳನ್ನು ದುರುಪಯೋಗಪಡಿಸಿಕೊಂಡು ಕೇರಳದಲ್ಲಿ ಎಲ್‌ಡಿಎಫ್ ಸರಕಾರವನ್ನು ಅಸ್ಥಿರಗೊಳಿಸುವ ಪ್ರಯತ್ನವನ್ನು ಪೊಲಿಟ್ ಬ್ಯೂರೋ ಬಲವಾಗಿ ಖಂಡಿಸಿದೆ. 2021 ರಲ್ಲಿ ಮತ್ತೊಮ್ಮೆ ಇನ್ನೂ ದೊಡ್ಡ ಜನಾದೇಶದೊಂದಿಗೆ ಸರ್ಕಾರ ರಚಿಸುವ ಮೂಲಕ ಕೇರಳದ ಜನರ ವಿಶ್ವಾಸ ಗಳಿಸಿದ ಎಲ್‌ಡಿಎಫ್ ಸರ್ಕಾರದ ವಿರುದ್ಧ ಪ್ರತಿಪಕ್ಷ ಕಾಂಗ್ರೆಸ್ ಪಕ್ಷ ಮತ್ತು ಬಿಜೆಪಿ ತಾಳಮೇಳದಿಂದ ಕಾರ್ಯನಿರ್ವಹಿಸುತ್ತಿವೆ.



ಅಮ್ಮನ ಪ್ರತಿಜ್ಞೆ: "ನನ್ನ ದೂರು ಕೇಳಿ–ಮಹಿಳೆಯರು ನ್ಯಾಯಾಲಯದ ಕದ ತಟ್ಟಿದಾಗ

ಪುಟ 16 ರಿಂದ

ವಜಾ ಆಗಿದ್ದರೂ ತಾಯಿಗೆ ಸಲ್ಲಬೇಕಾದ ಪರಿಹಾರ ನಿರಾಕರಿಸುವಂತಿಲ್ಲ ಎಂದರು.

ನ್ಯಾಯಾಲಯದ ಆದೇಶ:

ಕ್ರಿಮಿನಲ್ ದಾವೆಯ ವಿಚಾರಣೆಯಲ್ಲಿ ಆರೋಪಿಗಳು ಖುಲಾಸೆ ಆಗಿದ್ದು

ಪ್ರಾಸಿಕ್ಯೂಷನ್‌ನವರು ಆರೋಪವನ್ನು ಸಂದೇಹಕ್ಕೆ ಆಸ್ಪದ ಇಲ್ಲದಂತೆ ಸಾಬೀತು

ಪಡಿಸಲು ವಿಫಲವಾಯಿತು ಎಂಬ ಕಾರಣಕ್ಕೇ ಹೊರತು, ನ್ಯಾಯಾಲಯಕ್ಕೆ

ಆರೋಪದ ಸತ್ಯಾಸತ್ಯತೆ ಬಗ್ಗೆ ಸಂಶಯಗಳಿದ್ದವು ಎಂಬ ಕಾರಣಕ್ಕಲ್ಲ.

ಹಾಗಾಗಿ ಸಿವಿಲ್ ನ್ಯಾಯಾಲಯದ ವಿಚಾರಣೆ ಕ್ರಿಮಿನಲ್ ನ್ಯಾಯಾಲಯದ

ತೀರ್ಪುಗಳಿಂದ ಮುಕ್ತವಾಗಿರುತ್ತದೆ. ಪರಿಹಾರದಂತಹ ವ್ಯಾಜ್ಯ ಆಲಿಸುವಾಗ

ಕ್ರಿಮಿನಲ್ ನ್ಯಾಯಾಲಯದ ತೀರ್ಪನ್ನು ಪರಿಗಣಿಸಿ ಅದರ ಆಧಾರದಂತೆ

ತೀರ್ಮಾನ ಮಾಡಬೇಕಿಲ್ಲ.

ಮುಂದುವರೆದು ಜಡ್ಜ್ ಹೇಳಿದ್ದು:

ಪರಿಹಾರದ ಪ್ರಶ್ನೆ ಆರೋಪಿಯ ಮೇಲಿದ್ದ ಆರೋಪ ಸಾಬೀತಾಯ್ತು ಎಂಬ

ಕಾರಣಕ್ಕೆ ಹುಟ್ಟಿಕೊಂಡಿದ್ದಲ್ಲ. ಬದಲಿಗೆ, ಪೊಲೀಸರಿಂದ ಆ ಸಾವು ಆಯ್ತು

ಎಂಬ ಕಾರಣಕ್ಕಾಗಿ ಪರಿಹಾರದ ಪ್ರಶ್ನೆ ಮುನ್ನೆಲೆಗೆ ಬಂದಿದೆ. ಹಾಗಾಗಿ ರಾಜ್ಯ

ಅರ್ಜಿದಾರರಿಗೆ ಪರಿಹಾರ ಕೊಡಬೇಕಿದೆ.

ಐಎಎಸ್ ಅಧಿಕಾರಿ ಶ್ರೀನಿವಾಸನ್ ತಮ್ಮ ವರದಿಯಲ್ಲಿ ಪೊಲೀಸರು ಸೀರಾಳನ್ ಮೇಲೆ ನಡೆಸಿದ್ದ ಹಿಂಸೆಯನ್ನು ವಿವರವಾಗಿ ಉಲ್ಲೇಖಿಸಿದ್ದಾರೆ. ಅದರ ಆಧಾರದ ಮೇಲೆಯೇ ಅವರು ಕ್ರಿಮಿನಲ್ ಪ್ರಕರಣ ದಾಖಲಿಸಿ ವಿಚಾರಣೆ ನಡೆಯಬೇಕೆಂದು ಶಿಫಾರಸ್ಸು ಮಾಡಿದ್ದರು. ಕಾನೂನಿನಂತೆ ಹಾಗೂ ನೈತಿಕವಾಗಿ ಸರಕಾರ ಪರಿಹಾರ ಕೊಡಬೇಕು ಎಂದು ನ್ಯಾ.ಮಿಶ್ರ ಹೇಳಿದ್ದರು. ಅವರು ತಮ್ಮ ಆದೇಶದಲ್ಲಿ ಒಂದು ಲಕ್ಷ ಪರಿಹಾರ ಕೊಡಬೇಕು ಎಂದರು. ಆ ಮೊತ್ತವನ್ನು ಬ್ಯಾಂಕ್‌ನಲ್ಲಿ ಡಿಪಾಸಿಟ್ ಇಟ್ಟು ಬಾಗ್ಗಿಯಮ್‌ಗೆ ಪ್ರತಿ ತಿಂಗಳು ಕನಿಷ್ಠ ಒಂದು ಸಾವಿರ ರೂಪಾಯಿಯ ಮೊತ್ತ ದೊರಕುವಂತೆ ನೋಡಿಕೊಳ್ಳಬೇಕೆಂದು ಆದೇಶಿಸಿದರು. ಆ ತೀರ್ಪು ಬಂದಿದ್ದು 1994ರಲ್ಲಿ. ಆಗ ಆಕೆಗೆ 60 ವಯಸ್ಸು. ಆ ನಂತರ ಆ ಪರಿಹಾರ ಮೊತ್ತ ಕಡಿಮೆ ಆಯ್ತು ಎಂದು ಅವರು ಮತ್ತೊಂದು ಅರ್ಜಿ ಸಲ್ಲಿಸಿದರು. ಆ ಅರ್ಜಿ ನ್ಯಾ.ಎ.ಪಿ.ಶಾ.


ಎದುರು ವಿಚಾರಣೆಗೆ ಬಂದಿತು. ಈ ಬೆಂಚು ಆಗಸ್ಟ್ 11, 2006ರಂದು ತೀರ್ಪು ನೀಡಿತು.

ಬಾಗ್ಗಿಯಮ್ ಮೂಲತಃ ಒಂದು ಲಕ್ಷವಷ್ಟೇ ಕೇಳಿದ್ದರಿಂದ ಅದನ್ನು ಹೆಚ್ಚಿಸಲು ನ್ಯಾಯಾಧೀಶರಿಗೆ ಅವಕಾಶ ಇರಲಿಲ್ಲ. ಆದರೆ 1994ರ ನ್ಯಾ.ಮಿಶ್ರಾ ಅವರ ಆದೇಶವನ್ನು ಸರಕಾರ ಅದುವರೆಗೂ ಜಾರಿ ಮಾಡಿಲ್ಲ ಎಂಬುದನ್ನು ಗಣನೆಗೆ ತೆಗೆದುಕೊಂಡು, ಮೂಲ ಮೊತ್ತವನ್ನು 12 ವರ್ಷಗಳ ಬಡ್ಡಿ ಸಮೇತ ನೀಡಬೇಕೆಂದು ತೀರ್ಪು ನೀಡಿದರು. ಹಾಗಾಗಿ ಅವರಿಗೆ ಒಟ್ಟು 2.2 ಲಕ್ಷ ರೂಪಾಯಿಗಳು ಸಿಗುವಂತಾಯ್ತು. ಮೂವತ್ತು ವರ್ಷಗಳ ಹೋರಾಟ ಕೊನೆಗೂ ಆ ತಾಯಿಗೆ ಜಯ ತಂದು ಕೊಟ್ಟಿತು.

ಮಾಹಿತಿಗಾಗಿ:

* ಬಾಗ್ಗಿಯಮ್ ದುರೈಸ್ವಾಮಿ ವರ್ಸಸ್ ತಮಿಳುನಾಡು ಸರಕಾರ, 1994 (2), ಎಲ್‌ಡಬ್ಲ್ಯೂ(ಸಿಆರ್‌ಎಲ್) 687
* ಬಾಗ್ಗಿಯಮ್ ದುರೈಸ್ವಾಮಿ ವರ್ಸಸ್ ತಮಿಳುನಾಡು ಸರಕಾರ, ಡಬ್ಲ್ಯೂಎ ನಂ. 2005ರ 1929 ದಿನಾಂಕ 11.08.2006

NEW No. MAG(3)/NPP/205/2021-2022
JANASHAKTHI KANNADA VARA PATRIKE JULY 25-31, 2022 Price: Rs. 10/- Date of Publication: 22 JULY 2022 RNI No. KARKAN /2006/17926 Posted on 25-07-2022
"REGISTERD" Postal Reg. No. RNP/KA/BGS/2078/2019-21 Posted at BG PSO, BG - 560026 Licensed to Post without prepayment License No. PMG/BG/WPP-283/2019-21 **Posted at Periodical Rate** - Rs. 2





ಅಮ್ಮನ ಪ್ರತಿಜ್ಞೆ: "ನನ್ನ ದೂರು ಕೇಳಿ–ಮಹಿಳೆಯರು ನ್ಯಾಯಾಲಯದ ಕದ ತಟ್ಟಿದಾಗ"–ಆಯ್ದ ಭಾಗ

ಎನ್.ಕೆ. ವಸಂತರಾಜ್

ತಮಿಳುನಾಡಿನಲ್ಲಿ ವಕೀಲರು ಹಾಗೂ ಹೈಕೋರ್ಟು ನ್ಯಾಯಮೂರ್ತಿ ಆಗಿದ್ದ ನ್ಯಾ.ಕೆ.ಚಂದ್ರು ಅವರ ವಕೀಲ ವೃತ್ತಿಜೀವನದ ಒಂದು ಪ್ರಕರಣ ಆಧಾರಿತ ತಮಿಳು ಚಿತ್ರವೇ 'ಜೈ ಭೀಮ್'. ಈ ಚಿತ್ರದ ಪ್ರಚಾರ ಶುರುವಾದ ಕೂಡಲೇ ಅವರು ದೇಶದ ತುಂಬಾ 'ಜೈ ಭೀಮ್ ಚಂದ್ರು' ಎಂದೇ ಪ್ರಸಿದ್ಧರಾದರು. ಆದರೆ ಅದಕ್ಕೂ ಎಷ್ಟೋ ಮೊದಲು ಅವರು ತಮ್ಮ ಕಾಲದಲ್ಲಿ 96 ಸಾವಿರಕ್ಕೂ ಹೆಚ್ಚು ಪ್ರಕರಣಗಳಿಗೆ ತೀರ್ಪು ನೀಡಿ ದಾಖಲೆ ಸ್ಥಾಪಿಸಿ ನ್ಯಾಯಾಂಗದ ಹೊಣೆಗಾರಿಕೆ ನಿಭಾಯಿಸುವುದು ಹೇಗೆ ಎಂದು ತೋರಿಸಿಕೊಟ್ಟವರು. 'ಪ್ರಾಮಾಣಿಕ ನ್ಯಾಯಾಧೀಶ'ರಾಗಿ ಇರುವುದೆಂದರೆ ಏನು ಎಂಬುದನ್ನೂ ತೋರಿಸಿದವರು. 'ಪ್ರತಿಯೊಬ್ಬರಿಗೂ ನ್ಯಾಯ' ಎಂಬ ಧ್ಯೇಯಕ್ಕೆ ಬದ್ಧರಾಗಿ ಬದುಕಿದ ಅವರ ಹಲವು ಪ್ರಮುಖ ತೀರ್ಪುಗಳು ಹಲವು ಜನರ ಜೀವನದಲ್ಲಿ ಮಹತ್ತರ ಬದಲಾವಣೆ ತಂದಿವೆ. ವಿದ್ಯಾರ್ಥಿ ಚಳವಳಿ ಮತ್ತು ಸಿಪಿಐ(ಎಂ) ಪಕ್ಷದ ಕಾರ್ಯಕರ್ತರಾಗಿ ಸಾರ್ವಜನಿಕ ಜೀವನ ಆರಂಭಿಸಿದ ಚಂದ್ರು ಮುಂದೆ ಜನಪರ ವಕೀಲರಾಗಿ, ನ್ಯಾಯಮೂರ್ತಿ ಹುದ್ದೆಗೇರಿದವರು.

1970ರ ನಂತರ ಮಹಿಳೆಯರು ನಿಧಾನವಾಗಿ ಕೋರ್ಟ್ ಕದ ತಟ್ಟಲಾರಂಭಿಸಿದರು ಎನ್ನಲಾಗುತ್ತದೆ. ಪ್ರಮುಖವಾಗಿ ನ್ಯಾಯಾಧೀಶರಾಗಿ ಅವರ ವೃತ್ತಿ ಜೀವನದಲ್ಲಿ ಎದುರಾದ, ನ್ಯಾಯಕ್ಕಾಗಿ ನಡೆಸಿದ ಮಹಿಳೆಯರ ಹೋರಾಟದ 20 ಗಮನಾರ್ಹ ಪ್ರಕರಣಗಳ ಕುರಿತು ನ್ಯಾ.ಕೆ.ಚಂದ್ರು ಬರೆದ ಪುಸ್ತಕ 'ಲಿಸನ್ ಟು ಮೈ ಕೇಸ್' ದೇಶದ ಗಮನ ಸೆಳೆಯಿತು. ಇವು ಮಹಿಳೆಯರ ಕಾನೂನು ಹೋರಾಟ ಮಾತ್ರವಾಗಿರಲಿಲ್ಲ. ಈ ಪ್ರಕರಣಗಳು ಲಿಂಗ ತಾರತಮ್ಯ ಮಾತ್ರವಲ್ಲ ಎಲ್ಲ ರೀತಿಯ ಅಸಮಾನತೆ ಕಾರಣಕ್ಕೆ ಘಟಿಸುವ ಹಿಂಸೆ, ಕ್ರೌರ್ಯದ ಸನ್ನಿವೇಶಗಳನ್ನು ನಿರೂಪಿಸುತ್ತವೆ. ಆದರೆ ಸಂತ್ರಸ್ತ ವ್ಯಕ್ತಿಗಳ, ಅವರ ಸಮುದಾಯ ಮತ್ತು ವಕೀಲರ ದೃಢನಿರ್ಧಾರವಿದ್ದರೆ, ನ್ಯಾಯಾಲಯಗಳು ಎಲ್ಲರನ್ನೂ ಒಳಗೊಳ್ಳುವ, ಸೂಕ್ಷ್ಮ ಸಂವೇದನೆ ಇರುವ ಮತ್ತು ಪ್ರಗತಿಪರ ತೀರ್ಪುಗಳನ್ನು ಕೊಡಲು ಸಾಧ್ಯ ಎಂಬ ಭರವಸೆ ಹುಟ್ಟಿಸುವ ಕಥನಗಳನ್ನು ನ್ಯಾ.ಕೆ. ಚಂದ್ರು ದಾಖಲಿಸಿದ್ದಾರೆ. ಆ ಮೂಲಕ ಜನಜಾಗೃತಿ ಮೂಡಿಸುವ ಕಾಯಕ ಕೈಗೆತ್ತಿಕೊಂಡಿದ್ದಾರೆ. ಇದನ್ನು ಕನ್ನಡದಲ್ಲಿಯೇ ಬರೆಯಲಾಗಿದೆ ಎನಿಸುವಂತೆ ಡಾ.ಭಾರತಿದೇವಿ ಪಿ. ಮತ್ತು ಸತೀಶ್ ಜಿ.ಟಿ ಕನ್ನಡಕ್ಕೆ "ನನ್ನ ದೂರು ಕೇಳಿ' ಆಗಿ ಅನುವಾದಿಸಿದ್ದಾರೆ.

ಈ ಪುಸ್ತಕವನ್ನು ಕ್ರಿಯಾ ಮಾಧ್ಯಮ ಪ್ರಕಟಿಸಿದ್ದು ಜುಲೈ 23ರಂದು ಬೆಂಗಳೂರಿನಲ್ಲಿ ನಡೆವ ಕಾರ್ಯಕ್ರಮದಲ್ಲಿ ನ್ಯಾ. ಎಚ್.ಎನ್.ನಾಗಮೋಹನದಾಸ್ ಬಿಡುಗಡೆ ಮಾಡಿದರು. ಇದೇ ಸಮಾರಂಭದಲ್ಲಿ "ಮಹಿಳೆಯರಿಗೆ ನ್ಯಾಯ ಮತ್ತು ನಮ್ಮ ನ್ಯಾಯ ವ್ಯವಸ್ಥೆ ಕುರಿತು ನ್ಯಾ.ಚಂದ್ರು, ನ್ಯಾ.ದಾಸ್ ಮತ್ತು ಹೇಮಲತಾ ಮಹಿಷಿ ಉಪನ್ಯಾಸ ನೀಡುವರು. ಅವರೊಂದಿಗೆ ಮಹಿಳಾ ಚಳವಳಿಯಲ್ಲಿ ತೊಡಗಿರುವ ಚಿಂತಕರು, ಕಾರ್ಯಕರ್ತರು, ವಕೀಲರು ಸಂವಾದ ನಡೆಸಿದರು. ಇಲ್ಲಿರುವ 'ಅಮ್ಮನ ಪ್ರತಿಜ್ಞೆ' ಈ ಸಂದರ್ಭದಲ್ಲಿ ಈ ಪುಸ್ತಕದಲ್ಲಿ ಬರುವ ಒಂದು ಪ್ರಕರಣ ನಿರೂಪಿಸುವ ಆಯ್ದ ಭಾಗ.

ಎ.ಮಂಗೈ ನೇತೃತ್ವದ 'ಮರಪ್ಪಾಚಿ' ಎಂಬ ರಂಗ ಕಲಾವಿದರ ತಂಡ 2013ರ ಏಪ್ರಿಲ್‌ನಲ್ಲಿ ಎರಡು ನಾಟಕಗಳ ಪ್ರದರ್ಶನ ನೀಡಿತು. 'ವಕ್ಕುಮೂಲಮ್ (ತಪ್ಪೊಪ್ಪಿಗೆಗಳು)' ಹಾಗೂ 'ಸುಡಲೈಯಮ್ಮಾಳ್' ಈ ಎರಡೂ ನಾಟಕಗಳನ್ನು ಬರೆದವರು ವಿ. ಗೀತಾ. ತುರ್ತು ಪರಿಸ್ಥಿತಿ ಜಾರಿಯಲ್ಲಿದ್ದಾಗ (1975–77) ತಮಿಳುನಾಡಿನಲ್ಲಿ ನಡೆದ ದೌರ್ಜನ್ಯವೇ ಆ ನಾಟಕಗಳ ವಸ್ತು.

ಆಗ ಉತ್ತರ ಆರ್ಕಾಟ್ ಪ್ರದೇಶದ (ಈಗಿನ ತಿರುವಣ್ಣಾಮಲೈ ಮತ್ತು ವೆಲ್ಲೂರ್ ಜಿಲ್ಲೆಗಳು) ಹಳ್ಳಿಯಲ್ಲಿ ಸುಡಲೈಯಮ್ಮಾಳ್ ಎಂಬ ಒಬ್ಬ ಗಾರ್ಡ್ ಇದ್ದರು. ಅವರು ಸತ್ತವರ ಅಂತ್ಯಸಂಸ್ಕಾರವನ್ನು ಅವರವರ ಸಂಪ್ರದಾಯಕ್ಕೆ ಅನುಗುಣವಾಗಿ ಮಾಡುತ್ತಿದ್ದರು. ಅದೊಂದು ದಿನ ಪೊಲೀಸರು ಯುವಕನೊಬ್ಬನ ಶವ ತಂದರು. ದೇಹದ ತುಂಬಾ ಗಾಯಗಳು. ತುರ್ತಾಗಿ ಆ ದೇಹವನ್ನು ಸುಡಬೇಕು ಅನ್ನುವುದು ಪೊಲೀಸರ ಒತ್ತಾಯ. ಆದರೆ ಆಕೆಯ ತಾಯಿ ಹೃದಯ ಮೃತ ಯುವಕನನ್ನು ಗುರುತಿಸುತ್ತದೆ. ಪೊಲೀಸರ ಒತ್ತಡಗಳಿಗೆ ಮಣಿಯದೆ ಆಕೆ ಅಂತ್ಯ ಸಂಸ್ಕಾರದ ವಿಧಿ ವಿಧಾನಗಳನ್ನು ಮಾಡುತ್ತಾರೆ. ಆ ಸಾವಿನ ಬಗ್ಗೆ ಯಾರಿಗೂ ಹೇಳಬೇಡ ಎಂಬ ಪೊಲೀಸರ ತಾಕೀತಿನ ಹೊರತಾಗಿಯೂ ಆಕೆ ಆ ನಂತರ ಇಡೀ ಘಟನೆಯನ್ನು ವರದಿಗಾರರಿಗೆ ಹೇಳುತ್ತಾರೆ. ಅಲ್ಲಿಗೆ ಆ ನಾಟಕ ಮುಗಿಯುತ್ತದೆ. ರೇವತಿ ಎಂಬ ನಟಿಯ ಮನೋಜ್ಞ ಅಭಿನಯದ ಕಾರಣದಿಂದ ಸುಡಲೈಯಮ್ಮಾಳ್‌ಳ ಕತೆ ಮನ ಮುಟ್ಟುವಂತೆ ಜನರಿಗೆ ತಲುಪಿತ್ತು. ಸುಡಲೈಯಮ್ಮಾಳ್ ಅನ್ನೋದು ಒಂದು ನಾಟಕಕಾರ ಸೃಷ್ಟಿಸಿದ ಪಾತ್ರ. ಆದರೆ ಆಕೆ ನಿರೂಪಿಸಿದ್ದು ಸೀರಾಳನ್ ಎಂಬ ನಿಜ ವ್ಯಕ್ತಿಯ ಕತೆಯನ್ನು. ತುರ್ತುಪರಿಸ್ಥಿತಿ ವೇಳೆಯಲ್ಲಿ ಪೊಲೀಸರ ದೌರ್ಜನ್ಯದ ಕಾರಣ ಪ್ರಾಣ ಕಳೆದುಕೊಂಡವನ ಕತೆ. ಹಾಗೆ ನೋಡಿದರೆ ಸುಡಲೈಯಮ್ಮಾಳ್ ಎಂಬ ಪಾತ್ರ ನಿಜ ಜೀವನದ ಮೂರು ಪಾತ್ರಗಳ ಪ್ರೇರಣೆಯಿಂದ ರೂಪುಗೊಂಡದ್ದು. ಅವರಲ್ಲಿ ಒಬ್ಬರು ಸೀರಾಳನ್ ತಾಯಿ ಬಾಗ್ಗಿಯಂ ದುರೈಸ್ವಾಮಿ. ಆಕೆ ಗೃಹಿಣಿ, ಗಂಡ ದುರೈಸ್ವಾಮಿ ವಿದ್ಯುತ್ ನಿಗಮದಲ್ಲಿ ಉದ್ಯೋಗಿ. ಮಗನ ಸಾವಿನ ನಂತರ ಮೂವತ್ತು ವರ್ಷಗಳ ಕಾಲ ಅವರು ನ್ಯಾಯಕ್ಕಾಗಿ ಹೋರಾಡಿದರು. ಅವರ ಕಾನೂನು ಹೋರಾಟ ಆರಂಭವಾಗಿದ್ದು 1976ರಲ್ಲಿ. ಆಗಸ್ಟ್ 2006ರ ತನಕ ನಡೆಯಿತು.



ಸುಡಲೈಯಮ್ಮಾಳ್ ಪಾತ್ರಕ್ಕೆ ಪ್ರೇರಣೆ ನೀಡಿದ ಇನ್ನೊಂದು ಪಾತ್ರ ಜಯ ವೇಲು. ಸೀರಾಳನ್ ಮೇಲೆ ನಡೆದ ದೌರ್ಜನ್ಯಕ್ಕೆ ಆಕೆ ಪ್ರತ್ಯಕ್ಷ ಸಾಕ್ಷಿ. ಆಕೆ ತಮ್ಮ ಗುಟ್ಟು ರಟ್ಟು ಮಾಡಬಹುದೆಂದು ಹೆದರಿ ಪೊಲೀಸರು ಜಯ ಮತ್ತು ಅವರ ಗಂಡ ವೇಲು ಇಬ್ಬರ ಮೇಲೂ ಸುಳ್ಳು ದೂರು ದಾಖಲಿಸಿ ಜೈಲಿಗೆ ಕಳುಹಿಸಿದರು. ಇದುವರೆಗೂ ಅವರಿಬ್ಬರು ಎಲ್ಲಿದ್ದಾರೆ ಎಂದು ತಿಳಿದಿಲ್ಲ. ಹಾಗೇ ಆ ಪಾತ್ರದ ಹಿಂದಿನ ಮೂರನೇ ಮಹಿಳೆ

ಮೈಥಿಲಿ ಶಿವರಾಮನ್. ಆಕೆ ಹಳ್ಳಿ ಹಳ್ಳಿ ಅಲೆದಾಡಿ ಸೀರಾಳನ್ ಸಾವಿನ ಬಗ್ಗೆ ಮಾಹಿತಿ ಸಂಗ್ರಹಿಸಿದರು. ಜೊತೆಗೆ ಈ ಘಟನೆಯಲ್ಲಿ ನೊಂದವರಿಗೆ ನ್ಯಾಯ ದೊರಕಬೇಕೆಂದು ಪ್ರತಿಭಟಿಸಿದರು. ಅಂದಿನ ರಾಜ್ಯಪಾಲರ ತನಕ ಹೋಗಿ ಮನವಿ ಸಲ್ಲಿಸಿ ಪ್ರಕರಣದ ಬಗ್ಗೆ ತನಿಖೆ ರೆವೆನ್ಯೂ ಬೋರ್ಡ್‌ನ ಸದಸ್ಯರಿಂದ ಆಗಬೇಕೆಂದು ಒತ್ತಾಯಿಸಿದರು.

ಆಕೆಯ ಇಳಿ ವಯಸ್ಸಿನ ಕಾರಣ ಈಗ ಅದೆಲ್ಲವೂ ನೆನಪಿನಲ್ಲಿ ಇಲ್ಲದಿರಬಹುದು. ಆದರೆ ಆಗ ತುರ್ತುಪರಿಸ್ಥಿತಿ ಕಾಲದಲ್ಲಿ ಏನೆಲ್ಲಾ ನಿರ್ಬಂಧಗಳಿದ್ದರೂ, ಮಾಧ್ಯಮದ ಸೆನ್ಸಾರ್ ಜಾರಿಯಲ್ಲಿದ್ದರೂ ಮುಂಬೈನಿಂದ ಪ್ರಕಟವಾಗುತ್ತಿದ್ದ ಎಕನಾಮಿಕ್ ಅಂಡ್ ಪೊಲಿಟಿಕಲ್ ವೀಕ್ಲಿ (24 ಸೆಪ್ಟೆಂಬರ್ 1977)ಯಲ್ಲಿ 'ದಿ ಮರ್ಡರ್ ಆಫ್ ಸೀರಾಳನ್' ಎಂಬ ಪರಿಣಾಮಕಾರಿ ಲೇಖನ ಬರೆದು ಗಮನ ಸೆಳೆದಿದ್ದರು. ಆ ಲೇಖನವೂ ಸೇರಿದಂತೆ ಅವರ 1970ರ ದಶಕದಲ್ಲಿ ಅವರು ಬರೆದ ಬರಹಗಳ ಸಂಗ್ರಹವನ್ನು 'ಹಾಂಟೆಡ್ ಬೈ ಫೈರ್' ಎಂಬ ಹೆಸರಿನಲ್ಲಿ ಲೆಫ್ಟ್‌ವರ್ಡ್ ಪ್ರಕಟ ಮಾಡಿದೆ. ಆ ನಾಟಕ ಪ್ರದರ್ಶನದ ದಿನ ಆ ಪುಸ್ತಕ ಸಂಪಾದಿಸಿದ್ದ ವಿ.ಗೀತಾ ಮಾತನಾಡಿ ಮೈಥಿಲಿ ಶಿವರಾಮನ್ ಬರೆದ ಲೇಖನವೇ ನಾಟಕದ ಮುಖ್ಯ ವಸ್ತು ಎಂದು ಹೇಳಿದ್ದರು.

ಈಗ ಸೀರಾಳನ್ ತಾಯಿ ಬಾಗ್ಗಿಯಂ ದುರೈಸ್ವಾಮಿ 30 ವರ್ಷಗಳ ಕಾಲ ನಡೆಸಿದ ಕಾನೂನು ಹೋರಾಟದ ಕಡೆ ಗಮನ ಹರಿಸೋಣ. ಪೊನ್ನೇರಿ ಅನ್ನೋದು ಉತ್ತರ ಆರ್ಕಾಟ್‌ನ ಒಂದು ಹಳ್ಳಿ. ಕೃಷಿ ಕಾರ್ಮಿಕರು 1976ರಲ್ಲಿ ತಮಿಳು ನಾಡು ಸರಕಾರ ಘೋಷಿಸಿದ್ದ ಕನಿಷ್ಠ ಕೂಲಿಗಾಗಿ ಪ್ರತಿಭಟನೆ ಮಾಡಿದರು. ಅವರ ನೇತೃತ್ವ ವಹಿಸಿದ್ದು ಸೀರಾಳನ್. ಆಗ ಅವನಿಗೆ ಇಪ್ಪತ್ತು ವರ್ಷ ಕೂಡಾ ಆಗಿರಲಿಲ್ಲ. ಭೂಮಾಲೀಕರ ಮಾತು ಕೇಳಿ ಪೊಲೀಸರು ಅವನನ್ನು ಬಂಧಿಸಿ ಚಿತ್ರಹಿಂಸೆ ನೀಡಿದರು. ಎತ್ತುಗಳ ಕತ್ತಿಗೆ ಹಾಕುವ ನೊಗವನ್ನು ಅವನ ಕತ್ತಿನ ಮೇಲಿಟ್ಟು ಪೊಲೀಸರು ದಡಮ್ಮ–ದುಡಿಕೆ (ಸೀ–ಸಾ) ಆಡಿದ್ದರು. ಹಿಂಸೆಯಿಂದ ತೀವ್ರವಾಗಿ ಬಳಲಿದ್ದರೂ ಪೊಲೀಸರು ಅವನಿಗೆ ವೈದ್ಯಕೀಯ ನೆರವು ನೀಡಲಿಲ್ಲ. ಕೊನೆಗೆ 1977ರ ಜನವರಿ 11ರಂದು ಸೀರಾಳನ್ ಪ್ರಾಣ ಬಿಟ್ಟ.

ಪೊಲೀಸರು ಹೊಸ ಕತೆ ಕಟ್ಟಿದರು. ಅವನೊಬ್ಬ ನಕ್ಸಲ್. ಪೊಲೀಸರು ಅವನನ್ನು ಬಂಧಿಸಲು ಹೋದಾಗ ಅವರ ಮೇಲೇ ಅವನು ದಾಳಿ ಮಾಡಿದ. ಹಾಗಾಗಿ ಪೊಲೀಸರು ತಮ್ಮ ಆತ್ಮರಕ್ಷಣೆಗಾಗಿ ಅವನನ್ನು ಕೊಲ್ಲಬೇಕಾಯಿತು. ಪ್ರಕರಣದ ತನಿಖೆ ನಡೆಸಿದ್ದ ತಿರುಪತ್ತೂರು ಉಪವಿಭಾಗಾಧಿಕಾರಿ ಪೊಲೀಸರ ದೌರ್ಜನ್ಯವನ್ನು ತೀವ್ರವಾಗಿ ಖಂಡಿಸಿದ್ದರು. ಕಾಶಿನಾಥನ್, ರಾಮಸ್ವಾಮಿ ಹಾಗೂ ಶಿವಲಿಂಗಂ ಎಂಬ ಮೂರು ಜನ ಪೊಲೀಸ್ ಪೇದೆಗಳು ಅವನಿಗೆ ಚಿತ್ರಹಿಂಸೆ ನೀಡಿ ಕೊಂದರು. ಆಮೇಲೆ ಪ್ರಕರಣವನ್ನು ಮುಚ್ಚಿಡಲು ಪ್ರಯತ್ನಪಟ್ಟರು. ಹಾಗಾಗಿ ಆ ಮೂವರು ಹಾಗೂ ಇಂತಹ ಘಟನೆ ನಡೆಯಲು ಅವಕಾಶ ಮಾಡಿಕೊಟ್ಟ ಇನ್ಸ್‌ಪೆಕ್ಟರ್ ಹಾಗೂ ಜಿಲ್ಲಾ ವರಿಷ್ಠಾಧಿಕಾರಿಗಳ ವಿರುದ್ಧ ತಕ್ಕ ಕ್ರಮ ಆಗಬೇಕು ಎಂದು ವರದಿ ಕೊಟ್ಟರು. 1977ರ ಫೆಬ್ರವರಿ 6ರಂದು ಸಲ್ಲಿಸಿದ್ದ ಈ ವರದಿ ಆಧಾರದಲ್ಲಿ ಯಾರ ಮೇಲೂ ಯಾವ ಕ್ರಮವೂ ಆಗಲಿಲ್ಲ. ಆ ನಂತರ ಕಂದಾಯ ಮಂಡಳಿ ಸದಸ್ಯರಾಗಿದ್ದ ಎಸ್.ಪಿ.ಶ್ರೀನಿವಾಸನ್ ಎಂಬ ಐಎಎಸ್ ಅಧಿಕಾರಿಗೆ ಈ ಪ್ರಕರಣದ ತನಿಖೆ ಜವಾಬ್ದಾರಿ ವಹಿಸಲಾಯ್ತು. ಅವರು ಕೂಡಾ ತಮ್ಮ ವರದಿಯಲ್ಲಿ (1977ರ ಮೇ) ಉಪವಿಭಾಗಾಧಿಕಾರಿ ಹೇಳಿದ್ದ ಅಂಶಗಳನ್ನೇ ಎತ್ತಿ ಹಿಡಿದರು. ಪೊಲೀಸರ ವಿರುದ್ಧ ಕಾನೂನು ಕ್ರಮ ಆಗಬೇಕು ಎಂದು ಶಿಫಾರಸು ಮಾಡಿದರು. ವೆಲ್ಲೂರು ಸೆಷನ್ ಕೋರ್ಟ್‌ನಲ್ಲಿ ಪ್ರಕರಣದ ವಿಚಾರಣೆ ನಡೆಯಿತು. ಆದರೆ ಪೊಲೀಸರು ಆರೋಪಗಳಿಂದ ಖುಲಾಸೆ ಆದರು. ಅವರು ಆತ್ಮ ರಕ್ಷಣೆಗಾಗಿ ಹಾಗೆ ಮಾಡಿದ್ದರು ಎಂಬ ವಾದವನ್ನು ಜಡ್ಜ್ ಒಪ್ಪಿದ್ದರು. ಸೀರಾಳನ್ ಅವರ ಅಮ್ಮ ಬಾಗ್ಗಿಯಮ್ ಪುನರ್ ಪರಿಶೀಲನಾ ಅರ್ಜಿ ಸಲ್ಲಿಸಿದರು. ಆದರೆ ಅದೂ ವಜಾ ಆಯಿತು.

ಅಷ್ಟಕ್ಕೆ ಬಾಗ್ಗಿಯಮ್ ಸುಮ್ಮನಾಗಲಿಲ್ಲ. 1984ರಲ್ಲಿ ಎರಡನೇ ಪ್ರಕರಣ ದಾಖಲಿಸಿ ಪೊಲೀಸ್ ಸುಪರ್ದಿಯಲ್ಲಿ ಸಾವು ಆಗಿರುವ ಕಾರಣ ಪರಿಹಾರ ಬೇಕು ಎಂದು ಕೇಳಿದರು. ಆ ಅರ್ಜಿ ಮತ್ತು ಹತ್ತು ವರ್ಷಗಳ ನಂತರ ಅಂದರೆ 1994ರಲ್ಲಿ ವಿಚಾರಣೆಗೆ ಬಂತು. ನ್ಯಾಯಮೂರ್ತಿ ಪಿ.ಎಸ್.ಮಿಶ್ರಾ ವಾದವನ್ನೆಲ್ಲಾ ಕೇಳಿ ಕ್ರಿಮಿನಲ್ ದಾವೆ

ಪುಟ 15 ಕ್ಕೆ

JANASHAKTHI KANNADA VARA PATRIKE: Printed, Published by **U. BASAVARAJ**, No. 37/a, 8th Cross, EMS Bhavan, Mahalakshmi Layout, Bangalore 560086, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027 Editor : **NITYANANDASWAMI**